ಸಮೃದ್ಧ ಪ್ರಕೃತಿ ಸಂಪತ್ತಿ ... ಆಕರ್ಷಿತವಾದ ಈಸ್ಟ್ ಇಂಡಿಯಾ ಕಂಪನಿಯು ಈಶಾನ್ಯ ಪ್ರದೇಶದಲ್ಲಿ ತನ್ನ ವ್ಯಾಪಾರ ಸಂಬಂಧವನ್ನು

ವರುಣ ಇಲ್ಲ.

ಪ್ರತ್ಯೇಕ ಆದಿವಾಸಿ ರಾಜ್ಯಗಳ ರಚನೆ ಎರಡು ರೀತಿಯ ಪರಿಣಾಮವುಂಟು

ಅಶಾಂತಿಯ ನೆಲವೀಡಾಗಿ ಮಾಡಿವೆ. ಖಾಸಿ ಗಾರೋ ಹಾಗೂ ಈಗಿನ ಅರುಣಾಚಲ ಪ್ರದೇಶದ ಆದಿವಾಸಿಗಳು ಮಾತ್ರ ಹೋರಾ

ರಾಜ್ಯಗಳಲ್ಲಿ ... ಸಂಪೂರ್ಣವಾಗಿ ಅಡಗದೆ ಸದಾ ಕುದಿಯುತ್ತಲೇ ಇದೆ.

ಪ್ರಶಸ್ತಿ ರಾಜಕೀಯದ ಬಲೆಯಲ್ಲಿ ವಿಜಾಪುರದ ನೀರು!

ವಿಜಾಪುರ ಮತ್ತು ನೀರು ಕಳೆದ ನಾಲ್ಕು ದಶಕಗಳಿಂದ ಸುದ್ದಿಯಲ್ಲಿದೆ. ನೀರಿಲ್ಲ, ನೀರು ಇದೆ ಆದರೆ ತರುವ ವ್ಯವಸ್ಥೆ ಇಲ್ಲ. ವ್ಯವಸ್ಥೆಯಾಯಿತು ನಗರಕ್ಕೆ ಸಾಲುವಷ್ಟು ನೀರನ್ನು ತರಲು ಸಾಧ್ಯವಾಗಲಿಲ್ಲ. ಅನಂತರ ಅದರ ವ್ಯವಸ್ಥೆಯನ್ನೂ ಮಾಡಿ ಇಂದು ಬಿಜಾಪುರ ನೀರು ಸರಬರಾಜಿನ 2ನೆಯ ಹಂತದ ಕಾರ್ಯವನ್ನು ಪೂರ್ಣಗೊಳಿಸಿ ಕೊಲ್ಹಾರ ಬ್ಯಾರೇಜ್‌ನಿಂದ ನೀರು ತರುವ ಕಾರ್ಯ ಪ್ರಾರಂಭವಾಗಿ ಎರಡು ತಿಂಗಳ ಮೇಲಾಗಿದ್ದರೂ ಇನ್ನೂ ವಾರಕ್ಕೆ ಒಮ್ಮೆ ನೀರು ಬಿಡುವ ಸಂಪ್ರದಾಯಕ್ಕೆ ಮಂಗಳವನ್ನು ಹಾಡುವುದು ಆಗಲೇ ಇಲ್ಲ!

ಅದಕ್ಕೆ ಒಬ್ಬೊಬ್ಬರು ಒಂದೊಂದು ಕಾರಣಗಳನ್ನು ಕೊಡುತ್ತಿದ್ದಾರೆ. ನಗರದ ಬಿಜೆಪಿ ಶಾಸಕರು ಇದರಲ್ಲಿ ರಾಜಕೀಯ ಮಾಡಲಾಗುತ್ತಿದೆ ಎಂದು ದೂರಿದರೆ ಜನತಾದಳದ ನಗರ ಸಭಾಧ್ಯಕ್ಷರು ಕಳಪೆ ಕಾಮಗಾರಿ-ಭ್ರಷ್ಟಾಚಾರದ ಮಾತುಗಳನ್ನಾಡಿ ಸಿಓಡಿ ತನಿಖೆಗೆ ಆಗ್ರಹಿಸಿದ್ದಾರೆ. ಜಲಮಂಡಳಿಯ ಅಧಿಕಾರಿಗಳು ಅದನ್ನು ಅಲ್ಲಗಳೆದು ಬ್ಯಾರೇಜಿನಿಂದ ನಗರಕ್ಕೆ ಸರಬರಾಜು ಆಗುವ ನೀರಿನಲ್ಲಿ ಯಾವ ವ್ಯತ್ಯಯವೂ ಇಲ್ಲ. ಕ್ವಚಿತ್ತಾಗಿ ವಿದ್ಯುತ್‌ನಿಂದಾಗಿ ಸರಬರಾಜಿನ ತೊಂದರೆಯಾಗಿರಬಹುದೇ ಹೊರತು ಬೇರೆ ಕಾರಣಗಳಿಲ್ಲ. ಕಾರ್ಯ ಪ್ರಾರಂಭವಾದಂದಿನಿಂದ 50 ಕಿ.ಮೀ. ಅಂತರದ ಕೊಳವೆ ಮಾರ್ಗದಲ್ಲಿ ಎರಡು ಕಡೆಗೆ ಮಾತ್ರ ಅಲ್ಪ ಪ್ರಮಾಣದ ನೀರು ಸೋರುವಿಕೆಯಾಗಿದೆಯೇ ಹೊರತು, ಉಳಿದ ಕಡೆಗಳಲ್ಲಿಯ ಕೆಲಸಕ್ಕೆ ಹೋಲಿಸಿದರೆ ಅಪರೂಪದ ಕೆಲಸವಾಗಿದೆಯೆನ್ನುತ್ತಾರೆ. ಸಾಮಾನ್ಯವಾಗಿ ಕೊಳವೆ ಮಾರ್ಗವನ್ನು ಪ್ರಾರಂಭಿಸಿದ ತಕ್ಷಣ ಮೊದಲಿನ ಆರೆಂಟು ತಿಂಗಳು ತಲೆನೋವಾಗುವಷ್ಟು ಸೋರಿಕೆ, ತಾಂತ್ರಿಕ ಅಡಚಣೆಗಳೆಲ್ಲ ಬರುವುದು ಸಹಜವಾಗಿದ್ದರೂ ಬಿಜಾಪುರ ನೀರಿನ ಎರಡನೆಯ ಹಂತದ ಕಾರ್ಯದಲ್ಲಿ ಅದು ಕೂಡ ಬಂದಿಲ್ಲವೆನ್ನುತ್ತಾರೆ. ಅದರಂತೆ ಕರ್ನಾಟಕ ವಿದ್ಯುತ್ ಮಂಡಳಿಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ನೀರು ಸರಬರಾಜಿನ ವಿದ್ಯುತ್ ಮಾರ್ಗವನ್ನು ಮುತುವರ್ಜಿಯಿಂದ ನೋಡಲಾಗುತ್ತಿದೆ. ಅರ್ನತ್ರಿಕ ಸ್ಥಗಿತದ ಹೊರತು ವಿದ್ಯುತ್ ಕೊರ್ತದಲ್ಲಿ ಕಡಿತವಾಗಿಲ್ಲವೆಂದು ದಾಖಲೆ ತೋರಿಸುತ್ತಾರೆ. ಹಾಗಾದರೆ ವಿಜಾಪುರ ನೀರು ಸರಬರಾಜಿನ ವ್ಯವಸ್ಥೆಯಲ್ಲಿ ಸುಧಾರಣೆ ಯಾಕೆ ಆಗಲೊಲ್ಲದು ಎಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ.

ನೀರಿನ ಕ್ಷಮತೆ

ವಿಜಾಪುರ ನೀರು ಸರಬರಾಜಿಗೆ ಇಂದು ಮೂರು ವ್ಯವಸ್ಥೆಗಳಿವೆ. ಕೊಲ್ಹಾರ ಬ್ಯಾರೇಜಿನ ಮೊದಲ ಹಂತದ ಕೊಳವೆ ಮಾರ್ಗಗಳಿಂದ ಪ್ರತಿನಿತ್ಯ 24 ಲಕ್ಷ ಗ್ಯಾಲನ್ ನೀರು ಬರುವ ಕ್ಷಮತೆ ಇದ್ದರೆ ಎರಡನೆಯ ಹಂತದ ಮಾರ್ಗದಿಂದ 60 ಲಕ್ಷ ಗ್ಯಾಲನ್ ನೀರು ಹಾಗೂ ಮೊದಲಿನ ಭೂತನಾಳ ಕೆರೆಯಿಂದ 16 ಲಕ್ಷ ಗ್ಯಾಲನ್ ಹೀಗೆ ಸಾಮಾನ್ಯ ಸಂದರ್ಭಗಳಲ್ಲಿ ಪ್ರತಿನಿತ್ಯ ಸುಮಾರು 100 ಲಕ್ಷ ಗ್ಯಾಲನ್ ನೀರು ಸರಬರಾಜು ಆಗುವ ಸಾಮರ್ಥ್ಯವನ್ನು ಹೊಂದಿದೆ. ಇದರಲ್ಲಿ ಭೂತನಾಳ ಕೆರೆ ಇಂದು ಪೂರ್ತಿಯಾಗಿ ಒಣಗಿದೆಯೆಂದರೂ, ತುಂಬಿ ನಿಂತ ಕೊಲ್ಹಾರ ಬ್ಯಾರೇಜಿನಿಂದ 84 ಲಕ್ಷ ಗ್ಯಾಲನ್ ನೀರು ಯಾವ ತೊಂದರೆಯೂ ಇಲ್ಲದೆ ಬರಬೇಕು.

ದಿನಕ್ಕೆ ಎರಡು ಗಂಟೆಯಂತೆ ನೀರು ಬಿಟ್ಟರೂ ವಿಜಾಪುರದ ಜನವಸತಿಗೆ ಇಂದು ಪ್ರತಿನಿತ್ಯ 90ರಿಂದ 100 ಲಕ್ಷ ಗ್ಯಾಲನ್ನಿನ ನೀರಿನ ಅವಶ್ಯಕತೆ ಇದೆ. ವಿದ್ಯುತ್, ಸಣ್ಣ ಪುಟ್ಟ ತಾಂತ್ರಿಕ ತೊಂದರೆಗಳನ್ನು ಗಣನೆಗೆ ತೆಗೆದುಕೊಂಡರೂ 84 ಲಕ್ಷ ಗ್ಯಾಲನ್ನಿನಲ್ಲಿ 50ರಿಂದ 60 ಲಕ್ಷ ಗ್ಯಾಲನ್ ನೀರು ಪ್ರತಿನಿತ್ಯ ವಿಜಾಪುರವನ್ನು ಮುಟ್ಟುವಲ್ಲಿ ಯಾವ ಅಡತಡೆಗಳೂ ಇಲ್ಲ. ಮಳೆಗಾಲದ ವರೆಗೆ ದಿನ ಬಿಟ್ಟು ದಿನ ನೀರು ಬಿಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ ಎಂದು ಹೆಸರು ಹೇಳಲಿಚ್ಛಿಸದ ಸಂಬಂಧಪಟ್ಟ ಅಧಿಕಾರಿಗಳೇ ಹೇಳುತ್ತಾರೆ. ಆದರೂ 8 ದಿನ, 9 ದಿನಕ್ಕೊಮ್ಮೆ ನೀರು ಯಾಕೆ? ಎಂಬುದು ಯಾರಿಗೂ ಅರ್ಥವಾಗಲೊಲ್ಲದು.

ಪ್ರಶಸ್ತಿ ರಾಜಕೀಯ

ವಿಜಾಪುರ ಜನರ ದುರ್ದೈವ. ಯಾರ ಶಾಪವೋ ಏನೋ, ನೀರು ಇಲ್ಲದಾಗಲೂ ಗೋಳಾಡಿದರು. ಇಂದು ನೀರು ಇದ್ದೂ ಗೋಳಾಡುವ ಪರಿಸ್ಥಿತಿ ಬಂದಿದೆ ಎನ್ನುತ್ತಾರೆ ಹಿರಿಯರು. ರೊಚ್ಚಿಗೆದ್ದ ನಾಗರಿಕರು ಇತ್ತೀಚೆಗೆ ನಗರಸಭೆಗೆ ಮುತ್ತಿಗೆ ಹಾಕಿ ಪೀಠೋಪಕರಣ, ವಾಹನಗಳನ್ನು ರಸ್ತೆಗಿಳಿದು ಸುಡುವ ಮಟ್ಟಿಗೂ ಹೋಯಿತು. ಆದರೂ ಪರಿಸ್ಥಿತಿಯಲ್ಲಿ ಸುಧಾರಣೆಯಾಗಲೇ ಇಲ್ಲ.

ಈಗ ಬಂದಿರುವ ದೊಡ್ಡ ಪ್ರಶ್ನೆ ಎಂದರೆ ವಿಜಾಪುರ ನೀರು ಸರಬರಾಜಿನ ಎರಡನೆಯ ಹಂತದ ಕಾರ್ಯ ಪೂರ್ಣತೆಯ ಪ್ರಶಸ್ತಿ ಯಾವ ಪಕ್ಷಕ್ಕೆ ಸಲ್ಲಬೇಕೆಂಬುದೇ ಇಂದಿನ ನೀರು ಸರಬರಾಜಿನಲ್ಲಿಯ ವ್ಯತ್ಯಯಕ್ಕೆ ಕಾರಣವೆಂದು ವಿಜಾಪುರ ನಿವಾಸಿ ರಾಜಕಾರಣಿಗಳೇ ಢಾಣಾಡಂಗುರವಾಗಿ ಮಾತನಾಡುತ್ತಿದ್ದಾರೆ. ವಾಸ್ತವದಲ್ಲಿ ಅದೊಂದು ಪ್ರತಿಷ್ಠೆಯ ಪ್ರಶ್ನೆಯಾಗಬಾರದಿತ್ತೆಂದೂ ಅವರೇ ವ್ಯಥೆಪಡುತ್ತಾರೆ. ವಿಜಾಪುರ ಜಿಲ್ಲೆಯ ವಿಶೇಷವಾಗಿ ನಗರದ ರಾಜಕಾರಣವೂ ಸ್ಪಷ್ಟವಾಗಿಲ್ಲದುದೂ ಅದಕ್ಕೆ ಕಾರಣವಾಗಿರಬೇಕು.

ನಗರ ನೀರು ಸರಬರಾಜಿನ ಎರಡನೆಯ ಹಂತದ ಕಾರ್ಯ ಪ್ರಾರಂಭವಾಗಿ ದಶಕಗಳು ಉರುಳಿದ್ದರೂ ಅದಕ್ಕೆ ವೇಗ ಬಂದುದು ರಮೇಶ ಜಿಗಜಿಣಗಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಎಂಬುದನ್ನು ಯಾರೂ ಒಪ್ಪುತ್ತಾರೆ. ಅವರು ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮನ ಒಲಿಸಿ ಅವರು ಹಣವನ್ನು ಮಂಜೂರು ಮಾಡಿಸಿ ಬಿಡುಗಡೆ ಮಾಡಿಸದಿದ್ದರೆ ಈ ಕೆಲಸ ಇನ್ನುವರೆಗೂ ಮುಗಿಯುತ್ತಿರಲಿಲ್ಲ ಎಂದೂ ಹೇಳಲಾಗುತ್ತದೆ.

ಅದಕ್ಕೆ ಸಮಾನಾಂತರವಾಗಿ ನಗರದ ಬಿಜೆಪಿ ಶಾಸಕರೂ ಒತ್ತಾಯಿಸಿದ್ದು, ಪಟ್ಟು ಹಿಡಿದದ್ದನ್ನೂ ಮರೆಯಲಾಗದು ಎನ್ನುತ್ತಾರೆ. ಈ ಮಧ್ಯೆ ಕಾಂಗ್ರೆಸ್ ಸರ್ಕಾರವಿದ್ದಾಗಲೂ ಈ ಕೆಲಸಕ್ಕೆ ಅತಿ ಮಹತ್ವ ಕೊಡಲಾಗಿತ್ತೆಂದು ಇಂದಿನ ಕಾಂಗ್ರೆಸ್ ಸಂಸದರ ವಾದ. ಇವೆಲ್ಲವುಗಳ ಮಧ್ಯೆ ಇಂದು ಜಿಗಜಿಣಗಿ ಲೋಕಶಕ್ತಿಗೆ ಹೋಗಿದ್ದಾರೆ. ಲೋಕಶಕ್ತಿ-ಬಿಜೆಪಿ ಮೈತ್ರಿಯಾಗಿದೆ. ರಾಜ್ಯದಲ್ಲಿ ಜನತಾದಳ ಅಧಿಕಾರವಿದೆ. ನಗರ ಸಭಾಧ್ಯಕ್ಷರೂ ಜನತಾದಳವರು. ಈಗ ಒಮ್ಮೆಲೆ ಈ ಪ್ರಶಸ್ತಿಯನ್ನು ಲೋಕಶಕ್ತಿ-ಬಿಜೆಪಿಗೆ ಕೊಟ್ಟು ಬಿಡುವುದು ನಗರದ ಜನತಾದಳದ ಅತಿರಥರಿಗೆ ನುಂಗಲಾರದ ತುತ್ತಾಗಿದೆ ಎಂದು ನಗರ ರಾಜಕಾರಣ ತಜ್ಞರು ವಿಶ್ಲೇಷಿಸುತ್ತಾರೆ. ಹೀಗೆ ಗೂಳಿಗಳ ಕಾದಾಟದಲ್ಲಿ ಮರೆಗಳು ಬಡವಾಗುತ್ತಿದ್ದಂತೆ ನಗರ ಜನತೆ ತೊಳಲಾಡುತ್ತಿದ್ದಾರೆ. ತೃಪ್ತರಾಗುತ್ತಿರುವ ಜನತೆ 'ಅವರ ಪ್ಪನ ಮನೆಯ ಗಂಟನ್ನು ಕೊಟ್ಟಂತೆ ಮಾಡುತ್ತಿದ್ದಾರೆ' ಎಂದು ಹೇಳಿಕೊಂಡು ಮತ್ತೆ ಎಂದಿನಂತೆ ಕೊಡಗಳನ್ನು ತೆಗೆದುಕೊಂಡು ಕೊಳವೆ ಬಾವಿಗಳನ್ನು ಹುಡುಕಿಕೊಂಡು ಹೋಗುತ್ತಿರುವ ದೃಶ್ಯ ಸಾಮಾನ್ಯವಾಗಿದೆ.

ಕೃಷ್ಣ ಕೊಲ್ಹಾರ ಕುಲಕರ್ಣಿ

ಐತಿಹಾಸಿಕ ತೀರ್ಪು

ನೀರನ್ನು ಪೂರೈಸಲು ನಗರಸಭೆ ಕರವನ್ನು ಆಕರಣೆ ಮಾಡುವುದರಿಂದ ಅದು ಗ್ರಾಹಕರ ಸೇವೆಯೆಂದು ಪರಿಗಣಿಸಿ ವಿಜಾಪುರ ಜಿಲ್ಲಾ ಗ್ರಾಹಕರ ವೇದಿಕೆಯು ದಿನಾಂಕ ೨೭-೩-೧೯೯೮ರಂದು ಒಂದು ಐತಿಹಾಸಿಕ ತೀರ್ಪು ನೀಡಿ ಪ್ರತಿದಿನ ನೀರನ್ನು ಬಿಡುವ ತನಕ ನಗರಸಭೆಯು ನೀರಿನ ಕರವನ್ನು ಪರಿಷ್ಕೃತ ಮಾಡಲು ಬರುವುದಿಲ್ಲವೆಂದು ತೀರ್ಪು ನೀಡಿ ಒಂದು ಸಾವಿರ ರೂಪಾಯಿ ಅರ್ಜಿ ಖರ್ಚನ್ನು ನಗರಸಭೆಯು ವಾದಿಗಳಿಗೆ ನೀಡಬೇಕೆಂದು ಹೇಳಿದೆ.

ನಗರದ ದರಬಾರಗಲ್ಲಿಯ ಕೆಲವು ಜನ ಜಿಲ್ಲಾ ಗ್ರಾಹಕರ ವೇದಿಕೆಯನ್ನು ಸಂಪರ್ಕಿಸಿ ಕರ್ನಾಟಕದಲ್ಲೆಲ್ಲ ನೀರಿನ ದರವನ್ನು ಪರಿಷ್ಕೃತಗೊಳಿಸಿದಂತೆ ವಿಜಾಪುರ ನಗರದ ನೀರಿನ ದರವನ್ನು ಪರಿಷ್ಕರಿಸಲು ಅವರಿಗೆ ಹಕ್ಕಿಲ್ಲ. ಯಾಕೆಂದರೆ ಅವರು ಪ್ರತಿದಿನ ನೀರನ್ನೇ ಕೊಡುವುದಿಲ್ಲ ಎಂದು ದೂರಿದ್ದರು. ಅವರ ದೂರನ್ನು ಎತ್ತಿಹಿಡಿದು ಜಿಲ್ಲಾ ಗ್ರಾಹಕರ ವೇದಿಕೆಯ ಅಧ್ಯಕ್ಷರಾದ ನಿವೃತ್ತ ನ್ಯಾಯಾಧೀಶರಾದ ಡಾ. ಕೆ.ಆರ್. ಕೊಡಗಾನೂರ ಅವರು ತಮ್ಮ ತ್ರಿಸದಸ್ಯ ಪೀಠದಿಂದ ಮೇಲಿನಂತೆ ತೀರ್ಪು ಕೊಟ್ಟದ್ದಾರೆ. ವಾದಿಗಳ ಪರವಾಗಿ ಆರ್.ಎ. ಕುಲಕರ್ಣಿ ವಕೀಲರೂ ಹಾಗೂ ನಗರ ಸಭೆ ಕಮೀಷನರರ ಪರವಾಗಿ ವಿ.ಎಂ. ಕಟ್ಟಿ ವಕೀಲರೂ ವಾದಿಸಿದ್ದರು.

VI / 8

ಬೋಧಿ ವೃಕ್ಷ

A TIMES OF INDIA GROUP PUBLICATION www.bodhivrukshaspace.com THE SPEAKING TREE ಬೆಂಗಳೂರು । ಶನಿವಾರ । ಸೆಪ್ಟೆಂಬರ್ 17-23, 2016 । 8 ಪುಟ

ಅಂತರಂಗ



ಬ್ರಹ್ಮಾಂಡದೊಳಗಿನ ರಹಸ್ಯವೇನು? > 2



ಮನುಷ್ಯನು ಬ್ರಹ್ಮನ ಭಾಗವೇ ಆಗಿದ್ದಾನೆ. > 3



ಪ್ರಜಾಪತಿಯೇ ವಿಶ್ವಕರ್ಮ > 4



ಶೂರ್ಪನಖಿಯ ಮಹತ್ತರ ಪಾತ್ರ > 5

ನೀರಿನಿಂದ ಈ ಜಗವು ನಿರ್ಮಾಣವಾಗಿದೆ. ವೇದ, ಮಂತ್ರಗಳಲ್ಲಿ ನೀರನ್ನು ಕುರಿತಾಗಿ ಅಪಾರ ಮಂತ್ರಗಳಿವೆ. ಮಗುವಿನ ಬೆಳವಣಿಗೆಗೆ ತಾಯಿಯ ಹಾಲು ಮುಖ್ಯವೆನಿಸುವಂತೆ ಜಗದ ಮೇಲಿನ ಜೀವರಾಶಿಗಳಿಗೆ ಬದುಕಲು ನಿಸರ್ಗ ಕೊಟ್ಟದೇಣಿಗೆಯಾಗಿದೆ. ನೀರಿನ ಅವಲಂಬನೆಯಿಂದ ಜಗತ್ತು ಬದುಕಿದೆ. ಜಗದ ಜೀವರಾಶಿಗಳಿಗೆ ಬದುಕಲು ನೀಡಿದ ಸಂದೇಶ ವಾಹಿನಿಗಳಾಗಿವೆ.

ಜೀವ ಜಗತ್ತಿಗೆ ಜಲಾಧಾರ

ಡಾ. ಕೃಷ್ಣಕೊಲ್ಹಾರ ಕುಲಕರ್ಣಿ



ನೀರಿನಿಂದ ಈ ಜಗತ್ತು ನಿರ್ಮಾಣವಾಗಿದೆ' ಎಂದು 'ಶತಪಥ ಬ್ರಾಹ್ಮಣ'ದಲ್ಲಿ ಹೇಳಿದೆ. ನೀರು ಜೀವನ, ಆದುವೆ ಸುಖದ ಮೂಲವೂ ಹೌದು. ವೇದ ಮಂತ್ರಗಳಲ್ಲಿ ನೀರನ್ನು ಕುರಿತಾದ ಹಲವಾರು ಪ್ರಾರ್ಥನೆಯ ಗೀತೆಗಳಿವೆ. ಋಗ್ವೇದದಲ್ಲಿ ಸಿಂಧುದ್ವೀಪ ಋಷಿಯ ಮಂತ್ರವಿದೆ. ಆಕ್ಕೆ 'ಆಪ್ ಸೂಕ್ತ' ಎಂದೇ ಹೆಸರು. ಆದರಲ್ಲಿಯ ಕೆಲವು ಸಾಲುಗಳನ್ನು ಕನ್ನಡದಲ್ಲಿ ಹೀಗೆ ಹೇಳಬಹುದು.

'ಆನಂದವಿವ ಓ ಆಪೋಂದೇವತೆಗಳೇ।
ನೀವು ಮಳೆಯನು ಸುರಿಸಿ, ಅನ್ನವೃದ್ಧಿಯ ಮಾಡಿ ॥ ನಮಗೆ ತಿಳಿಗಣ್ಣಕ್ಕು ಕಾಪಾಡಿರಿ।
ಮಗುವ ಬೆಳೆಸಲು ಎದೆಯ ಹಾಲಿವ ತಾಯಿಯಂತೆ' ॥

ಮಗು ಬೆಳೆಯಲು ತಾಯಿಯ ಹಾಲು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ, ಜೀವ ಬದುಕಲು, ಬೆಳೆಯಲು ನೀರು ಮುಖ್ಯ ಎಂಬ ಕಲ್ಪನೆ ನಮ್ಮ ಋಷಿ ಮುನಿಗಳಿಗೆ ಸಾವಿರಾರು ವರುಷಗಳ ಹಿಂದೆಯೇ ಇತ್ತು ಎಂಬುದು ಬಹು ಮುಖ್ಯವಾಗಿದೆ. ಭಾರತೀಯರಿಗೆ ನೀರು, ಶಿವನ ತಲೆಯ ಮೇಲಿಂದ, ವಿಷ್ಣುವಿನ ಪಾದಗಳಿಂದ ಹರಿವ ಗಂಗೆ. ಹಲವಾರು ಭಿನ್ನ ಹೆಸರುಗಳ ನದಿಗಳು ಭಾರತದಲ್ಲಿ ಹರಿದಿವೆ. ಅವುಗಳೆಲ್ಲವೂ ಗಂಗೆಯೇ. ಒಂದು ಹನಿ ನೀರು 'ಗಂಗೆ', ಅವಳನ್ನು ತನ್ನ ತಪಸ್ಸಿನ ಮೂಲಕ ಭೂಮಿಗೆ ತಂದ ಭಗೀರಥನಿಂದ ಭಾಗೀರಥಿಯಾದಳು.



ಹಿರಿಯೊಳೆ, ಹೊಳೆಗಂಗೆ ಇತ್ಯಾದಿ ಹೆಸರುಗಳಲ್ಲಿ ನಮ್ಮ ಪಾಪದ ಕಲ್ಪಶಗಳನ್ನೆಲ್ಲ ತೊಳೆವ ದೈವವಾದಳು. ನೀರನ್ನು ಹಿಡಿದು ಸಂಗ್ರಹಿಸಿದಷ್ಟು ಮಾನವನಿಗೆ ಸುಖದ ಮೂಲವಾಯಿತು. ಆಪ್ ಸೂಕ್ತಿಯಲ್ಲಿ ಮುಂದುವರಿದು ಋಷಿಗಳು ಹೇಳುತ್ತಾರೆ.

ನಿಮ್ಮೊಳಿಹ ರಸವೆಮಗೆ ದಯಪಾಲಿಸಿ।
ಸರ್ವ ಜೀವರ ಪಾಪ ಕಳೆದು ಸಲಹುವ ರಸವ ॥
ನಿಮ್ಮಿಂದ ಪಡೆಯಿ ಶರಣಾಗಿಯವೆವು।
ಗೈದ ರುಜೆಗಳನ್ನು ಪರಿಹರಿಸಿರಿ।
ರೋಗ ರುಜೆಗಳನ್ನು ಪರಿಹರಿಸಿರಿ।
ನಮ್ಮ ಮೊಮ್ಮಕ್ಕಳೊಂದಿಗೆ ನಮ್ಮದಿಯೊಳಾಡಿ।
ಸುಖಿಸಿ ಬಾಳುವ ಅನುಗ್ರಹ ಹೋರಿರಿ ॥

ಇತ್ಯಾದಿಯಾಗಿ, ನಮ್ಮ ಪಾಪಗಳನ್ನು ಕಳೆದು ನಮ್ಮನ್ನು ದೀರ್ಘಾಯುಗಳನ್ನಾಗಿ ಮಾಡಲು ಕೋರಿದ್ದಾರೆ. ನದಿಗಳು, ಹಳ್ಳ-ಕೊಳ್ಳಗಳು, ಜಗದ ಮೇಲಿನ ಜೀವರಾಶಿಗಳಿಗೆ ಬದುಕಲು ನಿಸರ್ಗ ಕೊಟ್ಟ ದೇಣಿಗೆಯಾಗಿದೆ. ನೀರಿನ ಅವಲಂಬನೆಯಿಂದ ಜಗತ್ತು ಬದುಕಿದೆ. ನದಿಗಳು ಜಗದ ಜೀವರಾಶಿಗಳಿಗೆ ಬದುಕಲು ನೀಡಿದ ಸಂದೇಶ ವಾಹಿನಿಗಳು. ಸಂಸ್ಕೃತಿಯ ಪ್ರತಿಬಿಂಬಗಳು. ಹರಿದು ಬರುವ ಅಪಾರ ಜಲರಾಶಿಯು ಫಲವತ್ತಾದ ಭೂಮಿಯನ್ನು ನಿರ್ಮಿಸುತ್ತದೆ. ಮನುಷ್ಯನ ಪ್ರಗತಿಯ ಏಣಿಯಾಗುತ್ತದೆ. ಅಂತೆಯೇ ಜೀವಿಗಳಲ್ಲಿ ಬುದ್ಧಿಜೀವಿಯಾದ ಮಾನವನ ಸಮೂಹ ವಸತಿಗೆ ಹರಿವ ನೀರಿನ ತೀರ, ತೊಗು ತೊಟ್ಟಿಲಾಯಿತು. ವಿಶ್ವದಲ್ಲಿ ನಾಗರಿಕತೆ ಪ್ರಾರಂಭವಾದದ್ದು ನದಿಗಳ ದಂಡೆಯ ಮೇಲೆ ಎಂಬುದನ್ನು ಚರಿತ್ರೆ ಹೇಳುತ್ತದೆ.

ನದಿಗಳಿಂದ ಕಲಿಕೆ

ಮನುಷ್ಯನು ತನ್ನ ಜೀವಗತಿಯನ್ನು ಹೇಗೆ ಬದಲಾಯಿಸಬಹುದು ಮತ್ತು ಅದನ್ನು ಪ್ರಗತಿಯತ್ತ ಹೇಗೆ ಕೊಂಡೊಯ್ಯಬಹುದು ಎಂಬುದನ್ನು ನದಿಗಳಿಂದಲೆ ಕಲಿತನು. ತನ್ನ ಪ್ರಗತಿಗಾಗಿ ನದಿಗಳನ್ನು ಬಳಸಿಕೊಂಡನು. ತನ್ನ ಆವಶ್ಯಕತೆಗೆ ತಕ್ಕಷ್ಟು ಅನುವಾಗುವಂತೆ ನೀರನ್ನು-ನದಿಗಳನ್ನು ಹೇಗೆ ಬೇಕೊ ಹಾಗೆ ಬಳಸಿಕೊಳ್ಳಲು ಕಲಿತುಕೊಂಡನು.

ಭಾಕತದಲ್ಲಿ ಅನೇಕ ನದಿಗಳಿವೆ. ಒಂದೊಂದಕ್ಕೂ ತನ್ನದೇ ಆದ ಕಥೆ ಉಪಕಥೆಗಳಿವೆ. ಕರ್ನಾಟಕವೂ ಅದಕ್ಕೆ ಹೊರತಾಗಿಲ್ಲ. ಕರ್ನಾಟಕದ ಗಡಿಗಳನ್ನು ಗುರುತಿಸುವಾಗ ಸಾವಿರಕ್ಕೂ ಅಧಿಕ ವರುಷಗಳ ಹಿಂದೆ ನೃಪತುಂಗ ರಾಜನು ತನ್ನ ಕವಿರಾಜ ಮಾರ್ಗದಲ್ಲಿ, 'ಕಾವೇರಿಯಿಂದ ಮಾ ಗೋದಾವರಿ ವರೆಗಿರ್ದ' ಎಂಬುದಾಗಿ ಕಾವೇರಿ ಗೋದಾವರಿ ನದಿಗಳ ಮಧ್ಯದ ನಾಡು 'ಕನ್ನಡ ನಾಡು' ಎಂದು ಹೇಳಿದನು. ಅನಂತರದ ದಿನಗಳಲ್ಲಿ ಹರಿದು ಹಂಚಿಹೋದ ಕನ್ನಡ ನಾಡು ಒಂದಾಗುವ ದಿನಗಳಲ್ಲಿ

'ಪಾವನೆಯರಾ ಕೃಷ್ಣೆ ಭೀಮೆಯರ
ತಾಯ್ತಾಡು
ಕಾವೇರಿ ಗೋದೆಯರು ಮೈದಳೆವ
ನಲುನಾಡು'

ಎಂಬುದಾಗಿ ಕನ್ನಡ ನಾಡಿನ ಉದಯಗೀತೆಯನ್ನು ಹಾಡಿದ ಹುಯಿಲಗೋಳ ನಾರಾಯಣ ರಾಯರು ಕನ್ನಡ ನಾಡನ್ನು ಬಣ್ಣಿಸಿದ್ದಾರೆ.



ಜೀವಜಲ

ನೀರಿನ ಸಂಗ್ರಹಣೆ

ಭಾರತದ ಇತಿಹಾಸದಲ್ಲಿ ನೀರು ಸಂಗ್ರಹಣೆ ನಿಯತಕಾಲಿಕವಾಗಿ ನಡೆದು ಬಂದಿದೆ. 5000 ವರುಷಗಳ ಹಿಂದಿನ ಸಿಂಧೂ ಕೊಳ್ಳದ ನಾಗರೀಕತೆಯ ಕಾಲದಿಂದಲೂ ನೀರಿನ ಸಂಗ್ರಹಣೆಯ ವಿವಿಧ ಉಲ್ಲೇಖಗಳು ಅಂದಿನ ಪ್ರದೇಶ ಮತ್ತು ಭೂ ರಚನೆಯನ್ನು ಅವಲಂಬಿಸಿ ದೊರೆಯುತ್ತವೆ.

ಸಿಂಧೂ ಕೊಳ್ಳದ ನಾಗರೀಕತೆಯಲ್ಲಿ ನೀರಿನ ಆತ್ಯುತ್ತಮ ಸಂಗ್ರಹಣೆ ಇತ್ತು. ಒಳಚರಂಡಿ ಮತ್ತು ಬಾವಿಗಳು ಆದರ ಪ್ರತಿಷ್ಠಿತ ಲಕ್ಷಣಗಳಾಗಿದ್ದುವು.

ಕ್ರಿಸ್ತ ಪೂರ್ವ ಮೂರು ಸಾವಿರ ವರುಷಗಳ ಹಿಂದಿನ ಹರಪ್ಪನ್ ಪಟ್ಟಣದ ಧೋಲಾವೀರವು ಇಳಜಾರಿನಲ್ಲಿ ಧುಮ್ಮಿಕ್ಕುವ ಎರಡು ನೀರಿನ ಹರಿವುಗಳ ಮಧ್ಯವಿತ್ತು. ಪಟ್ಟಣವು ಆಲ್ಲಿಂದ ನೀರನ್ನು ಪಡೆದು ಉಪಯೋಗಿಸುತ್ತಿತ್ತು.

ನೀರು ಮತ್ತು ನೀರಾವರಿ ಪ್ರದೇಶಕ್ಕೆ ಹಾನಿಯುಂಟು ಮಾಡುವುದೆಂದರೆ ಅದೊಂದು ಆಪರಾಧವೆಂದು ಮನುಸ್ಮೃತಿಯಲ್ಲಿ ಹೇಳಿದೆ. ನೈಸರ್ಗಿಕವಾಗಿ ಹರಿಯುವ ನೀರು ಆಥವಾ ಬೇರೆ ಮೂಲಗಳಿಂದ ಬರುವ ನೀರಿನಿಂದ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಅರ್ಥಶಾಸ್ತ್ರದಲ್ಲಿ ಹೇಳಿದೆ.

ಬ್ರಿಟಿಷ್ ಪೂರ್ವಯುಗದಲ್ಲೇ ನೀರನ್ನು ಕಾಲುವೆಗಳ ಮುಖಾಂತರ ಹರಿಸಿದ ನೀರಾವರಿ ತಂತ್ರಜ್ಞಾನವು ಅಂದಿನ ದಿನಗಳ ಜನರ ಚತುರತೆಯನ್ನು, ನೀರಾವರಿ ಅಭಿವೃದ್ಧಿಯನ್ನು ಎತ್ತಿ ತೋರಿಸುತ್ತದೆ. ಎಂಟನೆಯ ಶತಮಾನದ ಹೊತ್ತಿಗೇ ಕಟ್ಟಿಗೆಗಳನ್ನು ಕಟ್ಟಿ ನದಿಯ ನೀರನ್ನು ಜನರು ಹಿಡಿಯಲು ಪ್ರಾರಂಭಿಸಿದ್ದರು.

ಚೋಳ ರಾಜರು 125 ಮೀಟರು ಉದ್ದದ ಮಣ್ಣಿನ ಕಟ್ಟೆಯನ್ನು ಕಟ್ಟಿದ್ದರು. ಅದು ನದಿಯ ಪಾತ್ರವನ್ನೇ ಹಿಡಿದಿಟ್ಟಿತ್ತು. ಅದರೂ ಮಹಾಪೂರ ಬಂದಾಗ ನೀರನ್ನು ನಿಯಂತ್ರಿಸುವ ವ್ಯವಸ್ಥೆಯ ಆಗತ್ಯವಿತ್ತು. ವಿಜಯನಗರದ ರಾಜರು ಚೋಳರನ್ನು ಅನುಸರಿಸಿದ್ದರು. ಕ್ರಿ. ಶ. 1390-1450ರ ಮಧ್ಯ ಬಹುದೊಡ್ಡ ಆಣೆಕಟ್ಟನ್ನು ಕಟ್ಟಿದ್ದನ್ನು ಕಾಣುತ್ತೇವೆ. ಆದಕ್ಕೂ ಮೊದಲಿನ ರಾಜರು ಕೂಡ ಆಣೆಕಟ್ಟನ್ನು ಕಟ್ಟುವ ಆತುರತೆಯನ್ನು ತೋರಿಸಿದ ಉಲ್ಲೇಖ ಕುಟುಗಣಿ ತಾಮ್ರ ಶಾಸನದಲ್ಲಿದ್ದ. ಆದರಲ್ಲಿ ಕದಂಬ ರಾಜ ರವಿವರ್ಮನು ಮೈಸೂರು ಹತ್ತಿರದ ಹಳ್ಳಗಳಲ್ಲಿ ಕೆರೆಕಟ್ಟೆಗಳನ್ನು ಕಟ್ಟಲು ಆದೇಶಿಸಿದ್ದಾನೆ.

ಭಗವಂತನ ಸನ್ನಿಧಾನ

'ಭಗವಂತ ಸರ್ವವ್ಯಾಪ್ತ. ಎಲ್ಲ ಕಡೆಗೂ ಇವ್ಯಾನೆ. ಆದರಲ್ಲೂ ನೀರಿನಲ್ಲಿ ಭಗವಂತನ ವಿಶೇಷ ಸನ್ನಿಧಾನವಿದೆ' ಎಂದು ಶ್ರೀ ಶ್ರೀ ಸತ್ಯಾತೀರ್ಥರು ಬಹು ಸುಂದರವಾಗಿ ನಿರೂಪಿಸಿದ್ದಾರೆ.

>ಪುಟ 2

ಇತಿಹಾಸದ ಪುಟಗಳಲ್ಲಿ



ಹರಿಯಾಣದಲ್ಲಿಯ ಸೂರಜಕುಂಡ ಆಥವಾ ಸೂರ್ಯಕೆರೆ, ಹರಿವ ಮಳೆ ನೀರ ಸಂಗ್ರಹಕ್ಕೆ ಮೆಟ್ಟಿಲುಗಳುಳ್ಳ ಕೆರೆಯನ್ನು ಸೂರಜಪಾಲ ರಾಜನು ಕಟ್ಟಿಸಿದ್ದನು. ಮುಂದಿನ ದಿನಗಳಲ್ಲಿ ಅದನ್ನೇ ತುಘಲಕ್ ವಂಶದ ಫಿರೋಜಷಾನು ವುನರ್ ನಿರ್ಮಿಸಿದನು. ಆತಮ ಹೌಜ-ಇ-ಆಲಾಲನ್ನು ಜೀರ್ಣೋದ್ಧಾರ ಮಾಡಿದನು. ಆದುವೇ ಅನಂತರದ ದಿನಗಳಲ್ಲಿ 'ಹೌಜ್ ಖಾಸ್' ಎನಿಸಿತು. ದೆಹಲಿ ನಗರಕ್ಕೆ ಅಲ್ಲಿಂದಲೇ ನೀರು ಸರಬರಾಜು ಆಗುತ್ತಿತ್ತು. ಬಜಾಪುರದ ಆದಿಲ್‌ಷಾಗಳು ತಮ್ಮ ಅಭಯಾಂತ್ರಿಕ ಕುಶಲತೆಯಲ್ಲಿ ವ್ಯಾಪಹಾರಿಕ ಮತ್ತು ಸೌಂದರ್ಯ ಪ್ರಜ್ಞೆ ಎರಡನ್ನೂ ಮೆರೆದಿದ್ದರು. ಅರಮನೆಗಳ ಶುತ್ತ ನೀರಿನ ಕಾಲುವೆಗಳನ್ನು ಆಗದು ಆದರಲ್ಲಿ ಕಾರಂಜಿಗಳನ್ನು ನಿರ್ಮಿಸಿದ್ದರು. ಆಂಗಳಗಳಲ್ಲಿ ಹಣ್ಣಿನ ಮತ್ತು ಹೂದೋಟಗಳನ್ನು ಬೆಳೆಸಿ ಬೇಸಿಗೆಯಲ್ಲಿ ಆರಮನೆಯು ತಂಪಾಗಿರುವಂತೆ ನೋಡಿಕೊಳ್ಳುತ್ತಿದರು. ನಲ್ಲಿಗಳ ಮೂಲಕ ನಗರಕ್ಕೆ ನೀರನ್ನು ಸರಬರಾಜು ಮಾಡಿದರು.

ಜೀವ ಜಗತ್ತಿಗೆ ಜಲಾಧಾರ

ಮೊದಲ ಪುಟದಿಂದ

ಭಗವಂತ ನೀರಿನಲ್ಲಿದ್ದಾನೆ ಎಂದಾಕ್ಷಣ ಆತನು ನೀರಿನಲ್ಲಿ ಮುಳುಗಿದ್ದಾನೆ ಎಂದಲ್ಲ, ನೀರಿನಲ್ಲಿ ನಾನಿದ್ದು ಪ್ರಪಂಚದ ಎಲ್ಲ ಕೆಲಸಗಳನ್ನು ಮಾಡಿಸುತ್ತೇನೆ ಎಂದು ತಾನೇ ಶ್ರೀಮದ್ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ನೀರಿಗೆ ರಸವೆಂಬ ಗುಣವನ್ನು ಕೊಟ್ಟು, ರಸವನ್ನೇ ನೀರಿನ ರೂಪದಲ್ಲಿ ನೀಡಿದ್ದಾನೆ. ಆದೊಂದು ಉತ್ತಮವಾದ ಗುಣ. ಜಗತ್ತಿನ ಪ್ರತಿಯೊಂದು ಚೈತನ್ಯಕ್ಕೂ ನೀರು ಕಾರಣವಾಗಿದೆ. ಅಂತೆಯೇ ನೀರಿನಿಂದ ಜಗತ್ತು ಎನ್ನಲಾಯಿತು.



ನೀರಿನ ಪೂಜೆ ಹೇಗೆ ? ನೀರಿಗೆ ಅಭಿಷೇಕ, ಪಂಚಾಮೃತ ಮಾಡಲು ಸಾಧ್ಯವೆ ? ಸಾಧ್ಯ. ನೀರನ್ನು ಕಳಶದಲ್ಲಿಟ್ಟು ಭಗವಂತನ ಸನ್ನಿಧಾನವನ್ನು ಕಲ್ಪಿಸಿ ಪೂಜೆ ಮಾಡಿ ಆ ನೀರನ್ನು ಎಲ್ಲೆಡೆ ಪ್ರೋಕ್ಷಣೆ ಮಾಡಿ. ಅದು ಪ್ರದೇಶದ ಶುದ್ಧೀಕರಣದೊಂದಿಗೆ ನಮ್ಮೆಲ್ಲರ ಉದ್ಧರಕ್ಕಾಗಿ. ನೀರು ನಮ್ಮ ದೇಹವನ್ನು ಶುಚಿಗೊಳಿಸುತ್ತದೆ. ಅದರಲ್ಲಿ ಗಂಗೆ, ಯಮುನೆ, ಸಿಂಧು, ಕಾವೇರಿ ಕೃಷ್ಣೆ ಗೋದೆಯರ ಅನುಸಂಧಾನದೊಂದಿಗೆ ಭಗವಂತನ ಸ್ಮರಣೆಯನ್ನು ಮಾಡುತ್ತ ಸ್ನಾನವನ್ನು ಮಾಡಿದರೆ ದೇಹ ಶುದ್ಧಿಯೊಂದಿಗೆ ಮನಸ್ಸೂ ಶುದ್ಧಿಯಾಗುತ್ತದೆ. ಅಂತೆಯೇ ಸ್ನಾನ ಪಾತ್ರೆಯನ್ನು ನಮ್ಮ ಹಿರಿಯರು 'ಗಂಗಾಳ' ಎಂದರು.

ದೇವರ ಪೂಜೆಗೆ ನೀರು, ಅಭಿಷೇಕಕ್ಕೆ ನೀರು, ನಂತರದ ನೈವೇದ್ಯಕ್ಕೆ ನೀರಿನ ಪ್ರೋಕ್ಷಣೆ ಆ ನೈವೇದ್ಯದ ಉತ್ಪಾದನೆಯಲ್ಲಿ ಅದನ್ನು ಬೆಳೆಯುವುದರಿಂದ ಹಿಡಿದು ಬೇಯಿಸುವವರೆಗೆ ನೀರು ಮೂಲ. ಯಾವುದೊಂದು ಕಾರ್ಯದ ಸಂಕಲ್ಪಕ್ಕೂ ನೀರೇ ಬೇಕು. ಕೊನೆಯಲ್ಲಿ ಹಿರಿಯರ ಆತ್ಮಶಾಂತಿಗಾಗಿ ಶ್ರದ್ಧಾಂಜಲಿ ಅರ್ಪಿಸಲು ಎಳ್ಳಿನೊಂದಿಗೆ ನೀರು ಬೇಕು.

ನೀರಿನಲ್ಲಿ ಔಷಧಿಯ ಗುಣವನ್ನೂ ಭಗವಂತ ದಯಪಾಲಿಸಿದ್ದಾನೆ. ನೀರು ಚೈತನ್ಯಕ್ಕೂ ಕಾರಣ. ನೀರಿನ ಮೂಲಕ ನಮ್ಮ ತಾಪ ಪರಿಹಾರವಲ್ಲದೆ ಆದೇ ನೀರಿನ ಪ್ರೋಕ್ಷಣೆಯ ವಿವರ ಮತ್ತು ಶಾಪಗಳೂ ಉಂಟು. ನೀರಿನೊಳಗಿನ ಭಗವಂತನಿಂದ ಆ ಕಾರ್ಯಗಳು ನಡೆಯುತ್ತವೆ ಎಂಬುದೇ ಶಾಸ್ತ್ರ. ಆದ್ದರಿಂದಲೇ ಪುರಂದರದಾಸರು 'ಒಂದು ದಳ ತುಳಸಿ ಬಿಂದು ಗಂಗೋದಕದಿಂದ' ದೇವರನ್ನು ಪೂಜಿಸಿದರೆ ಅತನು ನಮ್ಮ ಮನೆಯಲ್ಲೇ ಬಂದು ಇರುತ್ತಾನೆ ಎಂದಿದ್ದಾರೆ. ಅದನ್ನು ಉಪಯೋಗಿಸುವುದರಲ್ಲಿ ನಮ್ಮ ಬುದ್ಧಿ ಶಕ್ತಿ ಬೇಕು ತಾನೆ.

ಆದರೆ ಇಂದು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಹರಿಯುವ ಪ್ರತಿಯೊಂದು ನದಿಗಳೂ ಒಂದಿಲ್ಲೊಂದು ವಿವಾದಗಳಲ್ಲಿವೆ. ವಿಶೇಷವಾಗಿ ಕರ್ನಾಟಕದ ಕೃಷ್ಣೆ ಕಾವೇರಿ, ಮಹಾದಾಯಿ ನದಿಗಳು ಅಲ್ಲಿಯ ಪರಿಸರದ ಜೀವನವನ್ನೇ ಅಸ್ತವ್ಯಸ್ತಗೊಳಿಸುತ್ತಿದೆ. ಅದು ಇಂದಿನ ವಿಪರ್ಯಾಸ. ಕಾಲಾಯ ತಸ್ಮೈ ನಮಃ !

ಲೇಖಕರು : ನೀರಾವರಿ ತಜ್ಞರು ಹಾಗೂ ಅಧ್ಯಾತ್ಮ ಚಿಂತಕರು

feedback@bodhivruksha.com

ನಮ್ಮ ಪಾಲಿನ ನೀರು ಬರುತ್ತೆ, ಅನುಮಾನ ಬೇಡ

■ ನ್ಯಾಯಾಧಿಕರಣದ ಅವಧಿ ವಿಸ್ತರಿಸದಂತೆ ಒತ್ತಡ ತರಬೇಕು ■ ಸಮರ್ಥ ವಾದ ಮಂಡನೆಯಾಗಲಿ: ಕೃಷ್ಣ ಕುಲಕರ್ಣಿ

■ ಅಮರೇಗೌಡ ಗೋನವಾರ

ಹುಬ್ಬಳ್ಳಿ: ಮಹದಾಯಿ ನದಿಯಿಂದ ನಮ್ಮ ಪಾಲಿನ ನೀರು ಬಂದೇ ಬರುತ್ತದೆ. ಈ ಬಗ್ಗೆ ಯಾರಿಗೂ ಯಾವ ರೀತಿಯ ಅನುಮಾನವೂ ಬೇಡ. ನ್ಯಾಯಾಧಿಕರಣದ ಅಂತಿಮ ತೀರ್ಪಿಗೂ ಮುನ್ನ ಆಗಿರುವ ಲೋಪ ಸರಿಪಡಿಸಿ ಸಮರ್ಥ ವಾದ ಮಂಡನೆ ಹಾಗೂ ನ್ಯಾಯಾಧಿಕರಣದ ಅವಧಿ 6 ತಿಂಗಳಿಗಿಂತ ಹೆಚ್ಚಿನ ಕಾಲಾವಧಿಗೆ ವಿಸ್ತರಣೆ ಆಗದಂತೆ ಒತ್ತಡ ತರುವುದು ಸದ್ಯಕ್ಕೆ ನಮ್ಮ ಮುಂದಿರುವ ಸವಾಲು...

ನ್ಯಾಯಾಧಿಕರಣದ ಮಧ್ಯಂತರ ತೀರ್ಪಿನಿಂದ ಎಲ್ಲವೂ ಮುಗಿದೇ ಹೋಯಿತು ಎಂಬ ಆತಂಕ, ಹತಾಶೆ ಬೇಡ. ಮಹದಾಯಿ ನದಿಯಲ್ಲಿ ಹರಿಯುವ ನೀರಿನಲ್ಲಿ ನಮ್ಮ ಹಕ್ಕು ಇದ್ದೇ ಇದೆ. ಇಂದಲ್ಲ ನಾಳೆಯಾದರೂ ಮಹದಾಯಿ ನೀರಲ್ಲಿ ನಮ್ಮ ಪಾಲು ದೊರೆಯಲೇಬೇಕು ಎಂಬುದು ನೀರಾವರಿ ತಜ್ಞೋತ್ತಮರಾದ ಡಾ। ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಸ್ಪಷ್ಟೋಕ್ತಿ.

ಮಹದಾಯಿ ಕುರಿತ ಹಲವು ಗೊಂದಲ, ರಾಜಕೀಯ ಪಕ್ಷಗಳ ಬಾಲಿಶತನ, ಮಧ್ಯಂತರ ತೀರ್ಪು ಹಿನ್ನೆಲೆಯಲ್ಲಿ ನಮ್ಮ ಮುಂದಿನ ಹೆಜ್ಜೆ ಏನಾಗಬೇಕು ಎಂಬುದರ ಕುರಿತಾಗಿ 'ಉದಯವಾಣಿ'ಯೊಂದಿಗೆ ಅವರು ತಮ್ಮ ಆನಿಸಿಕೆ ಹಂಚಿಕೊಂಡಿದ್ದಾರೆ.

ದಾಯಾದಿ ಅಸ್ತಿ ಪಾಲು ನಿರಾಕರಣ ಅಸಾಧ್ಯ:

ಮಹದಾಯಿ ನದಿ ನೀರು ಹಂಚಿಕೆ ಎಂಬುದು ದಾಯಾದಿಗಳ ನಡುವಿನ ಪಿತ್ರಾರ್ಜಿತ ಆಸ್ತಿ ಹಂಚಿಕೆ ಇದ್ದಂತೆ. ಮಹದಾಯಿ ವಿಚಾರದಲ್ಲಿ ಕರ್ನಾಟಕ ಜೇಷ್ಠ ಪುತ್ರ, ಮಹಾರಾಷ್ಟ್ರ ಎರಡನೇ ಮಗ, ಗೋವಾ ಕೊನೆ ಮಗ. ಆಸ್ತಿ ಹಂಚಿಕೆಯಲ್ಲಿ ಜೇಷ್ಠ ಪುತ್ರನಿಗೆ ಪಾಲು ನಿರಾಕರಣೆ ಅಸಾಧ್ಯ. ಮಹದಾಯಿಯಲ್ಲಿ ನಮಗೆ ನೀರಿನ ಪಾಲು ಸಿಗಲೇಬೇಕು. ಮಹದಾಯಿ ನೀರಿನ ಲಭ್ಯತೆ ಪರಿಗಣಿಸಿದರೆ ರಾಜ್ಯಕ್ಕೆ ಸುಮಾರು 44 ಟಿಎಂಸಿ ಅಡಿಯಷ್ಟು ನೀರು ಸಿಗಬೇಕು. ನದಿಯಲ್ಲಿ ಹರಿಯುವ ಹಾಗೂ ಲಭ್ಯವಾಗುವ ನೀರಿನ ಲೆಕ್ಕಾಚಾರದಲ್ಲಿ ನ್ಯಾಯಾಧಿಕರಣ ಮೂರು ರಾಜ್ಯಗಳಿಗೆ ಇಂತಿಷ್ಟು ಎಂದು ಹಂಚಿಕೆ ಮಾಡಬೇಕು. ಹಂಚಿಕೆಯಲ್ಲಿ 44 ಅಲ್ಲದಿದ್ದರೂ 40-39 ಟಿಎಂಸಿ ಅಡಿಯಷ್ಟು ನೀರು ದೊರೆಯಬಹುದು. ಆದರೆ, ಕೇವಲ 7 ಟಿಎಂಸಿ ಅಡಿ ನೀರಿಗಾಗಿ ಒದ್ದಾಡಿ-ಗುದ್ದಾಡುವುದರಲ್ಲೇ ನಮ್ಮ ಶ್ರಮ, ಹಣ, ಸಮಯ ವ್ಯರ್ಥವಾಗಬಾರದು ಎಂದು ಡಾ। ಕೃಷ್ಣ ಅಭಿಪ್ರಾಯಿಸುತ್ತಾರೆ.

ಮಹದಾಯಿ ವಿಚಾರದಲ್ಲಿ ಕಾಂಗ್ರೆಸ್ ಪ್ರಧಾನಿ ಮಧ್ಯಪ್ರವೇಶದಿಂದ ಸಮಸ್ಯೆ ಇತ್ಯರ್ಥ ಸಾಧ್ಯ ಎನ್ನುತ್ತಿದೆ. ಪ್ರಧಾನಿ ಮಧ್ಯ ಪ್ರವೇಶಕ್ಕೆ ಪೂರಕವಾಗಿ ಕಾಂಗ್ರೆಸ್ ನವರು ಗೋವಾ ಹಾಗೂ ಮಹಾರಾಷ್ಟ್ರದಲ್ಲಿ ವಿಪಕ್ಷ ಮುಖಂಡರನ್ನು ಒಪ್ಪಿಸಲಿ ಎಂದು ಬಿಜೆಪಿ ಹೇಳುತ್ತಿದೆ. ಇದು ಬಾಲಿಶತನ. ಈ ಪ್ರಹಸನ ಬದಿಗಿರಿಸಿ ರೈತರಿಗೆ ವಾಸ್ತವದ ಸ್ಥಿತಿ ಮನವರಿಕೆ ಮಾಡಬೇಕಾಗಿದೆ. ನಮಗೆ ನೀರಿನ ಪಾಲು ದೊರೆಯುವುದೇ ಇಲ್ಲ ಎಂಬ ಆತಂಕ ದೂರ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕ ಯತ್ನಗಳು ನಡೆಯಬೇಕಿವೆ.

ಹಂಚಿಕೆಗಾಗಿಯೇ ರಚನೆ: ಮಹದಾಯಿ ನ್ಯಾಯಾಧಿಕರಣ ರಚನೆಯಾಗಿರುವುದೇ ನದಿ ನೀರು ಹಂಚಿಕೆ ಉದ್ದೇಶಕ್ಕೆ. ನ್ಯಾಯಾಧಿಕರಣದ ವಿಚಾರಣೆ, ತೀರ್ಪು ನೀಡಿಕೆಯಲ್ಲಿ ಒಂದಿಷ್ಟು ವಿಳಂಬ ಆಗಬಹುದಷ್ಟೇ. ಮಹದಾಯಿ ನ್ಯಾಯಾಧಿಕರಣದ ಅವಧಿ ಆಕ್ಟೋಬರ್‌ಗೆ ಪೂರ್ಣಗೊಳ್ಳಲಿದೆ. ನ್ಯಾಯಾಧಿಕರಣ ಇನ್ನಷ್ಟು ಅವಧಿ ವಿಸ್ತರಣೆಗೆ ಮನವಿ ಮಾಡಿದೆ. ನ್ಯಾಯಾಧಿಕರಣದ ರಚನೆ ಹಾಗೂ ಅಧಿಕಾರ ವಿಸ್ತರಣೆ ಅಧಿಕಾರ ಕೇಂದ್ರ ಸಚಿವ ಸಂಪುಟಕ್ಕಿದೆ. ಇನ್ನಷ್ಟು ವಿಚಾರಣೆ ಹಿನ್ನೆಲೆಯಲ್ಲಿ ನ್ಯಾಯಾಧಿಕರಣ ತನ್ನ ಕಾಲಾವಧಿಯನ್ನು ಇನ್ನು ಎರಡು ವರ್ಷದವರೆಗೆ ವಿಸ್ತರಿಸಬೇಕು ಎಂದು ಮನವಿ ಸಲ್ಲಿಸಬಹುದು. ಆದರೆ, ಕೇಂದ್ರ ಸಚಿವ ಸಂಪುಟ ಆರು ತಿಂಗಳ ಮಟ್ಟಿಗೆ ಮಾತ್ರ ಅವಧಿ ವಿಸ್ತರಿಸುವಂತೆ ಕೇಂದ್ರ ಸಚಿವ ಸಂಪುಟದ ಮೇಲೆ ಒತ್ತಡ ತರುವ ಕೆಲಸ ರಾಜಕೀಯ ಲಕ್ಕಾಚಾರ ಬದಿಗಿರಿಸಿ ಸಂಘಟಿತ ರೀತಿಯಲ್ಲಿ ಆಗಬೇಕಾಗಿದೆ.



ಮುಂದೇನು ಮಾಡಬೇಕು?

ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಹೊರಬಿದ್ದಿದೆ. ಕೆಲ ಲೋಪಗಳನ್ನು ಗುರುತಿಸಿ, ಕರ್ನಾಟಕದ ಅರ್ಜಿ ತಿರಸ್ಕರಿಸಿದೆ. ಈ ಹಂತದಲ್ಲಿ ಮಧ್ಯಂತರ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಕದ ತಟ್ಟುವುದು ಬಡಿಗೆ ಕೊಟ್ಟು ಬಡಿಸಿಕೊಂಡಂತೆ ಆಗಲಿದೆ. ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದರೆ, ವಿವಾದ ಇತ್ಯರ್ಥಕ್ಕಾಗಿಯೇ ನ್ಯಾಯಾಧಿಕರಣ ರಚನೆಗೊಂಡಿದೆ, ಆಲ್ಲಿಯೇ ಇದನ್ನು ಪರಿಹರಿಸಿಕೊಳ್ಳಿ ಎಂದು ಹೇಳಬಹುದು ಅಥವಾ ವಿಚಾರಣೆಗೆ ಮುಂದಾದರೆ ಅದು ದೀರ್ಘಾವಧಿ ತೆಗೆದುಕೊಳ್ಳಬಹುದು. ಮಧ್ಯಂತರ ತೀರ್ಪು ಪ್ರಶ್ನಿಸಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಬಹುದು. ಅದಕ್ಕೂ ಮೊದಲು ಮಧ್ಯಂತರ ತೀರ್ಪಿನಲ್ಲಿರುವ ಲೋಪಗಳನ್ನು ಮೊದಲು ಸರಿಪಡಿಸಿ ನ್ಯಾಯಾಧಿಕರಣಕ್ಕೆ ಮನವರಿಕೆ ಮಾಡಬೇಕು. ರೈತರ ನೋವಿಗೆ ಸ್ಪಂದಿಸಲಿಲ್ಲ ಎಂಬ ಅಪವಾದದಿಂದ ತಪ್ಪಿಸಿಕೊಳ್ಳಲು ಅಥವಾ ಯಾರದೋ ಒತ್ತಡಕ್ಕೆ ಮಣಿದು ತರಾತುರಿಯಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿದ ಪರಿಣಾಮ ನ್ಯಾಯಾಧಿಕರಣದಿಂದ ತಿರಸ್ಕೃತ ಫಲಿತಾಂಶ ಪಡೆದಾಗಿದೆ. ಮತ್ತದೇ ಒತ್ತಡಕ್ಕೆ ಸಿಲುಕಿ ಮೇಲ್ಮನವಿ ಸಲ್ಲಿಸುವ ಮೊದಲು ಸಾಕಷ್ಟು ಪರಾಮರ್ಶೆ ಮಾಡಬೇಕಿದೆ. ಕೇವಲ 7 ಟಿಎಂಸಿ ಅಡಿ ನೀರಿನ ಬೇಡಿಕೆಗಾಗಿ ಮೇಲ್ಮನವಿ ಸಲ್ಲಿಸುವ ಬದಲು ಅಂತಿಮ ತೀರ್ಪು ಸಮೀಪ ಇರುವ ಹಿನ್ನೆಲೆಯಲ್ಲಿ ಸಮ್ಮ ಪಾಲಿನ 44 ಟಿಎಂಸಿ ಅಡಿ ನೀರು ಹಕ್ಕು ಮಂಡನೆಗೆ ಹೆಚ್ಚು ಸೂಕ್ತ. ಆಗಿರುವ ಲೋಪ ಸರಿಪಡಿಸಬೇಕು. ಅಂತಿಮ ತೀರ್ಪಿಗೆ ನ್ಯಾಯಾಧಿಕರಣದ ಮಧ್ಯಂತರ ತೀರ್ಪು ತಳಹದಿ ಹಾಕದಂತೆಯೂ ಮುಂಜಾಗ್ರತೆ ವಹಿಸಬೇಕಾಗಿದೆ ಎಂಬುದು ಡಾ। ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಅನಿಸಿಕೆ.

ಪರಿಹಾರಕ್ಕೆ ಸಂಸದರ ಒತ್ತಾಯ

ನವದೆಹಲಿ: ಕಾವೇರಿ ಸಮಸ್ಯೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದು, ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಅರಿತು ಈ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಕಾಂಗ್ರೆಸ್ ಸಂಸದರು ಕೇಂದ್ರ ಸಚಿವೆ ಉಮಾ ಭಾರತಿಯವರನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಸಭೆ ನಡೆಸಿದ ಸಂಸದರು, ಕಾವೇರಿ ಕಣಿವೆಯ ಜನರು ನೀರಿಲ್ಲದೇ ಕೊರಗುತ್ತಿದ್ದಾರೆ. ಜಲಾಶಯಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಬಂದಿದೆ. ಈ ಒನ್ನೆಲೆಯಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಕೂಡಲೇ ತಾವು ಸಮಸ್ಯೆಗೆ ಪರಿಹಾರಕ್ಕೆ ಮಧ್ಯ ಪ್ರವೇಶಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿ ಮನವಿ ನೀಡಿದ್ದಾರೆ.

ಎರಡೂ ರಾಜ್ಯಗಳು ಸೌಹಾರ್ದತೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ನ್ಯಾಯಾಧಿಕರಣ 2007 ರಲ್ಲಿಯೇ ಹೇಳಿದೆ. ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಎರಡೂ ರಾಜ್ಯಗಳವರಿಗೆ ಮನವಿಕೆ ಮಾಡಿ ಇತ್ಯರ್ಥ ಪಡಿಸಬೇಕಾಗುತ್ತದೆ. ಆದರೆ ಈ ವಿಷಯದಲ್ಲಿ ಕೇಂದ್ರ ಯಾಕೆ ಸುಮ್ಮನಿದೆ? ಎಂದು ಮನವಿಯಲ್ಲಿ ಪ್ರಶ್ನಿಸಲಾಗಿದೆ.

ಸುಪ್ರೀಂ ಕೋರ್ಟು ಏನೇ ಆದೇಶ ನೀಡಲಿ, ಎರಡೂ ರಾಜ್ಯಗಳವರು ಸಮಸ್ಯೆ ಪರಿಹಾರ ಮಾಡಿಕೊಳ್ಳುವುದಾದರೆ ನ್ಯಾಯಾಲಯ ಮಧ್ಯ ಪ್ರವೇಶ ಮಾಡಲು ಬರುವುದಿಲ್ಲ. ಈ ನಿಟ್ಟಿನಲ್ಲಿ ಸಮಸ್ಯೆ ಪರಿಹರಿಕ್ಕಾಗಿ ಸಂಬಂಧಪಟ್ಟ ಸಚಿವರಾದ ತಾವು ಮಧ್ಯ ಪ್ರವೇಶಿಸಬೇಕು. ಈ ಹಿಂದೆ ನ್ಯಾಯಾಲಯ ನೀಡಿದ ಎಲ್ಲ ಆದೇಶಗಳನ್ನು ಕರ್ನಾಟಕ ಸರ್ಕಾರ ಪಾಲಿಸಿದೆ. ಹೇಳದಾಗ, ಹೇಳದಷ್ಟು ನೀರು ಬಿಟ್ಟದೆ. ಆದರೆ ಕರ್ನಾಟಕದಲ್ಲಿನ ವಸ್ತುಸ್ಥಿತಿಯನ್ನು ಮಾತ್ರ ಅರ್ಥ ಮಾಡಿಕೊಳ್ಳಲು ಯಾವುದೇ ಸಮಿತಿಯಾಗಲೀ ಕೇಂದ್ರ ಸರ್ಕಾರವಾಗಲೀ ಮುಂದೆ ಬರುತ್ತಿಲ್ಲ. ನೀರು ನಿರ್ವಹಣಾ ಮಂಡಳಿ ರಚಿಸುವಂತೆ ಸುಪ್ರೀಂ ಕೋರ್ಟು ಹೇಳಿದೆ. ಆದರೆ ಮಂಡಳಿ ರಚಿಸಿದರೆ ಕರ್ನಾಟಕಕ್ಕೆ ಬಹಳ ತೊಂದರೆಯಾಗುತ್ತದೆ.

ಆಕ್ರೋಶಗೊಂಡ ಜನರು ಕಾನೂನು ಸುವ್ಯವಸ್ಥೆಯನ್ನು ಅದ್ಹೇಗೆ ಕಾಪಾಡುತ್ತಾರೆ? ಕಾವೇರಿ ಸಮಸ್ಯೆ ಇಂದು ನಿನ್ನೆಯದಲ್ಲ. ಪ್ರತಿವರ್ಷವೂ ಇಂತಹ ತೊಂದರೆಯನ್ನು ಅನುಭವಿಸುತ್ತಲೇ ಬರುತ್ತಿರುವ ಕರ್ನಾಟಕದ ಜನರಿಗೆ ಈ ಬಾರಿ ಮಳೆ ಇಲ್ಲದೇ ತೊಂದರೆ ಅನುಭವಿಸುವಂತಾಗಿದೆ. ಈಗಲಾದರೂ ವಸ್ತುಸ್ಥಿತಿಯನ್ನು ಅರಿತು ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎನ್ನುವ ಮನವಿಯನ್ನು ಸಚಿವೆ ಉಮಾಭಾರತಿ ಅವರಿಗೆ ನೀಡಲಾಗಿದೆ. ಸಂಸದರಾದ ಪ್ರಕಾಶ ಹುಕ್ಕೇರಿ, ಡಿ.ಕೆ. ಸುರೇಶ್, ಮುದ್ದ ಹನುಮೇಗೌಡ, ಧ್ರುವನಾರಾಯಣ ಮುಂತಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಕಾವೇರಿ: ನ್ಯಾಯಾಂಗದ ಪರಮಾಧಿಕಾರದ ದರ್ಶನ



ಕಾವೇರಿ ಕೊಳ್ಳದ ನೀರಿನ ಕುರಿತು ಸುಪ್ರೀಂ ಕೋರ್ಟಿನ ಇಂದಿನ ತೀರ್ಪು ಉಭಯ ರಾಜ್ಯಗಳಲ್ಲಿಯ ಕಾವೇರಿ ನೀರಿನ ಅವಶ್ಯಕತೆಗಿಂತ ಭಾರತದ ಸರ್ವೋಚ್ಚ ನ್ಯಾಯಾಲಯದ ಪರಮಾಧಿಕಾರದ ವಿಷಯವಾಗಿತ್ತು ಎನ್ನಬಹುದು. ದೇಶದ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಒಕ್ಕೂಟ ವ್ಯವಸ್ಥೆಯಲ್ಲಿಯ ಒಂದು ರಾಜ್ಯ ತನ್ನಷ್ಟಕ್ಕೆ ತಾನು ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಿಲ್ಲ ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ಇಡೀ ದೇಶಕ್ಕೆ ಒಂದು ಸಂದೇಶವನ್ನು ನೀಡಿದಂತಿದೆ.

ಕರ್ನಾಟಕದಲ್ಲಿ ಕಾವೇರಿ ಕೊಳ್ಳದಲ್ಲಿ ನೀರಿನ ಸಂಕಷ್ಟವಿದೆ ಎಂಬುದು ನೂರಕ್ಕೆ ನೂರು ಸತ್ಯ. ಆದರೆ ಅದನ್ನು ವಿಧಾನ ಮಂಡಳದ ಅವಿರೋಧ ನಿರ್ಣಯದೊಂದಿಗೆ, ಅದು ಸರ್ವೋಚ್ಚ ನ್ಯಾಯಾಲಯಕ್ಕೆ ಅವಿಧೇಯತೆಯನ್ನು ತೋರಿಸುವುದಲ್ಲದಾಗಿದ್ದರೂ, ಆದರೆ ಆದೇಶವನ್ನು ಪಾಲಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯಕ್ಕೆ ಹೇಳುವುದು ಒಕ್ಕೂಟ ವ್ಯವಸ್ಥೆಯಲ್ಲಿ ಎಷ್ಟರ ಮಟ್ಟಿಗೆ ಸಾಧು ಎಂಬುದು ಇಂದಿನ ಪ್ರಶ್ನೆಯಾಗಿತ್ತು. ಅಂತಾರಾಷ್ಟ್ರೀಯ ಖ್ಯಾತಿಯ ನ್ಯಾಯವಾದಿ ಫಾಲಿ ನಾರಿಮನ್ನರು ಒಂದು ಹಂತದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಳದ ನಿರ್ಣಯವನ್ನು ನ್ಯಾಯಾಲಯದ ಗಮನಕ್ಕೆ ತಂದಾಗ ನ್ಯಾಯಾಲಯವು ಅದನ್ನು ಸಾರಾಸಗಟಾಗಿ ತಳ್ಳಿ ಹಾಕಿ 'ನಿಮ್ಮ ನಿರ್ಣಯ ನಿಮ್ಮ ಹತ್ತಿರ ಇರಲಿ, ಮೊದಲು ನ್ಯಾಯಾಲಯದ ಆದೇಶ ಪಾಲಿಸಿ' ಎಂದಾಗ ಒಕ್ಕೂಟ ವ್ಯವಸ್ಥೆಯಲ್ಲಿಯ ನ್ಯಾಯಾಂಗದ ಪರಮಾಧಿಕಾರದ ದರ್ಶನವನ್ನು ಮಾಡಿಸಿದಂತಿತ್ತು. ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದಿದ್ದರೆ ಒಕ್ಕೂಟ ವ್ಯವಸ್ಥೆಯಲ್ಲಿ ಉದ್ಭವಿಸುವ ಬಿಕ್ಕಟ್ಟನ್ನೂ ಎತ್ತಿ ತೋರಿಸಿದಂತಿತ್ತು.

ತಮಿಳುನಾಡು ಪದೇ ಪದೇ ಕರ್ನಾಟಕದ ವಾದವನ್ನು ಆಲಿಸ ಬೇಡಿ, ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘನೆ ಮಾಡಿದ ರಾಜ್ಯ ಮೊದಲು ಆದೇಶ ಪಾಲನೆ ಮಾಡಲಿ. ನಂತರ ಅವರ ವಾದವನ್ನು ಆಲಿಸಿ ಎಂದು ಹೇಳಿತು. ಆದರೆ ಕೇಂದ್ರ ಸರಕಾರ ಮಧ್ಯ ಬಾಯಿ ಹಾಕಿ ಕರ್ನಾಟಕದ ವಾದವನ್ನು ಆಲಿಸಬೇಕು ಎಂದು ಹೇಳಿದ್ದು ವಿಶೇಷವಾಗಿತ್ತು. ಆದಕ್ಕಿಂತ ಮೊದಲೆಯೇ ನ್ಯಾಯಾಲಯವು ಕರ್ನಾಟಕದ ವಾದವನ್ನು ಆಲಿಸುತ್ತಿದ್ದಂತೆ ಅದು ನ್ಯಾಯಾಂಗದ ಘನತೆ, ಗೌರವ ಮತ್ತು ಅದರ ಪರಮಾಧಿಕಾರದ ದರ್ಶನವನ್ನು ಮಾಡಿಸುವಂತೆ ಕರ್ನಾಟಕಕ್ಕೆ ಪ್ರಶ್ನೆಯ ಸುರಿಮಳೆಯನ್ನು ಹಾಕಿತು.

ವಿಧಾನ ಮಂಡಳದಲ್ಲಿಯನಿರ್ಣಯವನ್ನು ಯಾವ ಕಾನೂನಿನ ಆಧಿಯಲ್ಲಿ ಸ್ವೀಕರಿಸಿದಿರಿ?

ನವೆಂಬರ್ ಹೊತ್ತಿಗೆ ಆದೇಶ ಪಾಲನೆ ಮಾಡುತ್ತೇನೆನ್ನಲು ಯಾವ ಆಧಾರ ನಿಮ್ಮಲ್ಲಿದೆ?

ಹಾಗೆ ನೋಡಿದರೆ ಇಂದಿನ ಆದೇಶದಲ್ಲಿಯ ಸಮಾಧಾನಕರ ವಿಷಯವೆಂದರೆ, ಹಿಂದಿನ ದಿನಗಳಲ್ಲಿ ಅಂದರೆ ದಿನಾಂಕ 20ರಿಂದ ಇಂದಿನ ವರೆಗೆ ನೀರನ್ನು ಕರ್ನಾಟಕ ರಾಜ್ಯ ಬಿಡದಿರುವುದನ್ನು ಉಲ್ಲೇಖಿಸದೆ. ಮೂರು ದಿನ ಮಾತ್ರ 6000 ಕ್ಯೂಸೆಕ್ ನೀರನ್ನು ಹರಿಸಿ ಶುಕ್ರವಾರ ಮತ್ತೆ ಬನ್ನಿ ಎಂದು ಹೇಳುವಲ್ಲಿಯ ನೀರಿನ ಹರಿವಿನ ಆದೇಶ ದೊಡ್ಡದೇನಲ್ಲ. ಈ ದಿನಗಳಲ್ಲಿ 6000 ಕ್ಯೂಸೆಕ್ ಅನುಪಾತಿನಲ್ಲಿ ಸ್ಥಾಪಿಕವಾಗಿಯೆ ಅಷ್ಟು ನೀರು ಬಳಗುಂಡ್ಲುವಿನಲ್ಲಿ ಹರಿದು ಹೋಗುತ್ತಿದೆ ಎಂದು ಗಮನಿಸಿದರೆ ನ್ಯಾಯಾಲಯಕ್ಕೆ ನೀರಿನ ಹರಿವಿಗಿಂತ ಆದೇಶ ಪಾಲನೆ ಮುಖ್ಯ ಎಂಬುದನ್ನು ರಾಜ್ಯಕ್ಕೆ ತೋರಿಸುವುದು ಪ್ರಮುಖವಾಗಿತ್ತು ಎಂಬುದು ಎದ್ದು ಕಾಣುತ್ತಿತ್ತು.

ಆದರೆ ರಾಜ್ಯದ ಮುಂದಿನ ಹೆಜ್ಜೆ ಏನು? ಒಂದೆಡೆ ಕರ್ನಾಟಕ ರಾಜ್ಯ ವಿಧಾನ ಮಂಡಳದ ನಿರ್ಣಯ, 'ಯಾವುದೇ ಸಂದರ್ಭದಲ್ಲೂ ಕಾವೇರಿ ನೀರನ್ನು ಕುಡಿಯಲಿಕ್ಕಾಗಿ ಮಾತ್ರ ಬಳಸಬೇಕು. ಬೆಳೆಗೆ ಹರಿಸಬಾರದು' ಎಂದಿದೆ. ಇಂದಿನ ಸರ್ವೋಚ್ಚ ನ್ಯಾಯಾಲಯದ ಆದೇಶ 'ನಾಳೆನಿಂದ ಮೂರುದಿನ ದಿನಂಪ್ರತಿ 6000 ಕ್ಯೂಸೆಕ್ ನೀರು ತಮಿಳುನಾಡಿಗೆ ಬಿಡಿರಿ' ಎಂದಿದೆ. ನೀರನ್ನು ಬಿಟ್ಟರೆ ವಿಧಾನಮಂಡಳದ ನಿರ್ಣಯವನ್ನು ಉಲ್ಲಂಘಿಸಿದಂತಾಗಿ ಸದನದ ಹಕ್ಕು ಚ್ಯುತಿಗೆ ಒಳಪಡಬೇಕು. ಬಿಡದಿದ್ದರೆ ನ್ಯಾಯಾಲಯದ ಆದೇಶ ಉಲ್ಲಂಘನೆ ! 'ಅತ್ತ ದರಿ. ಇತ್ತ ಪುಲಿ' ಕರ್ನಾಟಕದ ಸ್ಥಿತಿ. ಈ ಎಲ್ಲವುಗಳ ಮಧ್ಯೆ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರಕಾರದ ಮಧ್ಯಸ್ಥಿಕೆಗೆ ಅನುಮತಿ ನೀಡಿದ್ದು ಒಂದು ಆಶಾದಾಯಕ ಬೆಳವಣಿಗೆ ಎನ್ನಬಹುದು.

– ಡಾ. ಕೃಷ್ಣ ಕೊಳ್ಳಾರಕುಲಕರ್ಣಿ, ವಿಜಯಪುರ

ಇವರಿಗೆ ರಂಭಾಪುರಿ ಶ್ರೀಗಳ ವಿಶೇಷ ಪ್ರಶಸ್ತಿ

ರಾಮದುರ್ಗ: ತಾಲೂಕಿನ ಗೊಡಚಿ ವೀರಭದ್ರೇಶ್ವರ ಕ್ಷೇತ್ರದಲ್ಲಿ ಆಕ್ಟೋಬರ್ 10ರಿಂದ 11 ರವರೆಗೆ ನಡೆಯಲಿರುವ ಶ್ರೀಮದ್ ರಂಭಾಪುರಿ ವೀರಸೋಮೇಶ್ವರ ಜಗದ್ಗುರುಗಳ 25ನೇ ವರ್ಷದ ಶರನ್ನವರಾತ್ರಿ ದಸರಾ ರಜತ ಮಹೋತ್ಸವ ಸಮಾರಂಭದಲ್ಲಿ ಏವರಿಗೆ ವಿಶೇಷ ಪ್ರಶಸ್ತಿ ನೀಡಲಾಗುತ್ತಿದೆ ಎಂದು ರಂಭಾಪುರಿ ಶ್ರೀಗಳು ತಿಳಿಸಿದ್ದಾರೆ.

'ಸಾಧನ ಸಿರಿ' ಪ್ರಶಸ್ತಿಗೆ ತುಮಕೂರು ಜಿಲ್ಲೆ ಸದ್ಧರೆಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, 'ರಂಭಾಪುರಿ ಯುವ ಸಿರಿ' ಪ್ರಶಸ್ತಿಗೆ ರಾಮದುರ್ಗದ ರಾಜೇಶ ಶಿವಮೂರ್ತಿ ಬೇಳಗಿ, 'ಸಾಹಿತ್ಯ ಸಿರಿ' ಪ್ರಶಸ್ತಿಗೆ ಚಿಕ್ಕಮಗಳೂರು ಜಿಲ್ಲೆ ಹಣ್ಣೆ ಮಹದಶಿವಾನಂದ ಶಿವಾಚಾರ್ಯ ಸ್ವಾಮೀಜಿ, 'ವೀರಶೈವ ಸಿರಿ' ಪ್ರಶಸ್ತಿಗೆ ಗದಗ ಜಿಲ್ಲೆ ಲಕ್ಷ್ಮೇಶ್ವರದ ಮಾಜಿ ಶಾಸಕ ಜೆ.ಎಂ. ಮಹಾಂತಶೆಟ್ಟರ್ ಮತ್ತು 'ಶಿವಾಚಾರ್ಯ ರತ್ನ' ಪ್ರಶಸ್ತಿಗೆ ಚಿತ್ರದುರ್ಗ ಜಿಲ್ಲೆ ಜಗಳೂರು ತಾಲೂಕು ಕಣ್ಣಕುಪ್ಪಿ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಆಕ್ಟೋಬರ್ 1 ರಂದು ನಡೆಯಲಿರುವ ದಸರಾ ರಜತ ಮಹೋತ್ಸವವನ್ನು ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಿದರು. ಆ.2ರಂದು 25ನೇ ವರ್ಷದ ದಸರಾ ಸವಿನೆನಪಿಗಾಗಿ 25 ಅಮೂಲ್ಯ ಗ್ರಂಥಗಳನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಡುಗಡೆ ಮಾಡಲಿದ್ದಾರೆ. ಹಲವು ಸಚಿವರು, ವಿರೋಧ ಪಕ್ಷದ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸ್ವೀರೋಗ ತಜ್ಞೆಯಾಗಿ ಹೆಸರು ಮಾಡಿ, ಯಶಸ್ವಿ ವೈದ್ಯಕೀಯ ಬದುಕನ್ನು ರೂಪಿಸಿಕೊಳ್ಳುವ ಉತ್ತಮ ಅವಕಾಶವಿದ್ದ ಈ ಮಹಿಳೆ, ದೇಶಕ್ಕೆ ಸ್ವಾತಂತ್ರ್ಯ

ಲಕ್ಷ್ಮಿ ಮತ್ತು ಅವಳ ಸಹೋದರಿ ಮೃಣಾಲಿನಿ (ನಂತರ ಮೃಣಾಲಿನಿ ಸಾರಾಭಾಯಿ) ಇಂಗ್ಲಿಷ್ ಶಾಲೆ ಬಿಟ್ಟು ಸರಕಾರಿ ಶಾಲೆಗಳಲ್ಲಿ ಓದುವಂತಾಯಿತು. ಆಗಲೇ

ಬೆಳಕಿಯಲ್ಲಿ ತರಬೇತಿ ಪಡೆಯುತ್ತಾ, ಅಜೀಜ್ ಹಿಂದ್ ಫೌಜ್‌ನ ಅಭಿಯಾನದಲ್ಲಿ ತನ್ನದೇ ಪಾತ್ರ ವಹಿಸಿತು. ಸುಭಾಷ್ ಚಂದ್ರ ಬೋಸ್ ಅವರ ಸೇನೆಯಲ್ಲಿ ಸುಮಾರು

ಅಕ್ಟೋಬರ್ 24ಕ್ಕೆ ಅವರಿಗೆ 106 ವರ್ಷ ವಯಸ್ಸಾಗಿರುತ್ತಿತ್ತು.

ನೀರಾವರಿ ಎನ್‌ಸೈಕ್ಲೋಪಿಡಿಯಾ

ತನ್ನಿಮಿತ್ತ

ಸಂಗಮೇಶ ಆರ್. ನಿರಾಣಿ

vveditoped@gmail.com



ನೀರಾವರಿ ತಜ್ಞ, ರೈತಪರ ಹೋರಾಟಗಾರ, ಇತಿಹಾಸ ಸಂಶೋಧಕ, ಸಾಹಿತಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಗೆ ಈಗ ಎಂಬತ್ತರ ಸಂಭ್ರಮ. ವಯಸ್ಸು ಕೆಲವರಿಗೆ ಬರೀ ಸಂಖ್ಯೆ ಎಂದು ಹೇಳುತ್ತಾರೆ. ಆ ಮಾತಿಗೆ ಸಾಕ್ಷಿರೂಪ ದಂತಿರುವ ಅವರು ತುಂಬ ಉತ್ಸಾಹದಿಂದ ನಳನಳಿಸುತ್ತಿದ್ದಾರೆ.

ಕೆಲವು ಜನರು ತಾವು ಇರುವುದಕ್ಕಿಂತ ಹೆಚ್ಚು ಕಾಣುತ್ತಾರೆ. ಇನ್ನು ಕೆಲವರು ತಾವು ಕಾಣುವುದ ಕ್ಕಿಂತಲೂ ಹೆಚ್ಚು ಇರುತ್ತಾರೆ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಈ ದ್ವಿತೀಯ ವರ್ಗಕ್ಕೆ ಸೇರಿದ ಅದ್ವಿತೀಯರು.

ಕರ್ನಾಟಕದ ನೀರು, ನೀರಾವರಿ, ನದಿಗಳ ಬಗ್ಗೆ ಅವರಷ್ಟು ನಿಖರವಾಗಿ ಮಾತನಾಡುವವರು ಮತ್ತೊಬ್ಬರಿಲ್ಲ. ಯಾವುದೇ ಪಕ್ಷದ ಸರಕಾರ ಇರಲಿ, ಯಾರೇ ನೀರಾವರಿ ಮಂತ್ರಿಯಾಗಿರಲಿ, ನೀರಿನ ಹಂಚಿಕೆ ವ್ಯಾಜ್ಯ ಹುಟ್ಟಿಕೊಂಡಾಗ ಕುಲಕರ್ಣಿಯವರ ಮಾರ್ಗದರ್ಶನ ಪಡೆಯುವುದು ಅನಿವಾರ್ಯ ಮತ್ತು ಅವಶ್ಯಕ.

ಕುಲಕರ್ಣಿಯವರ ಬದುಕು ಒಂದು ಸ್ಫೂರ್ತಿಯ ಕಥೆ. ಬರೀ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ 'ತಂತಿ ಮಾಸ್ತರ' (Telegram Assistant) ಆಗಿದ್ದ ಅವರು ಪದವಿ ಕಾಲೇಜು ಪ್ರಾಚಾರ್ಯರಾಗುತ್ತಾರೆ. ವಿಶ್ವವಿದ್ಯಾಲಯಗಳ ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಗೈಡ್ ಆಗುತ್ತಾರೆ. ಇತಿಹಾಸ ಸಂಶೋಧನೆಗೆ ಸರಕಾರ ರಚಿಸಿದ ಅನೇಕ ಸಮಿತಿಗಳಿಗೆ ಅಧ್ಯಕ್ಷ- ನಿರ್ದೇಶಕ ರಾಗುತ್ತಾರೆ. ಅವರು ನಿಜವಾದ ಅರ್ಥದಲ್ಲಿ ಓದಿ, ಬ್ರಾಹ್ಮಣ ಆದವರು. ಅವರ ಜ್ಞಾನದ ವಿಸ್ತಾರ, ಸ್ಮರಣ ಶಕ್ತಿ ಮತ್ತು ಅವರ ಕ್ರಿಯಾಶೀಲತೆ ನಿಜಕ್ಕೂ ಮೆಚ್ಚುವಂತದ್ದು.

ಹುಟ್ಟೂರಿನ ಕಾಳಜಿ ನೀರಾವರಿ ಹೋರಾಟಗಾರ ರನ್ನಾಗಿಸಿತು. ಹಿರಿಯರಾದ ಕೃಷ್ಣ ಕೊಲ್ಹಾರ ಕುಲಕರ್ಣಿಯವರ ಬಗ್ಗೆ ನನಗೆ ಯಾಕಿಷ್ಟು ಪ್ರೀತಿಯೆಂದರೆ ಕೃಷ್ಣೆಯ ಮಡಿಲೇ ನಮ್ಮಿಬ್ಬರಿಗೂ ಬಾಲ್ಯದಲ್ಲಿ ತೊಟ್ಟಿಲಾಗಿತ್ತು. ಅವರ ಹುಟ್ಟೂರು ಕೊಲ್ಹಾರ ಹಾಗೂ ನನ್ನದು ಹಂಚಿನಾಳ ಎಂಬ ಪುಟ್ಟ ಗ್ರಾಮ. ಈ ಎರಡು ಹಳ್ಳಿಗಳು ಆಲಮಟ್ಟಿ ಜಲಾಶಯ ನಿರ್ಮಾಣದ ಅಬ್ಬರದಲ್ಲಿ ಮುಳುಗಿ ಹೋಗಿವೆ. ಒಂದು ಅರ್ಥದಲ್ಲಿ ನಾವಿಬ್ಬರೂ ಸಮಾನ ದುಃಖಿಗಳು. ನಾವಿಬ್ಬರೂ ನದಿ ಮತ್ತು ನೀರು ಆರಾಧಿಸುವುದಕ್ಕೂ ಇದು ಕಾರಣವಾಗಿರಬಹುದು.

ಮುಳುಗಡೆ ಸಂಕಷ್ಟದಿಂದ ತೊಂದರೆಗೆ ಸಿಲುಕಿದ ತಮ್ಮ ಹುಟ್ಟೂರು ಕೊಲ್ಹಾರದ ಜನತೆಗೆ ನೆರವಾಗಬೇಕು ಎಂದು ತರುಣರಾಗಿದ್ದ ಕುಲಕರ್ಣಿ ಅವರು ಹೋರಾಟಕ್ಕಳಿಯುತ್ತಾರೆ. ಇಡೀ ಯೋಜನೆಯನ್ನು ಅಭ್ಯಸಿಸಿ, ಸತ್ಯಾ ಸತ್ಯತೆಯನ್ನು ಹೊರತೆಗೆದರು. ಈ ಹೋರಾಟ ಹಾಗೂ ಪರಿಶ್ರಮವೇ ಮುಂದಿನ ದಿನಗಳಲ್ಲಿ ಕರ್ನಾಟಕ ನದಿಗಳು ಮತ್ತು ನೀರಾವರಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿ ಪುಸ್ತಕ ಬರೆಯಲು ಸಹಕಾರಿ ಯಾಯಿತು.

ಯು.ಕೆ.ಪಿ-1ರಲ್ಲಿ 1984ರಷ್ಟು ಹಿಂದಿನ ಬೆಲೆ ಜಮೀನಿಗೆ ಪಾವತಿಯಾಗಿತ್ತು. ಮುಳುಗಡೆ ಮನೆಗಳಿಗೆ ಬೇರೆ ನೀವೇಶನಗಳನ್ನು ಹಂಚಿರಲಿಲ್ಲ. ಸರಕಾರದ ನಿರ್ಲಕ್ಷ್ಯ, ದಲ್ಲಾಳಿಗಳ ಹಾವಳಿ, ಭ್ರಷ್ಟಾಚಾರ ಎಲ್ಲವನ್ನೂ ಅಧ್ಯಯನ ಮಾಡಿ ತ್ರಿಶಂಕು ಸ್ಥಿತಿಯಲ್ಲಿ ಕೃಷ್ಣಾ ಯೋಜನೆ ಎಂಬ ಸಚಿತ್ರ ಲೇಖನ ಬರೆದರು. ಆ ಲೇಖನ ಬೆಳಗಾಗುವುದರಲ್ಲಿಯೇ ದೊಡ್ಡ ಆಂದೋಲನವನ್ನೆ ರೂಪಿಸಿತು. ಆಳುವ ದೊರೆಗಳನ್ನು ನಡು ರಸ್ತೆಯಲ್ಲಿ ಚೆತ್ತಲೆ ಮಾಡಿ ನಿಲ್ಲಿಸಿತು.

ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ವಸತಿ ಆದ್ಯಾನಗಳು, ಮುಳುಗಡೆ ಊರಿಗೆ ಒಂದೂ ಹನಿ ನೀರಿಲ್ಲ, ಕೃಷ್ಣಾ ನೀರಿಗಾಗಿ ಮಾಡಬೇಕಾದ್ದೇನು?, ಸಮಾಧಿಯಿಂದ ಎದ್ದ ಮುಳುವಾಡ ಏತ ನೀರಾವರಿ ಯೋಜನೆ, ಸಮಗ್ರ ನೀರಾವರಿ ಹೋರಾಟ ಎಂದರೇನು? ಕಾವೇರಿ ಕಾವಿನಲ್ಲಿ ಭೀಮೆಯ ಕೂಗು ಮಾಯ, ಸುಪ್ರೀಂ ಕೋರ್ಟ್‌ನಲ್ಲಿ ಭೋರ್ಗರೆಯುತ್ತಿರುವ ನೀರು, ಹೀಗೆ ಹತ್ತು ಹಲವಾರು ಮಹತ್ವಪೂರ್ಣ ಲೇಖನಗಳನ್ನು ಅವರು ಬರೆದಿದ್ದಾರೆ.

ಇಂದು ಹೋರಾಟಗಾರ ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ 80ನೇ ಹುಟ್ಟುಹಬ್ಬ



ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ, ಪುನರ್ವಸತಿ ಸಮಸ್ಯೆ - ಪರಿಹಾರಕ್ಕಾಗಿ ಕೊಲ್ಹಾರದಲ್ಲಿ ಪುನರ್ವಸತಿ ಗ್ರಾಮ ವಿಕಾಸ ಸಂಘವನ್ನು ಹುಟ್ಟುಹಾಕಿ ಹಲವಾರು ಹೋರಾಟ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದರು.

1988ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ಪುನರ್‌ನಿರ್ಮಾಣ ಸಮಿತಿ ಸದಸ್ಯರನ್ನಾಗಿ ಸರಕಾರ ನೇಮಿಸಿತು. ಈ ಸಂದರ್ಭದಲ್ಲಿ ಅವರು ನೀಡಿದ ಉಪಯುಕ್ತವಾದ ಸಲಹೆಗಳು ರಾಜ್ಯ, ರಾಷ್ಟ್ರ ಮಟ್ಟದ ತಜ್ಞರ ಮನ್ನಣೆಗೆ ಪಾತ್ರವಾಗಿವೆ.

ಪ್ರೊ.ಎಸ್. ಆರ್. ರೋಡಕರ್ ಹೇಳುವಂತೆ ಕೃಷ್ಣ ಕೊಲ್ಹಾರ ಕುಲಕರ್ಣಿಯವರು ಕೃಷಿ, ನೀರಾವರಿ ಅಧ್ಯಯನ, ಕೃಷ್ಣಾ ಕೊಳ್ಳದ ಯೋಜನೆಗಳ ಕುರಿತು ಸರಕಾರಿ ಅಧಿಕಾರಿಗಳು ನಡೆಸಿದ ಅಧ್ಯಯನಕ್ಕಿಂತ ಆಳವಾಗಿವೆ ಮತ್ತು ಅಧಿಕಾರಯುಕ್ತವಾಗಿವೆ ಎಂಬುದು ಕೃಷ್ಣ ಕೊಲ್ಹಾರ ಕುಲಕರ್ಣಿಯವರಿಗೆ ಇರುವ ಕೃಷಿ ಮತ್ತು ನೀರಾವರಿ ಕುರಿತು ಇರುವ ಆಳವಾದ ಪಾಂಡಿತ್ಯವನ್ನು ಪ್ರತಿಬಿಂಬಿಸುತ್ತದೆ.

ಹೈದ್ರಾಬಾದ್‌ನ ಅಡ್ಮಿಸ್ಟೇಟಿವ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದಲ್ಲಿ ಉಪನ್ಯಾಸ ನೀಡಿ ಪುನರ್ವಸತಿ ಸಮಸ್ಯೆಯಲ್ಲಿ ಬಿಡಿಸುವಲ್ಲಿ ಅಂತಾರಾಷ್ಟ್ರೀಯ ನೀತಿ ನಿಯಮಾವಳಿಗಳನ್ನು ತುಲನೆ ಮಾಡಿ ರಾಜ್ಯ ಹಾಗೂ ರಾಷ್ಟ್ರದಲ್ಲಿ ನಡೆದ ಪುನರ್ವಸತಿ - ಪುನರ್‌ನಿರ್ಮಾಣದಲ್ಲಿ ಆದ ಲೋಪಗಳನ್ನು ಎತ್ತಿ ತೋರಿಸಿದರು.

ಮುಳವಾಡ ಏತ ನೀರಾವರಿ ಅನುಷ್ಠಾನಕ್ಕೆ ಆಗ್ರಹಿಸಿ ಜಯಪುರದಲ್ಲಿ ಉಗ್ರ ಹೋರಾಟ ನಡೆಯಿತು. ಆಗ ನಡೆದ ಸಭೆಯಲ್ಲಿ ನೀರಾವರಿ ಸಚಿವರಾಗಿದ್ದ ಮಲ್ಹಾರಿಗೌಡ ಪಾಟೀಲ ಭಾಗವಹಿಸಿದ್ದರು. ಈ ಸಭೆಯಲ್ಲಿ ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ವಾದ ಆಲಿಸಿದ ಸಚಿವರು ನಮ್ಮ ನೀರಾವರಿ ಇಲಾಖೆಯ ಅಧಿಕಾರಿಗಳ ಕಿವಿ ಹಿಂಡಿ ನೀರಾವರಿಯ ಕುರಿತು ನೀವು ಪಾಠ ಮಾಡಬೇಕು ಎಂದು ಸಲಹೆ ನೀಡಿದರು.

ಭೀಮೆಗಾಗಿ ಮಿಡಿದ ಮನ: ಭೀಮಾ ನೀರು ರಕ್ತಣಾ ರೈತ ಸಂಘದ ಮೂಲಕ ಮೂಲಭೂತ ಹಕ್ಕನ್ನು ಮುಂದೆ ಮಾಡಿ, ವಾಸ್ತವವನ್ನು ಸುಪ್ರಿಂಕೋರ್ಟ್ ಮುಂದೆ ಬಿಚ್ಚಿಟ್ಟು ಮಹಾರಾಷ್ಟ್ರದ ಅಧಿಕೃತ ಹಾಗೂ ಅನಧಿಕೃತ ಯೋಜನೆಗಳಿಗೆ ಭೀಮಾ ನೀರು ಬಳಕೆ ಮಾಡಿಕೊಂಡಿರುವುದನ್ನು ಅನಾವರಣಗೊಳಿಸಿ ಯಶಸ್ವಿಯಾದರು. ನೀರಿಗಾಗಿ ಕೋರ್ಟ್ ಕಟ್ಟೆ ಹತ್ತುವುದು ಹೆಮ್ಮೆಯ ವಿಷಯವಲ್ಲ.

ನೀರು ಜೀವನಾಂಶ, ಅದು ಸರಿಯಾಗಿ ಪೂರೈಕೆಯಾಗಬೇಕು ಎಂಬುದು ಕುಲಕರ್ಣಿಯವರ ಆದರ್ಶ ನಿಲುವು. ಇದನ್ನು ಸರಕಾರ ಹಾಗೂ ಜನರೂ ಅರ್ಥಮಾಡಿಕೊಳ್ಳಬೇಕು.

ವಿಜಯಪುರದ ಮೇಲಿನ ಅಭಿಮಾನ: ವಿಜಯಪುರದ ಬಗ್ಗೆ ಸಾಕಷ್ಟು ಅಭಿಮಾನ ಹೊಂದಿರುವ ಅವರು ವಿಜಯಪುರ ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಿ ಬೆಳೆಯಬೇಕೆಂಬ ಹಂಬಲದಿಂದ ಹಲವಾರು ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ವಿಜಯಪುರ ಜಿಲ್ಲಾಡಳಿತ 'ಕೃಷ್ಣ ಕೊಲ್ಹಾರ ಕುಲಕರ್ಣಿಯವರಿಂದ ವಿಸ್ಮಯ; ಇದು ವಿಜಯಪುರ' ಎಂಬ ಪುಸ್ತಕವನ್ನು ಬರೆಸಿ ಪ್ರಕಟಿಸಿದೆ. ಇಂಡಿಯನ್ ಕೌನ್ಸಿಲ್ ಆಫ್ ನ್ಯೂದಿಲ್ಲಿ ವತಿಯಿಂದ ಆದಿಲ್‌ಷಾ ಕಾಲದಲ್ಲಿ ಹಿಂದೂ - ಮುಸ್ಲಿಂ ಸಂಬಂಧದ ವಿಷಯದ ಮೇಲೆ ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆದು ಸಾದರಪಡಿಸಿದರು.

ವಿಜಯಪುರವು ಅಂತಾರಾಷ್ಟ್ರೀಯ ಖ್ಯಾತಿಯ ಅವಶೇಷಗಳನ್ನೊಳಗೊಂಡ ಪ್ರವಾಸಿ ತಾಣ. ಇದು ಸರಕಾರ ಹಾಗೂ ನಾಗರಿಕರ ನಿರ್ಲಕ್ಷ್ಯದಿಂದಾಗಿ ಅಭಿವೃದ್ಧಿಯಾಗಿಲ್ಲ. ರಾಜ್ಯ, ರಾಷ್ಟ್ರ ಪುರಾತತ್ವ ಇಲಾಖೆ ಅಧಿಕಾರಿಗಳ ಸಂಪರ್ಕ ಸಾಧಿಸಿ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತೆ ಮಾಡಲು ಪ್ರಯತ್ನಿಸಿದರು. ಇಂಟ್ಯಾಚ್ ಸಂಸ್ಥೆ ಮೂಲಕ ಅಪರೂಪದ ವಾಸ್ತುಶಿಲ್ಪವನ್ನು ಒಳಗೊಂಡ 6 ವರ್ಷ (2005-2010)ದ ಕ್ಯಾಲೆಂಡರ್ ಸಿದ್ಧಪಡಿಸಿ ಪ್ರಕಟಿಸಿದರು. ಈ ದಿನದರ್ಶಿಕೆಯನ್ನು ರಾಜ್ಯಪಾಲರು ರಾಜಭವನದಲ್ಲಿ ಸಮಾರಂಭ ಆಯೋಜಿಸಿ ಬಿಡುಗಡೆ ಮಾಡಿದ್ದು ಅಭಿಮಾನದ ಸಂಗತಿ. 1997-2000 ಅವಧಿಯಲ್ಲಿ ಅವರು ಕರ್ನಾಟಕ ಸರಕಾರದ ಗ್ಯಾಜೆಟಿಯರ್ ಇಲಾಖೆಯ ಸಂಪಾದನಾ ಕಾರ್ಯದಲ್ಲಿ ವಿಜಯಪುರ ಜಿಲ್ಲೆಯ ಗ್ಯಾಜೆಟಿಯರ್ ಸಲಹಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಧಾರ್ಮಿಕ ಕ್ಷೇತ್ರದ ಆಸಕ್ತಿ: ಸಂಶೋಧನೆ ನೀರಾವರಿ ಯೊಂದಿಗೆ ಧಾರ್ಮಿಕ ಕ್ಷೇತ್ರದಲ್ಲೂ ತುಂಬ ಆಸಕ್ತಿ ಹೊಂದಿರುವ ಅವರು 1987ರಲ್ಲಿ ಕಾಖಂಡಕಿ ಮಹಿಪತಿರಾಯರು ವಿಷಯದ ಮೇಲೆ ಪ್ರಬಂಧ ಮಂಡಿಸಿದರು. ವಿಜಯ ಪ್ರಮೋದ ಸ್ಮರಣ ಸಂಚಿಕೆ ಹಾಗೂ ಮಧ್ವ ಮಠಗಳು ಸಂಶೋಧನಾ ಗ್ರಂಥ ಇವರು ಬರೆದ 2 ಪ್ರಮುಖ ಪುಸ್ತಕಗಳಾಗಿವೆ. 1998-2001ರವರೆಗೆ ಕರ್ನಾಟಕ ಉರ್ದು ಅಕಾಡಮಿಗೆ ಸದಸ್ಯರಾಗಿ ನಾಮಕರಣಗೊಂಡಿದ್ದರು. ಈ ಸಂದರ್ಭದಲ್ಲಿಯೇ ಬಸವಣ್ಣ, ಅಕ್ಕಮಹಾದೇವಿಯವರ ವಚನಗಳು ಉರ್ದುವಿಗೆ ಅನುವಾದಗೊಂಡಿವೆ. ಕರ್ನಾಟಕ ಸರಕಾರವು ಸಮಗ್ರ ವಚನ ಸಾಹಿತ್ಯದಂತೆಯೇ ಸಮಗ್ರ ದಾಸ ಸಾಹಿತ್ಯ ಪ್ರಕಟಿಸಲು ನಿರ್ಧರಿಸಿದಾಗ ಕೃಷ್ಣ ಕೊಲ್ಹಾರ ಕುಲಕರ್ಣಿಯವರು ಪ್ರಕಟಣ ಮಂಡಳಿಯ ಪ್ರಮುಖ ಸದಸ್ಯರಾಗಿದ್ದರು.

ಕರ್ನಾಟಕ ಪಠ್ಯ ಪುಸ್ತಕ ರಚನಾ ಮಂಡಳಿಯು ಅವರ ಪಾಂಡಿತ್ಯವನ್ನು ಸಮರ್ಪಕವಾಗಿ ಬಳಸಿಕೊಂಡಿದೆ. ಅವರ ಪರಮಾಣು ಶಿಲ್ಪಿ ಹೋಮಿ ಬಾಬಾ ಲೇಖನ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ಪ್ರಕಟವಾಗಿ 9ನೇ ವರ್ಗದ ಸಾಹಿತ್ಯ ಮಂದಾರ ಪಠ್ಯ ಪುಸ್ತಕದಲ್ಲಿ 10 ವರ್ಷಗಳ ಮಕ್ಕಳು ಓದಿದರು. ಮುಂದೆ ಅವರು ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಎರಡನೇ ಮಹಾಯುದ್ಧ ಪುಸ್ತಕ ಬರೆದುಕೊಟ್ಟರು.

ಎಂ. ಎಂ. ಜೋಶಿಯವರ ಜೀವನ ಸಾಧನೆಯ ಕುರಿತು ಅವರ 70ನೇ ಹುಟ್ಟುಹಬ್ಬದ ಪ್ರಯುಕ್ತ ನಯನ ಬ್ರಹ್ಮ ಅಭಿನಂದನಾ ಗ್ರಂಥವನ್ನು ಬರೆದಿದ್ದಾರೆ. ಕುಲಕರ್ಣಿಯವರು ಅರ್ಪಿತ ಮನೋಭಾವದಿಂದ ನಾಡಿನ ಹಿತಕ್ಕಾಗಿ ಸದಾ ಚಿಂತಿಸುತ್ತಾರೆ. ಅವರ ಅಪಾರ ಅನುಭವ, ಶ್ರದ್ಧೆ, ತ್ಯಾಗವನ್ನು ಸರಕಾರ ಸಮರ್ಪಕವಾಗಿ ಬಳಸಿಕೊಳ್ಳುವುದು ಅವಶ್ಯ.

ಇತಿಹಾಸ, ಸಂಶೋಧನೆ, ಸಾಹಿತ್ಯ ಸಂಪಾದನೆ, ಅನುವಾದ, ಪತ್ರಿಕಾ ಅಂಕಣ, ಗಮಕ, ಜಾನಪದ, ಪರಂಪರೆ, ರಕ್ಷಣೆ, ನೀರಾವರಿ, ಕೃಷಿ, ಪುನರ್ವಸತಿ ಹೀಗೆ ಸಮಾಜವನ್ನು ಸುಂಸ್ಕೃತವಾಗಿಸುವ ಕಣ್ಣಿಗೆ ಕಾಣುವ ವಿಷಯದ ಬಗ್ಗೆ ಅವರು ಬರೆಯುತ್ತಾರೆ. ಇಂದಿಗೂ ಕ್ರಿಯಾಶೀಲರಾಗಿರುವ ಅವರು ನಮ್ಮ ಮಧ್ಯದಲ್ಲಿ ನಡೆದಾಡುವ ನೀರಾವರಿ ಎನ್‌ಸೈಕ್ಲೋಪಿಡಿಯಾ ಎನಿಸಿಕೊಂಡಿದ್ದಾರೆ. ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

16-10-2020 ಕುಸ್ತುಬ್ರ ವಿಶ್ವಪಾಠ.

ಜಯಾಗೆ ಜೈಲು – ಕರ್ನಾಟಕಕ್ಕೆ ಯಾತನೆ?

ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರಿಗೆ, ಅಕ್ರಮ ಆಸ್ತಿಯ ಬಗ್ಗೆ 4 ವರುಷ ಜೈಲು ಶಿಕ್ಷೆ ನೂರುಕೋಟಿರೂಪಾಯಿದಂಡವಾಯಿತು. ವಾಸ್ತವದಲ್ಲಿ ಅವರ ಈ ಶಿಕ್ಷೆ, ದಂಡಗಳಿಗೂ ಕರ್ನಾಟಕಕ್ಕೂ ಯಾವುದೇ ಸಂಬಂಧ ಇಲ್ಲ. ಅವರ ಮೇಲಿನ ಮೊಕದ್ದಮೆಯ ಮೂಲ ತಮಿಳುನಾಡು. ಅಲ್ಲಿಯೇ ಮೊಕದ್ದಮೆ ದಾಖಲಾದದ್ದು ಮತ್ತು ಪ್ರಾರಂಭದಲ್ಲಿ ಮೊಕದ್ದಮೆಯ ವಿಚಾರಣೆ ನಡೆದದ್ದೂ ತಮಿಳುನಾಡಿನಲ್ಲಿ. ಅನಂತರದ ದಿನಗಳಲ್ಲಿ ತಮ್ಮ ನಾಡಿನಲ್ಲಿ ನಿಷ್ಪಕ್ಷಪಾತವಾಗಿ ನ್ಯಾಯ ದೊರೆಯುವುದಿಲ್ಲವೆಂದು ಆಪಾದಿತರು ಭಿನ್ನವಿಸಿಕೊಂಡರೆಂದು ಭಾರತದ ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಯನ್ನು ಕರ್ನಾಟಕಕ್ಕೆ ವರ್ಗಾಯಿಸಿತು.

ಸರಿ, ಇದೀಗ 18 ವರುಷಗಳ ನಂತರ ಮೊಕದ್ದಮೆಯ ವಿಚಾರಣೆ ಪೂರ್ತಿಗೊಂಡು ಫಲಿತಾಂಶವೂ ಬಂದಿತು. ಫಲಿತಾಂಶ ಏನೇ ಬಂದಿರಲಿ, ಕರ್ನಾಟಕದ ಪಾತ್ರ ಇಲ್ಲಿಗೆ ಮುಗಿಯಲಿಲ್ಲವೆ? ಸುಪ್ರೀಂ ಕೋರ್ಟ್‌ದ ಆದೇಶದಂತೆ ಮೊಕದ್ದಮೆಯನ್ನು ನಡೆಸಿ ಅದನ್ನು ಯಾವ ಅಡೆತಡೆಗಳಿಲ್ಲದೆ ಪೂರ್ತಿಗೊಳಿಸಿದ ಶ್ರೇಯಸ್ಸು ಕರ್ನಾಟಕಕ್ಕೆ ಸಲ್ಲುತ್ತದೆ. ಹಾಗೆಂದ ಮಾತ್ರಕ್ಕೆ ಫಲಿತಾಂಶ ಬಂದ ನಂತರದ ಮುಂದಿನ ಎಲ್ಲ ಆಗುಹೋಗುಗಳಿಗೂ ಕರ್ನಾಟಕವೇ ಜವಾಬ್ದಾರಿ ಎಂದರೆ, ಇದಾವ ನ್ಯಾಯ ಎಂಬುದು ಕರ್ನಾಟಕದ ಪ್ರಶ್ನೆ.

ವಾಸ್ತವದಲ್ಲಿ ತೀರ್ಪು ಬಂದನಂತರ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ತಮಿಳುನಾಡು ಹೊಣೆಯಾಗಬೇಕು. ಅದು ಬಿಟ್ಟು, ಆಪಾದಿತರಿಗೆ ಶಿಕ್ಷೆಯಾಗಿದ್ದರೆ ಅವರು ಅದನ್ನು ತಮಿಳುನಾಡಿನಲ್ಲಿ ಅನುಭವಿಸಬೇಕು. ಅಥವಾ ಮುಂದಿನ ನ್ಯಾಯಾಂಗ ಪ್ರಕ್ರಿಯೆಗಳಿಗೂ ತಮಿಳುನಾಡು ಮೂಲವಾಗಬೇಕೆ ಹೊರತು ಕರ್ನಾಟಕ ಅಲ್ಲ ಎಂಬುದು ಪರಿಣತ ಕ್ರಿಮಿನಲ್ ನ್ಯಾಯವಾದಿಗಳ ಅಭಿಪ್ರಾಯವಾಗಿದೆ. ಕೆಳಗಿನ ಹಂತದ ನ್ಯಾಯಾಲಯದ ತೀರ್ಪನ್ನು ಅದೇ ಪ್ರದೇಶದ ಮೇಲಿನ ಹಂತದ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕು ಎಂಬುದು ಸಹಜ ನ್ಯಾಯಾಂಗ ವ್ಯವಸ್ಥೆಯಾಗಿದ್ದರೂ ಜಯಲಲಿತಾ ಅವರ ವಿಷಯದಲ್ಲಿ ಈ ಮೊಕದ್ದಮೆಯನ್ನು ಕರ್ನಾಟಕದಲ್ಲಿಯ ಕೆಳಗಿನ ಹಂತದ ನ್ಯಾಯಾಲಯದಲ್ಲಿ ನಡೆಸಿದ್ದು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಹೊರತು ಕರ್ನಾಟಕದಲ್ಲಿ ಉಗಮವಾದ ಮೊಕದ್ದಮೆ ಇದಲ್ಲ ಎಂಬುದು ಸ್ಪಷ್ಟವಾಗಿದೆ. ಕರ್ನಾಟಕದಲ್ಲಿಯು ಸಿಬಿಐ ವಿಶೇಷ ನ್ಯಾಯಾಲಯ ಈ ಮೊಕದ್ದಮೆಯನ್ನು ನಡೆಸಿದ್ದರೂ ಮೊಕದ್ದಮೆಯ ನಂತರ ಅದು ಸಂಬಂಧಪಟ್ಟದ್ದು ತಮಿಳುನಾಡಿನ ಉಚ್ಚ ನ್ಯಾಯಾಲಯಕ್ಕೆ ಹೊರತು ಕರ್ನಾಟಕದ್ದಲ್ಲ. ಇದೀಗ ಕರ್ನಾಟಕದಲ್ಲಿ ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪು ಹೊರಬಿದ್ದ ಮೇಲೆ ಅನಿವಾರ್ಯಕವಾಗಿ ಕರ್ನಾಟಕದಲ್ಲಿ ಅದರ ಪರಿಣಾಮವನ್ನು ಅನುಭವಿಸಬೇಕಾಗಿದೆ. ಜಯಲಲಿತಾ ಅವರಿಗೆ ಜೈಲು ಶಿಕ್ಷೆಯಾಗಿದ್ದರೆ ಅವರು ತಮಿಳುನಾಡಿನ ಜೈಲಿನಲ್ಲಿ ಇರಬೇಕೇ ಹೊರತು ಕರ್ನಾಟಕದ ಜೈಲಿನಲ್ಲಲ್ಲ. ಸಿಬಿಐ ವಿಶೇಷ ಕೋರ್ಟು ಪರಪ್ಪನ ಅಗ್ರಹಾರದ ಜೈಲಿನ ಆವರಣದಲ್ಲಿ ಇದೆಯೆಂದು ಅವರನ್ನು ಅಲ್ಲಿಯೇ ಇಡಬೇಕೆ? ಅಲ್ಲಿಂದ ಪ್ರಾರಂಭವಾದ ಈ ಅನಗತ್ಯ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲಿನಲ್ಲಿಯ ಅವರ ವಾಸ್ತವ್ಯ ಕರ್ನಾಟಕಕ್ಕೆ ಇನ್ನಿಲ್ಲದ ತಲೆಬೇನೆಗೆ ಕಾರಣವಾಗಿದೆ. ಶಿಕ್ಷೆಗೆ ಕಾರಣರಾದವರು ರಾಜಕೀಯ ವ್ಯಕ್ತಿ, ತಮಿಳುನಾಡಿನ ಆಡಳಿತ ಪಕ್ಷದ ಮುಖಂಡರು, ಆ ನಾಡಿನ ಮುಖ್ಯಮಂತ್ರಿಯಾದ್ದರಿಂದ ಪ್ರತಿಭಟನೆ ಸಹಜವಾದದ್ದು.

ಆದರೆ ಅದು ಕರ್ನಾಟಕದಲ್ಲಿ ಯಾಕೆ ಎಂಬುದು ಕರ್ನಾಟಕ ಜನರ ಪ್ರಶ್ನೆ. ತೀರ್ಪು ಹೊರಬಿದ್ದ ತಕ್ಷಣ ಅವರನ್ನು ತಮಿಳುನಾಡಿಗೆ ಸ್ಥಳಾಂತರಿಸಿ ಬಿಟ್ಟಿದ್ದರೆ, ಕಳೆದ ನಾಲ್ಕು–ಐದು ದಿನಗಳಿಂದ ಕರ್ನಾಟಕದ ರಾಜಧಾನಿಯಲ್ಲಿ ನಡೆಯುತ್ತಿರುವ ಅನವಶ್ಯಕ ರಾದ್ಧಾಂತ, ಪ್ರತಿಭಟನೆ, ಕರ್ನಾಟಕದ ಆಸ್ತಿ ಪಾಸ್ತಿಗಳಿಗೆ ಆಗುತ್ತಿರುವ ಹಾನಿ ತಪ್ಪುತ್ತಿರಲಿಲ್ಲವೆ? ಇದು ಕರ್ನಾಟಕದ ಜನತೆಯ ಪ್ರಶ್ನೆ. ತಮಿಳುನಾಡಿನ ಆಡಳಿತಪಕ್ಷದ ಎಲ್ಲ ಸದಸ್ಯರು, ಸಚಿವರು, ಇಡೀ ತಮಿಳು ನಾಡಿನ ಸರಕಾರವೇ ಬೆಂಗಳೂರಿಗೆ ಬರುತ್ತಿದೆ. ತಮಿಳುನಾಡಿನ ರಾಜಧಾನಿ ಚೆನ್ನೈ ಅಲ್ಲ ಬೆಂಗಳೂರು ಎಂಬಂತಾಗಿದೆ. ಅವರ ಆಗಮನದಿಂದಾಗಿ ಇಲ್ಲಿಯ ಕಾನೂನು ಪಾಲನೆ ವ್ಯವಸ್ಥೆ ಕರ್ನಾಟಕ ಸರಕಾರದ್ದಾಗಿದೆ. ಪ್ರಜಾಪ್ರಭುತ್ವದಲ್ಲಿ ಯಾವರೀತಿಯಿಂದ ನೋಡಿದರೂ ಈ ವ್ಯವಸ್ಥೆಗೆ ಉತ್ತರ ದೊರೆಯುತ್ತಿಲ್ಲ.

ಇಲ್ಲಿ ಪ್ರಭಾವೀ ವ್ಯಕ್ತಿಗಳ ಬಗ್ಗೆ ಅನಾದರ ಅಥವಾ ಅನುಕಂಪದ ಪ್ರಶ್ನೆಯು ಉದ್ಭವಿಸುವುದಿಲ್ಲ. ನ್ಯಾಯಾಂಗ ಪ್ರಕ್ರಿಯೆಯಲ್ಲಿ ನಡೆದ ಘಟನೆ ಇದು. ಅದಕ್ಕೆ ಸಂಬಂಧಪಟ್ಟವರು ಹೊಣೆಯೇ ಹೊರತು ಸಂಬಂಧವೇ ಇಲ್ಲದ ಕರ್ನಾಟಕದ ಹೊಣೆ ಇದರಲ್ಲಿ ಏನೂ ಇಲ್ಲ ಎಂಬುದು ಸಾರ್ವಜನಿಕರ ಅಭಿಮತವಾಗಿದೆ. ಹಾಗೆ ನೋಡಿದರೆ ವೈಯಕ್ತಿಕವಾಗಿ ಜಯಲಲಿತಾರ ಬಗ್ಗೆ ಕರ್ನಾಟಕದಲ್ಲಿ ವಿಶೇಷವಾಗಿ ಕಾವೇರಿ ಜಲಾನಯನದ ಜನರಿಗೆ ಎಳ್ಳಷ್ಟೂ ಆಸಕ್ತಿ ಇಲ್ಲ, ಅನುಕಂಪವೂ ಇಲ್ಲ. ಹಲವಾರು ಬಾರಿ ಕರ್ನಾಟಕದ ನಾಯಕರನ್ನು ಸುಪ್ರೀಮ ಕೋರ್ಟ ಮೆಟ್ಟಲೇರುವಂತೆ ಮಾಡಿದ [ಕು]ಪ್ರಸಿದ್ಧಿ ಅವರದು. ಆದಾಗ್ಯೂ ಈ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ಆದೇಶ ಮಾಡಿದೆ ಎಂದು ಗೌರವದಿಂದ ಪರಿಪಾಲನೆ ಮಾಡಿತು. ಅದರಲ್ಲಿ ಸಾಕಷ್ಟು ಜವಾಬ್ದಾರಿಯನ್ನೂ ಕರ್ನಾಟಕ ವಹಿಸಬೇಕಾಯಿತು. ವಿಶೇಷವಾಗಿ ಮೋಲೀಸ ಬಂದೋಬಸ್ತ್, ಸಿಬಿಐ ವಿಶೇಷ ಕೋರ್ಟು ವ್ಯವಸ್ಥೆ ಇತ್ಯಾದಿ ಅನೇಕ ಅನವಶ್ಯಕ ಖರ್ಚಿಗೂ ಕರ್ನಾಟಕ ಒಳಗಾಯಿತು. ಈಗ ಮತ್ತೆ ತೀರ್ಪು ಬಂದಮೇಲೂ ಕರ್ನಾಟಕದ ಜನತೆ ವಿಶೇಷವಾಗಿ ಬೆಂಗಳೂರು ಜನತೆ ಯಾಕೆ ಯಾತನೆ ಅನುಭವಿಸಬೇಕು?

■ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

5-10-2014 ಪಂ. ಕೆ.

ರಾಜಕಾರಣಿಗಳು ಮತ್ತು ಸಮಾಜದ ನಿರ್ಲಕ್ಷ್ಯದಿಂದಾಗಿ ಇದು ಎಷ್ಟು ಇಲ್ಲ. ಒಟ್ಟಾರೆ ತಮ್ಮ ದಂಧೆ ನಡೆಯಬೇಕು ಅಷ್ಟೇ. ನಿರಂತರ ಮಾದಕ ಮುಂದಿನ ಪೀಳಿಗೆಗೆ ಮಾಡಬಹುದಾದ ಮಹದುಪಕಾರವಾಗುತ್ತದೆ.

ಕಾವೇರಿಗೆ ದಿಕ್ಕಿಲ್ಲ, ಕೃಷ್ಣೆಯ ಕೇಳೋರ್ಯಾರು?

ಕೃಷ್ಣ ಕೊಲ್ಹಾರ ಕುಲಕರ್ಣಿ

'ಕಾವೇರಿಯ ಕೂಗು ಕೃಷ್ಣೆಗೆ ಏಕಿಲ್ಲ' ಇದು ಬಹಳ, ಬಹಳ ಹಿಂದಿನ ಮಾತು. ಕರ್ನಾಟಕ ಏಕೀಕರಣ ಆದಂದಿನಿಂದಲೇ ಕೇಳಿ ಬರುವ ಮಾತು. ಅಂದರೆ 57 ವರುಷಗಳಿಂದ ಉತ್ತರಕರ್ನಾಟಕದವರು ಕೇಳುತ್ತಲೇ ಬಂದಿದ್ದಾರೆ. ಆದರೆ ಅದಕ್ಕೆ ಉತ್ತರ ಮಾತ್ರ ದೊರೆತಿಲ್ಲ. ಈಗ ಕಾವೇರಿಯನ್ನೂ ಕೇಳುವವರು ಇಲ್ಲ ಎನ್ನುವಂತಾಗಿದೆ. ಹೊಸ ಸರಕಾರ ಬಂದಂದಿನಿಂದ ಕರ್ನಾಟಕದ ಯಾವ ನದಿಗಳನ್ನೂ ಕೇಳುವವರು ಇಲ್ಲ ಎನ್ನುವಂತಾಗಿದೆ. ಹೆಸರಿಗೆ ಒಬ್ಬರು ಜಲಸಂಪನ್ಮೂಲ ಸಚಿವರು, ಸಚಿವರ ಪಟ್ಟಿಯಲ್ಲಿ ಇದ್ದಾರೆಯೇ ಹೊರತು ಅವರು ಜಲವನ್ನು ನೋಡುತ್ತಲೇ ಇಲ್ಲ. ಕಾವೇರಿಯ ಸಮಸ್ಯೆ ಮತ್ತೆ ಸುಪ್ರೀಂ ಕೋರ್ಟಿನಲ್ಲಿ ಭೋರ್ಗರೆಯುತ್ತಿದೆ ಎಂದರೆ ಏನರ್ಥ? ಕಾವೇರಿ ನೀರು ನಿರ್ವಹಣಾ ಸಮಿತಿ ನಿರ್ಮಾಣವಾದ ಮೇಲೆ ಈ ಸಂದರ್ಭ ಬರುವ ಅಗತ್ಯವೇ ಇರಲಿಲ್ಲ. ಆಂತರಿಕ ಸಮಸ್ಯೆಗಳನ್ನು ಬಗೆ ಹರಿಸುವ ನಿಟ್ಟಿನಲ್ಲೇ 'ನಿರ್ವಹಣಾ ಸಮಿತಿ' ಇದೆ. ಅಲ್ಲಿ ನಮ್ಮ ದನಿಯೇ ಇಲ್ಲ ಎಂದಾದ ಮೇಲೆ ತಮಿಳುನಾಡು ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿದೆ. ಇಂಥ ಸಂದರ್ಭ ಈ ಹಿಂದೆ ಬಂದಿತ್ತೇ? ಇದು ಏನನ್ನು ತೋರಿಸುತ್ತದೆ? ನಿರ್ವಹಣಾ ಸಮಿತಿಯಲ್ಲಿ ರಾಜ್ಯ ಪರಿಸ್ಥಿತಿಯನ್ನು ಅರ್ಥಮಾಡಿಸುವಲ್ಲಿ ಸಾಧ್ಯವಾಗಿಲ್ಲ. ಇದು ನೀರಾವರಿ ಸಚಿವರ ವೈಪಲ್ಯ ಅಲ್ಲದೆ ಬೇರೇನೂ ಅಲ್ಲ.

ಕರ್ನಾಟಕದಲ್ಲಿ ಸರ್ಕಾರಗಳು ಬಂದ ಮೇಲೆ ಅನೇಕ ನೀರಾವರಿ ಸಚಿವರು ಬಂದು ಹೋಗಿದ್ದಾರೆ. ಉತ್ತರ ಕರ್ನಾಟಕದ ಜನರು ಆಗಿನಿಂದಲೂ ಕೂಗುತ್ತಿದ್ದಾರೆ. ಆದರೆ ಕೇಳುವವರು ಯಾರೂ ಇಲ್ಲ. ಕಾವೇರಿ ಬಗ್ಗೆ ಹಾಗಿದ್ದಿಲ್ಲ ಎಂಬುದೊಂದೇ ಸಮಾಧಾನ ಇತ್ತು. ಈಗ ಅದೂ ಹೋಯಿತು ಎಂದು ಹಾದಿ ಬೀದಿಯ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಹಿಂದೆ ಉತ್ತರ ಕರ್ನಾಟಕದ ಕೆಲವರು ನೀರಾವರಿ ಸಚಿವರಾಗಿದ್ದರು. ಅವರಲ್ಲಿ ಎಚ್. ಕೆ. ಪಾಟೀಲ, ಬಸವರಾಜ ಬೊಮ್ಮಾಯಿ ಮತ್ತು ಎಂ.ಬಿ ಪಾಟೀಲ ಅವರುಗಳು ತಮ್ಮ ಇತಿಮಿತಿಯಲ್ಲಿ ಅಖಂಡ ಕರ್ನಾಟಕದೊಂದಿಗೆ ಉತ್ತರ ಕರ್ನಾಟಕಕ್ಕೂ ನ್ಯಾಯ ಒದಗಿಸಿ ಕೊಟ್ಟರು. ವಿಶೇಷವಾಗಿ ತೀರ ಇತ್ತೀಚೆಗೆ ಈಗಿದ್ದವರ ಸರ್ಕಾರದಲ್ಲೇ ಎಂ.ಬಿ. ಪಾಟೀಲರು ನೀರಾವರಿ ಸಚಿವರಾಗಿದ್ದಾಗ ಅಖಂಡ ಕರ್ನಾಟಕದ ಗಮನ ಸೆಳೆದು ಕೆಲಸ ಮಾಡಿದರು. ಅವರಿಗೆ ನೀರಾವರಿ ಎಂದರೇನು ಎಂಬುದೇ ಗೊತ್ತಿಲ್ಲ ಅಂದ ಕಾವೇರಿ ತೀರದ ಮುಖಂಡರು ಅನಂತರ ಮಂಡಿ ಊರಿದ್ದು ಈಗ ಇತಿಹಾಸ. ಅಂತೆಯೇ ಇಂದು ಎಂ.ಬಿ. ಪಾಟೀಲರ ಕೆಲಸದೊಂದಿಗೆ ಇಂದಿನ ನೀರಾವರಿ ಸಚಿವರ ಕೆಲಸವನ್ನು ತುಲನಾತ್ಮಕವಾಗಿ ನೋಡುತ್ತಿದ್ದಾರೆ. ಸಾಮಾಜಿಕ ಜಾಲ ತಾಣಗಳಲ್ಲಿ ಚರ್ಚಿಸುತ್ತಿದ್ದಾರೆ. ಇದೆಲ್ಲ ಇಂದಿನ ನೀರಾವರಿ ಸಚಿವರಿಗೆ ಕೇಳುತ್ತಿಲ್ಲವೆ? ಅಥವಾ ಕೇಳಿಯೂ ಕೇಳದಂತಿದ್ದಾರೆಯೆ?

ಕಳೆದ ಐದು ವರುಷಗಳ ಹಿಂದೆ ಎಂ.ಬಿ. ಪಾಟೀಲರಿಗೆ ಕೊಟ್ಟ ನೀರಾವರಿ ಇಲಾಖೆ ಕುದುರೆಯನ್ನು ಅವರಿಗೆ ಏರಲಿಕ್ಕೇ ಬರುವುದಿಲ್ಲ ಎಂದು ಅನ್ನುತ್ತಿದ್ದವರಿಗೆ ಅನಂತರ ಗೊತ್ತಾದದ್ದು, ಕೊಟ್ಟ ಕುದುರೆಯನ್ನೇ ಪಳಗಿಸಿ, ಕೊಟ್ಟಪ್ಪರಲ್ಲಿಯೇ ಜನ ಮೆಚ್ಚುವಂತೆ ಕೆಲಸ ಮಾಡಿದರು. ಅವರ ಕೆರೆ ತುಂಬುವ ಯೋಜನೆಯನ್ನು ಪಕ್ಷ ಭೇದ ಮರೆತು ಅಖಂಡ ಕರ್ನಾಟಕದ ಜನರು ಮೆಚ್ಚಿದರು. ಇದೆಲ್ಲ ಇಂದಿನವರಿಗೆ ಕಾಣಿಸುತ್ತಿಲ್ಲವೆ? ಅವರ ಕಾಲದಲ್ಲಿ ಕಾವೇರಿ ಸಮಸ್ಯೆ ಉದ್ಭವವಾದಾಗ ಅವರೇ ಸ್ವತಃ ಸುಪ್ರೀಂ ಕೋರ್ಟ್ ಆವರಣದಲ್ಲಿ ನಿಂತು ರಾಜ್ಯದ ವಕೀಲರಿಗೆ ಸೂಚನೆ ಕೊಡುತ್ತಿದ್ದರು. ಆಡಳಿತ ಪಕ್ಷದ ಆಯ್ಕೆಯಾಗಿ ಬಂದ ಶಾಸಕರಿಗೆ ನೀರಾವರಿ ಇಲಾಖೆ ಅತ್ಯಂತ ಆಕರ್ಷಣೀಯ. ಆದರೆ ಅದನ್ನು ಪಟ್ಟು ಹಿಡಿದು ತೆಗೆದುಕೊಂಡ ಮೇಲೆ ಇಡೀ ರಾಜ್ಯದ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನವನ್ನೇ ಮಾಡುವುದಿಲ್ಲ. ಇದು ಬಹುತೇಕ ಅವರ ವೈಫಲ್ಯಕ್ಕೆ ಕಾರಣವಾಗುತ್ತದೆ. ಈಗಲೂ ಕಾಲ ಮಿಂಚಿಲ್ಲ. ಎಂ.ಬಿ. ಪಾಟೀಲರಿಗೆ ಅಥವಾ ಅಂಥವರಿಗೆ ನೀರಾವರಿ ಇಲಾಖೆಯನ್ನು ಕೊಟ್ಟರೆ, ಪಕ್ಷ ತನ್ನ ವರ್ಚಸ್ಸನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಕಾವೇರಿ ಸಮಸ್ಯೆಗೆ ಒಂದು ದಾರಿ ಕಾಣುವುದರೊಂದಿಗೆ ಕೃಷ್ಣೆಗೂ ಸಹಾಯವಾಗುತ್ತದೆ.

ag on behalf of Loka Shikshana Trust Printed at the Metropolitan Media Co.Ltd. SPL 9 KSSIDC Industrial Estate, Kaladagi Road, Vidyagiri, Bagalkot-587102
kar Road, Hubli. 580020. Phone No. 08354-233865, e-mail: skbgk12@gmail.com, RNI Reg No: 3544/57. Executive Editor: Mohan Hegde

ಕಾದಿದೆ ಕೃಷ್ಣಾ-ಬಿ ತೀರ್ಪಿನಲ್ಲಿ ಆಘಾತ!

ಭಾಗ 2 (ಮುಂದುವರಿದ ಸರಣಿಯ ಎರಡನೆಯ ಕಂತು)

ಆಲಮಟ್ಟಿ 524.0256 ಮೀಟರ್ ಎತ್ತರದ ಅಗತ್ಯ

ಕರ್ನಾಟಕವು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ತನ್ನ ನಿಗದಿತ ಗುರಿಯನ್ನು ಮುಟ್ಟಲು ಆಲಮಟ್ಟಿ ಅಣೆಕಟ್ಟನ್ನು ೫೨೪.೦೨೫೬ ಮೀಟರಿಗೆ ಎತ್ತರಿಸುವುದು ಅತ್ಯಂತ ಅಗತ್ಯವಾಗಿದೆ. ಇಲ್ಲದಿದ್ದಲ್ಲಿ ಬಹುದೊಡ್ಡ ನಷ್ಟಕ್ಕೆ ಗುರಿಯಾಗುತ್ತದೆ. ತೀರ್ಪಿನಲ್ಲಿ ಕರ್ನಾಟಕಕ್ಕೆ ಅಧಿಕ ನೀರು ದೊರೆತರೂ ಅದರ ಬಳಕೆ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನೇ ಅವಲಂಬಿಸಿದೆ.

ಅಣೆಕಟ್ಟನ್ನು ೫೨೪.೦೨೫೬ ಮೀಟರಿನವರೆಗೆ ಎತ್ತರಿಸದಿದ್ದರೆ ಬಿಜಾಪುರ, ಕಲಬುರ್ಗಿ, ರಾಯಚೂರು ಮತ್ತು ಬಾಗಲಕೋಟೆ ಜಿಲ್ಲೆಗಳ ಸುಮಾರು ೪.೫ ಲಕ್ಷ ಹೆಕ್ಟೇರು ಭೂಮಿ ನೀರಾವರಿಯಿಂದ ವಂಚಿತವಾಗುತ್ತದೆ. 'ಬಿ' ಸ್ಕೀಮಿನ ನೀರಿನ ಹಂಚಿಕೆಯನ್ನೇ ಅವಲಂಬಿಸಿದ ಬಿಜಾಪುರ ಜಿಲ್ಲೆಯ ಮುಳವಾಡ, ಚಿಮ್ಮಲಗಿ, ಗುತ್ತಿ ಬಸವಣ್ಣ ಯೋಜನೆಗಳು ಪೂರ್ತಿಗೊಳ್ಳುವುದಿಲ್ಲ.

ಆಲಮಟ್ಟಿ ಅಣೆಕಟ್ಟಿನ ಎತ್ತರ ೫೨೪.೦೨೫೬ ಮೀಟರ್‌ವರೆಗೆ ಹೆಚ್ಚಿಸುವುದು ತುಂಬ ಅಗತ್ಯವಾಗಿದೆ. ಇಲ್ಲದಿದ್ದರೆ ವಿಜಾಪುರ, ಕಲ್ಬುರ್ಗಿ, ರಾಯಚೂರು, ಬಾಗಲಕೋಟೆ ಜಿಲ್ಲೆಗಳ ೪.೫ ಲಕ್ಷ ಹೆಕ್ಟೇರು ಭೂಮಿ ನೀರಾವರಿಯಿಂದ ವಂಚಿತವಾಗುತ್ತದೆ. ಮುಳವಾಡ, ಚಿಮ್ಮಲಗಿ, ಗುತ್ತಿ ಬಸವಣ್ಣ ಯೋಜನೆಗಳು ಪೂರ್ತಿಗೊಳ್ಳುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಈಗಲಾದರೂ ಪರಿಣಾಮಕಾರಿಯಾದ ವಾದವನ್ನು ನ್ಯಾ. ಬ್ರಿಜೇಶ್‌ಕುಮಾರ್ ನೇತೃತ್ವ ಆಯೋಗದ ಮುಂದೆ ಮಂಡಿಸಬೇಕಾಗಿದೆ.

ಕರ್ನಾಟಕ ಸರಕಾರವು ಈ ದಿಸೆಯಲ್ಲಿ ಪರಿಣಾಮಕಾರಿಯಾದ ವಾದವನ್ನು ಮಂಡಿಸಬೇಕಾಗಿದೆ. ಸಾಕ್ಷಿ-ಆಧಾರಗಳನ್ನು ನಮ್ಮ ನ್ಯಾಯವಾದಿಗಳಿಗೆ ನೀಡುವ ಅಗತ್ಯವಿದೆ. ಇಲ್ಲವಾದಲ್ಲಿ ಈ ಹಿಂದಿನ ಕಾವೇರಿ ಹಾಗೂ ಕೃಷ್ಣಾ ಕೊಳ್ಳದ ಬಚಾವತ್ ತೀರ್ಪಿನಲ್ಲಿ ಕರ್ನಾಟಕಕ್ಕೆ ಆದ ಅನ್ಯಾಯವೇ ಮರುಕಳಿಸುವ ಸಾಧ್ಯತೆ ಇದೆ. ಎರಡೂ ತೀರ್ಪುಗಳಲ್ಲಿ ನ್ಯಾಯಾಧೀಶರು ಕರ್ನಾಟಕದ ನ್ಯಾಯವಾದಿಗಳು ಪರಿಣಾಮಕಾರಿಯಾದ ವಾದವನ್ನು ಮಾಡಿಲ್ಲವೆಂದು ತಮ್ಮ ತೀರ್ಪಿನಲ್ಲಿ ಹಲವಾರು ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಕರ್ನಾಟಕ ನ್ಯಾಯವಾದಿಗಳಿಗೆ ಅಸಾಮರ್ಥ್ಯ

ಕಾವೇರಿ ತೀರ್ಪಿನ ಎರಡನೆಯ ಸಂಪುಟದ ೮೩, ೪೪ನೆಯ ಪುಟಗಳಲ್ಲಿ ನ್ಯಾಯಾಧೀಶರು ಹೀಗೆ ಹೇಳುತ್ತಾರೆ. "ಭಾರತಕ್ಕೆ ಸ್ವಾತಂತ್ರ್ಯ ದೊರೆತಮೇಲೆ ಭಾರತೀಯ ಸ್ವಾತಂತ್ರ್ಯ ಕಾನೂನು ೧೯೪೭ರ ಸೆಕ್ಷನ್ ೭(೧)ರ ಅಡಿಯಲ್ಲಿ ಕರ್ನಾಟಕವು ಹಿಂದೆ ಆದ ಒಪ್ಪಂದಗಳ ಬಗ್ಗೆ ದೂರನ್ನು ಕೊಡಲಿಲ್ಲ. ಖಂಡಿಸಲೂ ಇಲ್ಲ. ಆದ್ದರಿಂದ ಒಪ್ಪಂದಗಳು ಜಾರಿಯಲ್ಲಿದ್ದಂತಾದವು" ಎಂದು ಕಾವೇರಿ ನ್ಯಾಯಾಧಿಕರಣವು ಸ್ಪಷ್ಟವಾಗಿ ಹೇಳಿದೆ ಮತ್ತೆ ಮುಂದುವರಿದು ಪುಟ ೪೬ರಲ್ಲಿ "ಮೈಸೂರು ರಾಜ್ಯ ನಿರ್ಮಾಣವಾದ ಮೇಲೂ ಆದು ೧೯೭೪ರ ಒಪ್ಪಂದವನ್ನು ಮಾನ್ಯ ಮಾಡಿ ಆದರಂತೆ ೧೯೭೪ರವರೆಗೆ (೫೦ ವರುಷ) ನಡೆದುಕೊಂಡು ಬಂದು ಈಗ ೮೦ ವರುಷಗಳಾದ ಮೇಲೆ ಆ ಒಪ್ಪಂದವನ್ನು ಗಮನಿಸಬಾರದು ಎಂದರೆ ಹೇಗೆ ಸಾಧ್ಯ?" ಎಂದು ಕೇಳಿದೆ. ಈ ಹಿನ್ನೆಲೆಯಲ್ಲಿ ವಿಶಾಲ ಮೈಸೂರು ರಾಜ್ಯ ಆನಂತರದ ಕರ್ನಾಟಕ ರಾಜ್ಯದ ಸರಕಾರಗಳು ಪ್ರಾರಂಭದಲ್ಲಿ ವಿಷಯದ ಗಂಭೀರತೆಯನ್ನು ಗಮನಿಸದಿದ್ದುದನ್ನು ನ್ಯಾಯಾಧಿಕರಣವು ಎತ್ತಿ ತೋರಿಸಿದೆ.

ಬಚಾವತ್ ಆಯೋಗದ ತೀರ್ಪಿನಲ್ಲೂ ಇದೇ ಅನುಭವ ಕರ್ನಾಟಕಕ್ಕೆ ಆಗಿದೆ. ಬಿಜಾಪುರ ಜಿಲ್ಲೆಗೆ ಬರದೇ ಹೋದ ಬಹು ಚರ್ಚಿತ ಕೊಯ್ನಾ ನೀರಿನ ಬಗ್ಗೆ ಉಲ್ಲೇಖಿಸುತ್ತ ಬಚಾವತ್ ಆಯೋಗವು ತನ್ನ ತೀರ್ಪಿನ ೭೮ನೆಯ ಪುಟದಲ್ಲಿ ಹೀಗೆ ಹೇಳಿದೆ.

"ರಾಜ್ಯ ಪುನರ್ವಿಂಗಡಣೆ ಕಾಯ್ದೆಯನ್ನು

"ರಾಜ್ಯ ಪುನರ್ವಿಂಗಡಣೆ ಕಾನೂನು ೧೯೫೬ರ ಅಧಿನಿಯಮ ೧೦೭ರ ಅಡಿಯಲ್ಲಿ ಮೈಸೂರು ಸರಕಾರವು ತನ್ನ ಹಕ್ಕನ್ನು ಕೇಳಿತು. ಆದರೆ ಅದಕ್ಕಾಗಿ ಮೈಸೂರು ಸರಕಾರದ ವಕೀಲರು ಈ ಹಕ್ಕಿಗಾಗಿ ಒತ್ತಾಯಿಸಲಿಲ್ಲ."

ಇನ್ನೊಂದು ಸಂದರ್ಭದಲ್ಲಿ ತನ್ನ ತೀರ್ಪಿನ ೮೯ನೆಯ ಪುಟದಲ್ಲಿ ಹೀಗೆ ಹೇಳಿದೆ. "ಒಂದು ಹಂತದಲ್ಲಿ ಕರ್ನಾಟಕದ ವಕೀಲರಾದ ಮಿ.ಕೃಷ್ಣರಾವ್ ಅವರು ಮಹಾರಾಷ್ಟ್ರದ ಕಟ್ಟಿಗಳಲ್ಲಿ ನೀರು ಸಂಗ್ರಹಿಸುವಾಗ ಮಹಾರಾಷ್ಟ್ರ ಸರಕಾರದ ಮೇಲೆ ನಿರ್ಬಂಧ ಹೇರಬೇಕು ಎಂದು ವಾದಿಸಿದರಾದರೂ ಆನಂತರ ದಿನಾಂಕ ೧೭-೮-೧೯೭೩ರಂದು ಅವರೆ ತಮ್ಮ ಬೇಡಿಕೆಗಳ ಮೇಲೆ ಒತ್ತಡ ಹೇರಲಿಲ್ಲ. ಗೋಟೂರು, ಕೋಚೇರಿ ಕಟ್ಟಿಗಳ ಬಗ್ಗೆ ಹಾಗೂ ಕರ್ಲಹಟ್ಟಿ ಭಂಡಾರಗಳ ಜಲಾಶಯಗಳ ಬಗ್ಗೆ ಈ ಆಯೋಗದ ಎದುರು ವಿಷಯಗಳನ್ನು ಮಂಡಿಸಲಿಲ್ಲ" ಎಂದು ಹೇಳಿದೆ.

ಅದೇ ಬಚಾವತ್ ತೀರ್ಪಿನ ೯೦ನೆಯ ಪುಟದಲ್ಲಿ 'ಆಂಧ್ರ ಪ್ರದೇಶವು ಕೃಷ್ಣೆಯಲ್ಲಿ ತನ್ನ ಪಾಲಿನ ನೀರಿಗಿಂತ ಅಧಿಕ ನೀರನ್ನು ಬಳಕೆ ಮಾಡಿಕೊಳ್ಳುತ್ತಿದೆ ಮತ್ತು ಅದಕ್ಕೆ ಕೇಂದ್ರ ಸರಕಾರದ ಸಹಮತ ಇದೆ ಎಂದೂ ಹೇಳಿದೆ.

ಕರ್ನಾಟಕದ ನ್ಯಾಯವಾದಿಗಳ ಬಗ್ಗೆ ನ್ಯಾಯಾಧೀಶರು ಹೇಳಿದ ಮಾತುಗಳಿವು. ತೀರ್ಪು ಬಂದ ಮೇಲೆ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಮಹಾರಾಷ್ಟ್ರ, ಆಂಧ್ರ ರಾಜ್ಯಗಳು ತಮ್ಮ ಪಾಲಿನದಕ್ಕಿಂತ ಅಧಿಕ ನೀರನ್ನು ಸಂಗ್ರಹಿಸುತ್ತಿವೆ, ಬಳಸುತ್ತಿವೆ ಎಂದು ನಮ್ಮ ರಾಜಕೀಯ ಮುಖಂಡರು, ಹೋರಾಟಗಾರರು ದೂರುವುದರಲ್ಲಿ ಅರ್ಥವಿದೆಯೇ? ಸರಕಾರಿ ಖರ್ಚಿನಲ್ಲಿ ಕೋಟಿ ಕೋಟಿ ಹಣ ನ್ಯಾಯಾಧಿಕರಣಕ್ಕೆ ವೆಚ್ಚಮಾಡಿ ಇಂಥ ತೀರ್ಪನ್ನು ಪಡೆಯಬೇಕೆ? ಇದಕ್ಕೆ ಯಾರು ಹೊಣೆ?

ಈಗ ಮತ್ತೆ ಅದೇ ಲಕ್ಷಣ

ಈ ಹಿನ್ನೆಲೆಯಲ್ಲಿ ಇಂದು ನ್ಯಾಯಮೂರ್ತಿ ಬ್ರಿಜೇಶ್‌ಕುಮಾರ್‌ರ ಆಯೋಗದ ಮುಂದೆ ಕರ್ನಾಟಕ ಸರಕಾರವು ನಿಖರವಾಗಿ, ಸ್ಪಷ್ಟವಾಗಿ ವಾದ ಮಾಡುವಂತೆ ತನ್ನ ನ್ಯಾಯವಾದಿಗಳಿಗೆ ಹೇಳುವ ಅಗತ್ಯವಿದೆ. ಸದ್ಯದ ಸಂದರ್ಭದಲ್ಲಿ ಈ ಹಿಂದೆ ಮತ್ತು ಇಂದು ಆಳುವ ಪಕ್ಷವಾಗಲೀ ವಿರೋಧ ಪಕ್ಷಗಳಾಗಲೀ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎಂಬುದು ಕೃಷ್ಣಾ ಕೊಳ್ಳದ ಜನರಿಗೆ ಸ್ಪಷ್ಟವಾಗತೊಡಗಿದೆ.

ಆಯೋಗದ ಎದುರಿಗೆ ಇನ್ನುವರೆಗೂ ಆಲಮಟ್ಟಿ ಎತ್ತರ ೫೨೪.೦೨೫೬ ಮೀಟರ್ ವಿಷಯವಾಗಲೀ ಭೀಮಾ ನದಿಯ ವಿಷಯವಾಗಲಿ ಬರದೇ ಇದ್ದುದು ಆತಂಕಕ್ಕೆ ಕಾರಣವಾಗಿದೆ.

ಆಲಮಟ್ಟಿಯಲ್ಲಿ ೫೧೯.೦೬ ಮೀಟರ್‌ವರೆಗೆ ನೀರನ್ನು ಸಂಗ್ರಹಿಸಲಾಯಿತು. ಆದರೆ ಈವರೆಗೆ ಆದರ ಸಂಪೂರ್ಣ ಬಳಕೆಯಾಗಿಲ್ಲ. ಆದರ ದುಷ್ಪರಿಣಾಮದ ಒಂದು ಉದಾಹರಣೆ ಇಂಡಿ ಶಾಖಾ ಕಾಲುವೆಯಲ್ಲಿ ನಿಗದಿತ ಪ್ರಮಾಣದ ನೀರು ಬಳಕೆಯಾಗದೆ ಅದು ತನ್ನ ನೆರೆಯ ಹಳ್ಳ-ಕೊಳ್ಳಗಳು ತುಂಬಿ ಹರಿಯುವಂತೆ ಮಾಡಿ, ಅಂತಿಮವಾಗಿ ಭೀಮಾ ನದಿಗೆ ಸೇರುತ್ತದೆ. ಭೀಮೆಯಲ್ಲಿ ಆತಂಕಕಾರಿಯಾಗಿದೆ. ಇದನ್ನು ಅಲ್ಲಿಯ ಜನರು, ನೀರಾವರಿ ಇಲಾಖೆ ಅಧಿಕಾರಿಗಳು ಗಮನಿಸುವುದು ಅಗತ್ಯವಾಗಿದೆ.

ಕಳೆದ ಕೆಲವು ವರುಷಗಳಿಂದ ಮಹಾರಾಷ್ಟ್ರದಲ್ಲಿ ಮಾನ್ಸೂನು ಪ್ರಾರಂಭವಾಗುತ್ತಿದ್ದಂತೆ ಅದು ತನ್ನ ಎಲ್ಲ ಕೆರೆ-ಕಟ್ಟಿಗಳನ್ನು ತುಂಬಿಕೊಂಡುಬಿಡುತ್ತದೆ. ಆನಂತರ ಆಗಸ್ಟ್-ಸೆಪ್ಟಂಬರ್‌ಗಳಲ್ಲಿ ಮತ್ತೆ ಭಾರಿ ಮಳೆಯಾಗುತ್ತಿದ್ದಂತೆ ಹಿಡಿದ ನೀರನ್ನು ಮಳೆಯ ನೀರಿನೊಂದಿಗೆ ಬಿಟ್ಟು ಕರ್ನಾಟಕದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಕಲಬುರ್ಗಿ ಜಿಲ್ಲೆಗಳ ನೂರಾರು ಹಳ್ಳಿಗಳು ನೆರೆ ಹಾವಳಿಯನ್ನು ಎದುರಿಸುವಂತೆ ಮಾಡುತ್ತಿದೆ. ಅದನ್ನು ಎದುರಿಸುವ ಸಿದ್ಧತೆ, ಪರಿಹಾರ ಕಾಮಗಾರಿಗಳಲ್ಲಿ ಪ್ರತಿವರ್ಷ ಕೋಟಿ-ಕೋಟಿ ಹಣ ವೆಚ್ಚ ಮಾಡುವ ಬದಲು ಅದನ್ನು ನಿಲ್ಲಿಸುವಂತೆ ನ್ಯಾಯಾಧಿಕರಣದ ಮುಂದೆ ಸಾಧ್ಯವಾದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ಸಾಕ್ಷಿ-ಆಧಾರಗಳ ಸಹಿತ ನಮ್ಮ ನ್ಯಾಯವಾದಿಗಳು ತಮ್ಮ ವಾದಗಳನ್ನು ಮಂಡಿಸಬೇಕಾಗಿದೆ.

ಮಹಾರಾಷ್ಟ್ರವು ಇಂದು ತನಗೆ ನಿಗದಿಯಾದ ೫೦೦ ಟಿಎಂಸಿ ಅಡಿ ನೀರಿಗಿಂತ ಅಧಿಕವಾಗಿ ಸುಮಾರು ೬೦೦ ಟಿಎಂಸಿ ನೀರನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಆಂಧ್ರಪ್ರದೇಶದ್ದು ಲೆಕ್ಕಕ್ಕೇ ಇಲ್ಲ. ಒಂದು ಅಂದಾಜಿನಂತೆ ತನ್ನ ನಿಗದಿತ ೮೦೦ ಟಿಎಂಸಿ ಅಡಿ ನೀರಿಗಿಂತ ಅಧಿಕವಾಗಿ ಮತ್ತೆ ಸುಮಾರು ೧೧೦೦ ಟಿಎಂಸಿ ಅಡಿ ನೀರನ್ನು ಸಂಗ್ರಹಿಸುವ ಭಾರೀ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳನ್ನು ಪ್ರಶ್ನಿಸಲಾಗಿದೆಯೇ?

ಸದ್ಯದ ಕರ್ನಾಟಕದ ಗುರಿ 'ಬಿ' ಸ್ಕೀಮಿನಲ್ಲಿ ತನ್ನ ಪಾಲಿನ ನೀರನ್ನು ಪಡೆದು ಆಲಮಟ್ಟಿ ಅಣೆಕಟ್ಟನ್ನು ೫೨೪.೦೨೫೬ ಮೀಟರಿಗೆ ಎತ್ತರಿಸುವುದೇ ಆಗಿದೆ. ಅದನ್ನು ಸಾಧಿಸಬೇಕಾದರೆ ಕರ್ನಾಟಕದ ವಾದ 'ಆಕ್ರಮಣ'ಕಾರಿ ಆಗಬೇಕು. 'ರಕ್ಷಣಾತ್ಮಕ' ಆಗಬಾರದು. ಇಲ್ಲವಾದಲ್ಲಿ ಈ ಹಿಂದೆ ಕಾವೇರಿ-ಕೃಷ್ಣಾ ತೀರ್ಪುಗಳಂತೆ ಈ ತೀರ್ಪಿನಲ್ಲೂ ಕರ್ನಾಟಕಕ್ಕೆ ಆಘಾತ ಕಾದಿದೆ ಎಂದು ಎಲ್ಲ ಲಕ್ಷಣಗಳು ಕಾಣಿಸುತ್ತಿವೆ.

❖ ಕೃಷ್ಣ ಕೊಲ್ಹಾರ ಕುಲಕರ್ಣಿ
9342018470

'ಸೋತು' ಗೆದ್ದ ನೆರೆರಾಜ್ಯಗಳು; ನಾವೇನೂ ಗೆದ್ದಿಲ್ಲ



ಇಬ್ಬರು ಕಳ್ಳರು, ತಾವು ಕಳ್ಳತನ ಮಾಡಿ ನಿರಪರಾಧಿಯಾದ ಮೂರನೆಯವನ ತಲೆಗೆ ಕಟ್ಟಿದ್ದರು. ಕೋರ್ಟು ಮೂರನೆಯವನನ್ನು ನಿರಪರಾಧಿ, ನಿರ್ದೋಷಿ ಎಂದು ಘೋಷಿಸಿತು. ಅದು ಮೂರನೆಯವನ ಜಯವೇ? ಹಾಗಿದೆ ಶುಕ್ರವಾರದ ಕೃಷ್ಣೆಯ ಜಲ ನ್ಯಾಯಾಧೀಕರಣದ ತೀರ್ಪು! ನಾವು ಜಯ ಸಾಧಿಸಿದೆವೆಂದು ಬೀಗುತ್ತಿದ್ದೇವೆ. ರಾಜಕೀಯ ನಾಯಕರು ತುಂಬಿದ ಹೃದಯದಿಂದ ಸ್ವಾಗತಿಸಿದ್ದಾರೆ. ನಾವು ನಿರಪರಾಧಿ ಎಂದು ಸಾಬೀತಾಗಿದೆ ಏನೋ ನಿಜ, ಆದರೆ ಕಳ್ಳರಿಗೆ ಯಾವ ಶಿಕ್ಷೆಯನ್ನು ವಿಧಿಸಲಿಲ್ಲ ಪ್ರತಿಯಾಗಿ ಆಂಧ್ರ ಯೋಜನೆಗಳ ತಡೆಗೆ ನ್ಯಾಯಾಧೀಕರಣವು ನಕಾರವನ್ನು ತೋರಿಸಿದರೆ, ಮಹಾರಾಷ್ಟ್ರದ ಆಕ್ರಮ ಯೋಜನೆಗಳನ್ನು ಗಮನಕ್ಕೇ ತೆಗೆದುಕೊಂಡಿಲ್ಲ

ಆಲಮಟ್ಟಿ ಆಣೆಕಟ್ಟಿನಲ್ಲಿ 519.6 ಮೀಟರ್ ಎತ್ತರದವರೆಗೆ ನೀರನ್ನು ನಿಲ್ಲಿಸಬಾರದು. ಅದರಿಂದ ಮಹಾರಾಷ್ಟ್ರದ ಪ್ರದೇಶಗಳಿಗೆ ಹಾನಿಯಾಗುತ್ತದೆ ಎಂದು ಮಹಾರಾಷ್ಟ್ರದ ವಾದ. ತನಗೆ ಬರಬೇಕಾದ ನೀರು ಬರುವುದಿಲ್ಲವೆಂದು ಆಂಧ್ರದ ವಾದ. ಆದರೆ ಈ 519.6 ಮೀಟರ್ ಎತ್ತರಕ್ಕೆ ಆರು ವರುಷಗಳ ಹಿಂದೆ ಭಾರತದ ಸರ್ವೋಚ್ಚ ನ್ಯಾಯಾಲದ ಐದು ಸದಸ್ಯರ ಪೀಠ ಸುದೀರ್ಘವಾಗಿ ಚರ್ಚಿಸಿ, ಆದರಿಂದಾಗುವ ಸಾಧಕ-ಬಾಧಕಗಳನ್ನು ಸುಮಾರು 250 ಪುಟಗಳಲ್ಲಿ ವಿವರಿಸಿ ತೀರ್ಪನ್ನು ನೀಡಿದೆ. ಹೀಗಿರುವಾಗ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳು ಈ ಎತ್ತರದ ಬಗ್ಗೆ ತಕರಾರು ಎತ್ತುವ ಪ್ರಶ್ನೆಯೇ ಇಲ್ಲ. ಹಾಗೆ ತಕರಾರನ್ನು ಎತ್ತಿದರೆ ಮೊದಲ ಹಂತದಲ್ಲೇ ಅದನ್ನು ನಿರಾಕರಿಸಬೇಕು. ಆದರೆ ಈಗ ಉಭಯತರ ವಾದ-ವಿವಾದಗಳನ್ನು ಆಲಿಸಿ 519 ಮೀಟರ್ ಎತ್ತರದವರೆಗೆ ನೀರು ಸಂಗ್ರಹಿಸಿಕೊಳ್ಳುವುದು ಕರ್ನಾಟಕ ರಾಜ್ಯದ ನ್ಯಾಯಬದ್ಧವಾದ ಹಕ್ಕು ಎಂದು ನ್ಯಾಯಮೂರ್ತಿ ಬ್ರಜೇಶಕುಮಾರ ಆಯೋಗವು ತೀರ್ಪು ನೀಡಿದೆ. ಒಂದು ಅರ್ಥದಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ಹಿಂದಿನ ತೀರ್ಪನ್ನೇ ಎತ್ತಿ ಹಿಡಿದಿದೆ. ಅದು ಬಿಟ್ಟು ಆಯೋಗಕ್ಕೆ ಬೇರೆ ದಾರಿ ಇರಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಇದರಿಂದ ನಾವು ಹೊಸದಾಗಿ ಸಾಧಿಸಿದ್ದು ಏನೂ ಇಲ್ಲ!.

ಪ್ರತಿಯಾಗಿ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳು ಹಾಗೆ ಎತ್ತರಿಸುವುದರಿಂದ ನಮ್ಮ ಹಕ್ಕಿಗೆ ಚ್ಯುತಿ ಬಂದಂತಾಗಿದೆ ಎಂದು ದೂರು ದಾಖಲಿಸುವಲ್ಲಿಯಶಸ್ವಿಯಾಗಿವೆ. ಆದರ ಅರ್ಥ ಇನ್ನು ಮುಂದೆಯಾದರೂ ಆಲಮಟ್ಟಿ ಆಣೆಕಟ್ಟನ್ನು 519.6 ಮೀಟರ್‌ಗಿಂತ ಅಧಿಕವಾಗಿ ಎತ್ತರಿಸಲು ಕರ್ನಾಟಕಕ್ಕೆ ಅನುಮತಿಯನ್ನು ನೀಡಬಾರದು ಎನ್ನಲು ಒಂದು ದಾರಿಯಾಯಿತು. ಮತ್ತು ಈ ರಾಜ್ಯಗಳಿಗೆ ಬೇಕಾದದ್ದೇ ಅದು. ಆದರಿಂದ ಅವರಿಗೆ ಲಾಭವಿದೆ, ಆದರೆ ಆಲಮಟ್ಟಿ ಆಣೆಕಟ್ಟನ್ನು 524.256 ಮೀಟರ್‌ಗೆ ಎತ್ತರಿಸುವುದು ಕರ್ನಾಟಕದ ಗುರಿಯಾಗಿದೆ ಮತ್ತು ಅದರ ನ್ಯಾಯ ಬದ್ಧವಾದ ಹಕ್ಕೂ ಕೂಡಾ ಆಗಿದೆ. ಹಾಗೆ ಎತ್ತರಿಸುವುದರಿಂದಲೇ ಶಾಶ್ವತ ಬರಗಾಲಕ್ಕೆ ತುತ್ತಾಗಿದ್ದ ಬಿಜಾಪುರ, ಕಲಬುರ್ಗಿ, ರಾಯಚೂರು ಮತ್ತು ಬಾಗಲಕೋಟೆ, ಜಿಲ್ಲೆಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗುತ್ತದೆ. ಒಂದು ವೇಳೆ 519.6ಕ್ಕೆ ಸೀಮಿತವಾದರೆ ಇಷ್ಟೊಂದು ಖರ್ಚು ಮಾಡಿ ಕಟ್ಟಿದ ಆಣೆಕಟ್ಟಿನಿಂದ ದೊರೆಯಬೇಕಾದ ಪ್ರತಿಫಲ ಸಿಗುವುದಿಲ್ಲವಿಶೇಷವಾಗಿ ಫಲವತ್ತಾದ ಭೂಮಿ ಮತ್ತು ಮನೆ ಮಾರುಗಳನ್ನು ಕಳೆದುಕೊಂಡ ಬಾಗಲಕೋಟೆ-ಬಿಜಾಪುರ ಜಿಲ್ಲೆಗಳಿಗೆ ಅತ್ಯಂತ ಮಾರಕವಾಗುತ್ತದೆ. ಈ ಜಿಲ್ಲೆಗಳಲ್ಲಿಯ ಯಾವ ಏತ ನೀರಾವರಿ ಯೋಜನೆಗಳೂ ಕಾರ್ಯರೂಪಕ್ಕೆ ಬರುವುದಿಲ್ಲ

ಆಲಮಟ್ಟಿ ಆಣೆಕಟ್ಟಿನ ಎತ್ತರದ ಸಂಬಂಧದಲ್ಲಿ ಈ ಮೊದಲೊಮ್ಮೆ 1995-96ರಲ್ಲಿ ಆಂಧ್ರ ಪ್ರದೇಶ ದೂರು ಸಲ್ಲಿಸಿ ಆದರ ಎತ್ತರವನ್ನು 509 ಮೀಟರ್‌ಗೆ ಮಿತಿಗೊಳಿಸಬೇಕೆಂದು ವಾದಿಸಿತ್ತು. ಆಗಲೂ ಆದರ ಉದ್ದೇಶ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 509 ಮೀಟರಿಗಿಂತ ಹೆಚ್ಚಿಗೆ ಎತ್ತರಿಸ್ಬಾರದು ಎಂಬುದೇ ಆಗಿತ್ತು. ಅದಕ್ಕೆ ಮಹಾರಾಷ್ಟ್ರದ ಬೆಂಬಲವೂ ಇತ್ತು. ಆ ದಿನಗಳಿಂದಲೇ ಕರ್ನಾಟಕದ ವಾದ 525.259 ಮೀಟರ್ ಎತ್ತರಿಸಬಹುದೆಂಬುದಾಗಿತ್ತು. ಅದರಲ್ಲಿ 519.6 ಮೀಟರ್ ಎತ್ತರದವರೆಗಿನ ನೀರನ್ನು 'ಎ' ಸ್ಕೀಮಿನಲ್ಲಿ ನಿಗದಿಯಾದ ಕೃಷಿಗೆ ಬಳಸುವುದು ಮತ್ತು 519.6ರಿಂದ 524.259ರ ವರೆಗಿನ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಿ ಮುಂದೆ ಹರಿದುಬಿಡುವುದು ಎಂಬುದಾಗಿತ್ತು. ಅದಕ್ಕೆ ಆ ರಾಜ್ಯಗಳು ಅಡ್ಡಗಾಲು ಹಾಕಿದವು. 1998ರಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ಮಧ್ಯಂತರ ತೀರ್ಪನ್ನು ನೀಡಿ 509 ಮೀಟರ್‌ವರೆಗೆ ಮಾತ್ರ ನೀರು ನಿಲ್ಲಿಸಲು ಎಂಬುದು. ಅಂದಿನ ನೀರಾವರಿ ಸಚಿವರಾದಿಯಾಗಿ ಆಡಳಿತದಲ್ಲಿರುವವರೆಲ್ಲರೂ ಸ್ವಾಗತಿಸಿ, ಕರ್ನಾಟಕಕ್ಕೆ ಸಂದ ಜಯ ಎಂದರು. ಮರುದಿನ ಆವರಿಗೆ ಗೋತ್ತಾಯಿತು 509 ಮೀಟರ್ ನೀರನ್ನು ನಿಲ್ಲಿಸುವುದರಿಂದ ನಾವು ಏನನ್ನೂ ಸಾಧಿಸಲಾರೆವು ಎಂಬುದು. ಆನಂತರ ಸರ್ವೋಚ್ಚ ನ್ಯಾಯಾಲಯವು ತನ್ನ ಅಂತಿಮ ತೀರ್ಪಿನಲ್ಲಿ 519.6ಕ್ಕೆ ಸೀಮಿತಗೊಳಿಸಿತು. ಆದರಿಂದ ಇಂದಿನವರೆಗೂ ನಾವು ಸುಮಾರು 5 ಮೀಟರ್ ನೀರನ್ನು ನಿಲ್ಲಿಸಲು ವಂಚಿತರಾಗಿದ್ದೇವೆ. ಹತ್ತು ವರುಷಗಳ ಹಿಂದೆಯೇ ಉತ್ಪಾದನೆಯಾಗಬೇಕಿದ್ದ ವಿದ್ಯುತ್ ಇಂದಿನವರೆಗೂ ಉತ್ಪಾದಿಸಲು ಸಾಧ್ಯವಾಗಿಲ್ಲ.ಇಂದು ಮತ್ತೊಮ್ಮೆ ಅಂಥದೊಂದು ದೃಶ್ಯಕ್ಕೆ ಕಾರಣರಾಗಿದ್ದೇವೆ. ಆಂಧ್ರ-ಮಹಾರಾಷ್ಟ್ರಗಳು ಮೊದಲಿನಿಂದ ಆಕ್ರಮಣ ಧೋರಣೆಯನ್ನು ಹೊಂದಿವೆ. ನಮ್ಮದು ರಕ್ಷಣಾತ್ಮಕ ಧೋರಣೆ, ಅದರಲ್ಲೇ ನಮಗೆ ತೃಪ್ತಿ ಅವರು ಆಕ್ರಮಣ ಮಾಡಿ ನಮಗಿಂತ ಎರಡು ಹೆಜ್ಜೆ ಮುಂದೆ ಹೋಗಿ ಬಿಡುತ್ತಾರೆ. ಆನಂತರ ನಾವು ಗುದ್ದಾಡಿದಾಗ ಒಂದು ಹೆಜ್ಜೆ ಹಿಂದೆ ಸರಿಯುತ್ತಾರೆ. ನಾವು ನಿಂತಲ್ಲೇ ನಿಂತಿರುತ್ತೇವೆ. ಹೀಗಿದ್ದರೂ ಅವರು ಒಂದು ಹೆಜ್ಜೆ ಮುಂದೇ ಇರುತ್ತಾರೆ. ಇದನ್ನು ನಾವು ಗಮನಿಸುವುದಿಲ್ಲ ಒಂದು ಹೆಜ್ಜೆ ಹಿಂದೆ ಸರಿದದ್ದನ್ನು ನಮ್ಮ ಜಯ ಎನ್ನುತ್ತೇವೆ.

ವಾಸ್ತವದಲ್ಲಿ ಆಂಧ್ರ, ಮಹಾರಾಷ್ಟ್ರಗಳು ತಮಗೆ ನಿಗದಿಯಾದ ಕ್ರಮವಾಗಿ 800 ಮತ್ತು 526 ಟಿಎಂಸಿ ನೀರನ್ನು 'ಎ' ಸ್ಕೀಮಿನಲ್ಲಿ ಬಳಕೆ ಮಾಡಿಕೊಂಡು ಎಷ್ಟೋ ದಿನಗಳಾದವು. ಆನಂತರ ಅದಕ್ಕೂ ಅಧಿಕ ನೀರನ್ನು ಬಳಸುವ ಅನೇಕ ಯೋಜನೆಗಳಲ್ಲಿ ಕೆಲವನ್ನು ಪೂರ್ತಿಗೊಳಿಸಿ ಬಳಸುತ್ತಿದ್ದರೆ, ಇನ್ನು ಕೆಲವು ಪೂರ್ಣಗೊಳ್ಳುವ ಹಂತದಲ್ಲಿವೆ. ನಾವು ಮಾತ್ರ 'ಎ' ಸ್ಕೀಮಿನಲ್ಲಿ ನಮಗೆ ನಿಗದಿಯಾದ 734 ಟಿಎಂಸಿ ನೀರನ್ನೇ ಪೂರ್ತಿಯಾಗಿ ಬಳಸಿಕೊಳ್ಳುವುದು ಇಂದಿಗೂ ಸಾಧ್ಯವಾಗಿಲ್ಲ! ಅದು ಆಂಧ್ರ -ಮಹಾರಾಷ್ಟ್ರಗಳಿಗೆ ವರದಾನವಾಗಲಿದೆ.

ಮಹಾರಾಷ್ಟ್ರವು ಇಂದು 600 ಟಿಎಂಸಿಗೂ ಅಧಿಕ ನೀರನ್ನು ಬಳಸಿಕೊಳ್ಳುತ್ತಿದೆ. ಆಂಧ್ರದ್ದು ಲೆಕ್ಕವೇ ಇಲ್ಲ 1100 ಟಿಎಂಸಿಗೂ ಅಧಿಕ ಎನ್ನಲಾಗುತ್ತದೆ. ಅದು ಮಿಕ್ಕಿ ಉಳಿದ ನೀರು ಅದರ ಮೇಲೆ ಆಂಧ್ರದ ಹಕ್ಕಿಲ್ಲವಾದರೂ ಶಾಶ್ವತ ಯೋಜನೆಗಳನ್ನು ಹಾಕಿಕೊಂಡು ಖರ್ಚು ಮಾಡಿ ಕಟ್ಟಿದ್ದಾಗ ನಾವು ಏನನ್ನೂ ಕಟ್ಟಿರದಿದ್ದಾಗ ಬಳಸಿ ಕೊಳ್ಳದಿದ್ದಾಗ ಆಂಧ್ರದ ಹಕ್ಕು ಹುಟ್ಟುತ್ತದೆ ಎಂಬುದನ್ನು ಲಕ್ಷಿಸಬೇಕು. ಏನಿದ್ದರೂ ಸದ್ಯದ ನಮ್ಮ ಗುರಿ ಆಲಮಟ್ಟಿ ಆಣೆಕಟ್ಟನ್ನು 524.259 ಮೀಟರಿಗೆ ಏರಿಸುವುದು. ಅದನ್ನು ಸಾಧಿಸಬೇಕಾದರೆ ನಮ್ಮವಾದ ಆಕ್ರಮಣಕರವಾಗಿರಬೇಕು.ಅನಧಿಕೃತವಾಗಿ ಮಹಾರಾಷ್ಟ್ರ ಮತ್ತು ಆಂಧ್ರಗಳು ಬಳಸಿಕೊಳ್ಳುತ್ತಿರುವ ನೀರಿನ ಬಗ್ಗೆ ವಿಶೇಷವಾಗಿ ಮಹಾರಾಷ್ಟ್ರದ ಅನಧಿಕೃತ ನೀರಿನ ಬಳಕೆಯ ಬಗ್ಗೆಯಾಕೆ ನೀರು ನಮಗೆ ಬರುವುದು ಅಲ್ಲಿಂದ ಅದ್ದರಿಂದ ದನಿ ಎತ್ತಬೇಕು. ಆಗ ಯಶ ದೊರೆತೀತೆಂದು ಆಶೆ ಇಡಲು ಸಾಧ್ಯವಿದೆ.



● ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಕೃಷ್ಣಾ ನೀರಿಗಾಗಿ ಮಾಡಬೇಕಾದ್ದೇನು? ಮಾಡುತ್ತಿರುವುದೇನು?

ಆಂಧ್ರ ಪ್ರದೇಶವು ಕೃಷ್ಣಾ ಜಲಾನಯನ ಪ್ರದೇಶದಲ್ಲಿ 40ಸಾವಿರ ಕೋಟ ರು. ಖರ್ಚು ಮಾಡಿಆಕ್ರಮ ನೀರಾವರಿ ಯೋಜನೆಗಳನ್ನು ಕೈಗೊಂಡಿದೆ. ಆದನ್ನು ತಡೆಗಟ್ಟದೇಕು ಎಂದು ಕರ್ನಾಟಕ ಮುಖ್ಯ ಮಂತ್ರಿ ಧರ್ಮಸಿಂಗ್‌ರ ನೇತೃತ್ವದಲ್ಲಿ ಒಂದೇ ಸಲ ಸರ್ವ ಪಕ್ಷಗಳ ನಿಯೋಗದ 65 ಜನರು ದೆಹಲಿಯನ್ನು ಕಂಡು ಪ್ರಧಾನ ಮಂತ್ರಿಗಳಿಗೆ ಹೇಳಿದರಲ್ಲ ಎಂಬ ಸಂತೋಷ ಉತ್ತರ ಕರ್ನಾಟಕದ ಜನತೆಗೆ ಆಗಿರುವುದರಲ್ಲಿ ಸಂದೇಹವೇ ಇಲ್ಲ ಆದರ ಇದರಿಂದ ಎಷ್ಟು ಪ್ರಯೋಜನ ಎಂದು ಕೇಳಿದರೆ, ದೂರೆಯುವ ಉತ್ತರ ಮಾತ್ರ ಮತ್ತೆ ತಲೆ ಕೆದರಿ ಕೊಳ್ಳುವಂತಾಗುತ್ತದೆ.

ಪ್ರಧಾನಿ ಮಂತ್ರಿಗಳಿಂದ ಈ ವಿಷಯದಲ್ಲಿ ಸೂಜಿ ಮೊನೆಯಷ್ಟು ಕೈ ಹಾಕಲು ಸಾಧ್ಯವಿಲ್ಲ ಎಂದು ಸಂವಿಧಾನದ 212ನೇ ಪರಿಚ್ಛೇದವು ಸ್ಪಷ್ಟವಾಗಿ ಹೇಳುತ್ತದೆ.ಅಷ್ಟೇ ಏಕೆ ಭಾರತದ ಸರ್ವೋಚ್ಚ ನ್ಯಾಯಾಲಯವೂ ಕೂಡಾ ಕೈ ಹಾಕುವಂತಿಲ್ಲ ಎರಡು ಅಥವಾ ಅಧಿಕ ರಾಜ್ಯಗಳ ಮಧ್ಯದ ನೀರಿನ ತಂಟೆಯನ್ನು ಸಂಸತ್ತು ನಿಯಮಿಸಿದ ನ್ಯಾಯಾಧಿಕರಣ ಬಗೆ ಹರಿಸಲು ಮಾತ್ರ ಅವಕಾಶವಿದೆ ಎಂಬುದು ನಿಯೋಗದಲ್ಲಿ ಹೋದ ಬಹುತೇಕ ಜನರಿಗೆ ಗೊತ್ತಿದೆ. ಆದರೂ 65ಜನರು ಯಾತ್ರೆಗೆ ಹೋದರು ಹೋಗಲಿ,ಕೃಷ್ಣಾ ಕಣಿವೆಯ ವಿರುದ್ಧ ತಕರಾರು ಯಾರ ವಿರುದ್ಧ ಇರಬೇಕು.?

ಕೃಷ್ಣಾ ಜಲಾನಯನದ ಫಲಾನುಭವಿಗಳಲ್ಲಿ ಮೂರು ರಾಜ್ಯಗಳು ಬರುತ್ತವೆ. ಪ್ರಾರಂಭದಲ್ಲಿ ಮಹಾರಾಷ್ಟ್ರ ಮಧ್ಯದಲ್ಲಿ ಕರ್ನಾಟಕ ಕೊನೆಯಲ್ಲಿ ಆಂಧ್ರಪ್ರದೇಶವೂ ಬರುತ್ತದೆ. ಇದರಲ್ಲಿ ಮಧ್ಯದಲ್ಲಿ ರುವ ಕರ್ನಾಟಕಕ್ಕೆ ಯಾರಿಂದ ಅಧಿಕ ಅಪಾಯ ಎಂದು ಕೇಳಿದರೆ ಮೇಲ್ಭಾಡಿಯ ಮಹಾರಾಷ್ಟ್ರ ಎಂದು ದಾರಿಯಲ್ಲಿ ಹೋಗುವ ಯಾವನೂ ಹೇಳಬಹುದು. ಹರಿಯುವ ನೀರನ್ನು ಮೇಲ್ಭಾಡಿಯಲ್ಲಿ ಕಟ್ಟಿ ಹಿಡಿದರೆ ಕೆಳದಂಡೆಯಲ್ಲಿ ಹರಿಯುವುದಿಲ್ಲ ಆದನ್ನು ಮಹಾರಾಷ್ಟ್ರವು ಕಳೆದ 5ದಶಕಗಳಿಂದಲೂ ಮಾಡುತ್ತ ಬಂದಿದೆ.ಆದರ ಪರಿಣಾಮ ಕೃಷ್ಣಾಕಣಿವೆಯ ಎಲ್ಲ ನದಿಗಳ ಮೇಲೂ ಆಗಿದೆ.ಆದನ್ನುಕರ್ನಾಟಕಸರ್ಕಾರವೇಒತ್ತಿ ಹೇಳಿ ಇಂದಿನ 'ಬಿ' ಸ್ಕೀಮ್ ನ ನ್ಯಾಯಾಧಿಕರಣವನ್ನು ನಿಯಮಿಸುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದೆ ಎಂಬುದು ನಿಯೋಗದಲ್ಲಿರುವರಿಗೆ ಗೊತ್ತಿಲ್ಲವೆ ? ಆದರ ಅರ್ಥ ಅಂದ್ರದ ವಿರುದ್ಧ ಮಾತನಾಡಬಾರದು ಎಂದಲ್ಲಕರ್ನಾಟಕದ 'ಎ' ಸ್ಕೀಮಿನ ಯೋಜನೆಗಳೇ ಇನ್ನೂ ಮುಗಿಯದಿದ್ದಾಗ ಬಚಾವತ್ ಆಯೋಗವು ನಿಗದಿ ಪಡಿಸಿದ 734ಟಿ.ಎಮ್.ಸಿ.ನೀರನ್ನು ನಿಗದಿ ಪಡಿಸಿದ ಅವಧಿಯಲ್ಲಿ ಬಳಸಿಕೊಳ್ಳುವುದು ನಮ್ಮಿಂದ ಆಗಿಲ್ಲ ಮುಂದಿನ ವರುಷದಷ್ಟಾದರೂ ಬಳಸಿಕೊಳ್ಳುವ ಸಂಕಲ್ಪವನ್ನು ಮಾಡುತ್ತಿದ್ದೇವೆ. ಅಂದರೆ ಮುಂದಿನ ವರ್ಷ 734ಟಿಎಮ್‌ಸಿ ನೀರಿನ ಬಳಕೆಗೆ ಬೇಕಾಗುವ ನೀರನ್ನು ಹಿಡಿದಿಟ್ಟುಕೊಳ್ಳುತ್ತೇವೆ ಎಂದಾಯಿತು.ಆದರೆ,ನಮ್ಮ ಕಾಮಗಾರಿಗಳು ಮುಗಿದಾಗ ಆಲ್ಲಿ ಹಿಡಿದಿಟ್ಟುಕೊಳ್ಳಲು ನೀರು ಇರಬೇಕಲ್ಲ ಆದು ಮಹಾರಾಷ್ಟ್ರ ಮೂಲದಿಂದ ಬರಬೇಕು.ಮಹಾರಾಷ್ಟ್ರದಲ್ಲಿನಡೆದ ಕಾಮಗಾರಿಗಳನ್ನು ನೋಡಿದರೆ, ಅವರ ಕಾಮಗಾರಿಗಳು ಮುಗಿದಾಗ ಕರ್ನಾಟಕದ ಕೃಷ್ಣೆಯಲ್ಲಿ ನೀರು ಹರಿಯುವುದು ಕಠಿಣ ಎಂಬ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತವೆ.ಈ ಅನುಭವ ನಮಗೇನು ಹೊಸದೇನೂ ಆಲ್ಲ ಮಹಾರಾಷ್ಟ್ರದಡದ ಉಜನಿ ಆಣೆಕಟ್ಟಿನಿಂದ 19 ಕಿಲೋ ಮೀ.ಸುರಂಗ ಮಾರ್ಗದಿಂದ ನೀರನ್ನು ಎತ್ತಿಸೀನಾ ನದಿಗೆ ಹರಿಸುವಾಗ ಉದ್ಘಾಟನೆ ದಿನದಂದು ಸತ್ಯ ಗೊತ್ತಾಯಿತು. ಭೀಮೆ ಬತ್ತಿಹೋಯಿತು.ಅನಂತರದ ದಿನಗಳಲ್ಲಿ ನಾವು ಭೀಮೆಯಲ್ಲಿ ಬ್ಯಾರೇಜುಗಳನ್ನು ಕಟ್ಟಿದೆವು. ಆದರೆ ಮಹಾರಾಷ್ಟ್ರದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಇಂದಿನ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖರ ತವರು ಭೂಮಿ ಮರಾಠವಾಡಾಕ್ಕೆ ನೀರನ್ನು ಹರಿಸುವ ಸಂಕಲ್ಪವನ್ನು ಅವರು ಈ ಹಿಂದೆ ಮುಖ್ಯ ಮಂತ್ರಿ ಇದ್ದಾಗಲೇ ಮಾಡಿಯಾಗಿತ್ತು.ಆದೀಗ ಪೂರ್ತಿಗೊಳ್ಳುತ್ತಿದೆ. ಆಗ ಕೃಷ್ಣೆ ಯೂ ಬತ್ತಿ ಹೋಗುತ್ತದೆ. ಆಲಮಟ್ಟ ಆಣೆಕಟ್ಟು ತುಂಬುವುದೇ ಕಷ್ಟವಾಗುತ್ತದೆ. ನಮ್ಮವರು ಹೇಳುವಂತೆ 40ಸಾವಿರ ಕೋಟ ಖರ್ಚು ಮಾಡಿ ಯೋಜನೆಗಳನ್ನು ಹಮ್ಮಿಕೊಂಡಿರುವ ಆಂಧ್ರದ ಚಿಂತೆಯನ್ನು ನಾವು ಮಾಡುತ್ತಿದ್ದೇವೆ. ಮೊದಲು ನಮ್ಮ ಚಿಂತೆಯನ್ನು ಮಾಡೋಣ ನಾವು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವ ಯೋಜನೆಯನ್ನು ಪೂರ್ತಿಗೊಳಿಸೋಣ.ಆಷ್ಟು ನೀರು ಹರಿದು ಬರುವಂತೆ ಚಿಂತಿಸೋಣ.

ನ್ಯಾಯಮೂರ್ತಿ ಬಚಾವತ್ ಆಯೋಗದ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿದಂತೆ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಫಲಾನುಭವಿ ಯಾವ ರಾಜ್ಯವೂ ಬಳಸಿಕೊಳ್ಳಬಹುದು.ಆದರೆ ಆದುವೆ ಅವರ ಹಕ್ಕು ಆಗಲಾರದು. ನಾವು ನಮ್ಮ ನೀರನ್ನು ಬಳಸಿಕೊಂಡು ವ್ಯರ್ಥವಾಗಿ ಆಂಧ್ರಕ್ಕೆ ಹರಿದು ಹೋಗದಂತೆ ಯೋಜನೆಗಳನ್ನು ಪೂರ್ತಿಗೊಳಿಸಿದ್ದೇ ಆದರೆ ಆಂಧ್ರದಿಂದ ನಮಗೆ ಆಪಾಯ ಕಡಿಮೆ. ಆದರೆ ಯೋಜನೆಗಳನ್ನು ಪೂರ್ಣಗೊಳಿಸಿ ನೀರನ್ನು ಬಳಸಲು ಸಮರ್ಥರಾದಾಗ ಬಳಸುವಷ್ಟು ನೀರೇ ಬರದಿದ್ದರೆ? ಆದನ್ನು ಮೊದಲು ಆಂಧ್ರ ಮತ್ತು ಕರ್ನಾಟಕ ಎರಡೂ ರಾಜ್ಯಗಳು ಯೋಚಿಸಬೇಕಾಗಿದೆ.ಈ ಹಿಂದೆ ಹೀಗೇಯೇ ಆಂದಿನ ನಮ್ಮ ನೀರಾವರಿ ಮಂತ್ರಿಗಳು ಸಹಜವಾಗಿ ಮಾತನಾಡಿದ್ದನ್ನು ಮುಂದು ಮಾಡಿ ಆಂಧ್ರಸರಕಾರವು ಬಾಸಗಿ ವ್ಯಕ್ತಿಯನ್ನು ಎತ್ತಿಕಟ್ಟುವ ಮೂಲಕ ಉಚ್ಚ ನ್ಯಾಯಾಲಯಕ್ಕೆ ಹೋಗಿ ಆನಂತರ ತಾವೂ ಆದರಲ್ಲಿ ಭಾಗಿಗಳಾಗಿ ಆಲಮಟ್ಟ ಆಣೆ ಕಟ್ಟಿನ ಗೇಟುಗಳನ್ನು ಆಳವಡಿಸಲು ಾಲ್ಕು ವರ್ಷಗಳ ವರೆಗೆ ಬಿಡಲಿಲ್ಲ ಎಂಬುದನ್ನು ನಾವು ಮರೆಯಬಾರದು.ಮಾತನಾಡಿ ಹೋದವರು ಹೋದರು.ಆದರ ಪರಿಣಾಮ ಾಲ್ಕು ವರ್ಷ ಇಲ್ಲಿಯ ಯೋಜನೆಗಳು ಮುಂದೆ ಬಿದ್ದವು. ಆದನ್ನೇ ಇಂದಿಗೂ ಇಲ್ಲಿಯ ಜನತೆ ಅನುಭವಿಸುತ್ತಿದ್ದಾರೆ.ಮತ್ತೆ ಈಗ ಪ್ರಧಾನಿ ಮಂತ್ರಿಗಳ ಮಧ್ಯಸ್ಥಿಕೆಗೆ ಹೋಗಿದ್ದೇವೆ. ನ್ಯಾಯ ಮೂರ್ತಿ ಬ್ರಜೇಶಕುಮಾರ ನೇತೃತ್ವದ ನ್ಯಾಯಾಧಿಕರಣ ತನ್ನ ಕಾರ್ಯವನ್ನು ಪ್ರಾರಂಭಿಸಿದೆ.ಒಂದು ವೈರಕ್ ಆಗಿದೆ. ನಾಳೆ ಮೇ 19ಕ್ಕೆ ಮತ್ತೆ ಸೇರುತ್ತದೆ. ಕರ್ನಾಟಕವು ಸಮರ್ಥವಾಗಿ ತನ್ನ ನಿಲುವನ್ನು ಮಂಡಿಸಿ ತನಗೆ ಆನ್ಯಾಯವಾಗದಂತೆ ನೋಡಿಕೊಳ್ಳಲು ವೇದಿಕೆ ಇದೆ. ಆಂಥ ಸಂದರ್ಭದಲ್ಲಿ 65ಜನ ದೆಹಲಿ ಯಾತ್ರೆ ಮಾಡಿ ಯಾವ ಪುರುಷಾರ್ಥ ಸಾಧಿಸಿದರು ? ಎಂದು ಕೇಳುವ ಹಕ್ಕೂ ಶ್ರೀ ಸಾಮಾನ್ಯನಿಗೆ ಇದೆ. 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಎಂಬಂತಾಗಬಾದು. ಆದನ್ನು ಆಳುವವರು ಮತ್ತು ವಿರೋಧ ಪಕ್ಷದವರು ಗಮನಿಸಬೇಕು.

ಸರ್ಕಾರಕ್ಕೆ ಮತ್ತು ವಿರೋಧ ಪಕ್ಷದವರಿಗೆ ಉತ್ತರ ಕರಾವಳಿಕದವರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಮಹಾರಾಷ್ಟ್ರದ ಅಕ್ರಮ ನೀರಾವರಿ ಯೋಜನೆಗಳನ್ನು ತಕ್ಷಣ ನಿಲ್ಲಿಸುವಂತೆ ಮಾಡುವ ನಿಟ್ಟನಲ್ಲಿ ಕಾರ್ಯ ಪ್ರವೃತ್ತರಾಗಲಿ.

ಇದು ಗೊತ್ತಿದ್ದದ್ದೇ



ಆಂಧ್ರದ ಚಿಂತೆಯನ್ನು ನಾವು ಮಾಡುತ್ತಿದ್ದೇವೆ. ಮೊದಲು ನಮ್ಮ ಚಿಂತೆಯನ್ನು ಮಾಡೋಣ ನಾವು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವ ಯೋಜನೆಯನ್ನು ಪೂರ್ತಿಗೊಳಿಸೋಣ.ಆಷ್ಟು ನೀರು ಹರಿದು ಬರುವಂತೆ ಚಿಂತಿಸೋಣ.

● ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಸಮಾಧಿಯಿಂದ ಎದ್ದ ಮುಳವಾಡ ಏತ ನೀರಾವರಿ!

ಕೃಷ್ಣ ಕೊಲ್ಹಾರ ಕುಲಕರ್ಣಿ

ಎರಡು ವರುಷಗಳ ಹಿಂದೆ ಇನ್ನೇನು ಮುಳವಾಡ ಏತ ನೀರಾವರಿ ಯೋಜನೆಯ 'ಸಮಾಧಿ' ಆಯಿತು ಎಂದು ತಿಳಿಯುತ್ತಿದ್ದಂತೆ ಇಂದು ಬೂದಿಯಿಂದ ಜಿಗಿದು ಫಿನಿಕ್ಸ್ ಪಕ್ಷಿಯಂತೆ ಹಣಮಾಪೂರ ಜಾಕ್‌ವೆಲ್‌ದಿಂದ ನೀರು ಜಿಗಿಯುತ್ತಿದೆ. ನಂಬಲೂ ಅಸಾಧ್ಯ, ಆದರೆ ವಾಸ್ತವ!

ದಾಖಲೆಗಳ ಪ್ರಕಾರ 14ನೇ ಶತಮಾನದಿಂದಲೇ ಬರಕ್ಕೆ ಪ್ರಸಿದ್ಧವಾಗಿದ್ದ ವಿಜಾಪುರ ಜಿಲ್ಲೆಯಲ್ಲಿ ಕಾಲ ಕಾಲಕ್ಕೆ ಆಂದಿನ ಆಳರಸರು, ಬ್ರಿಟಿಷರು ಇಲ್ಲಿ ನೀರಾವರಿಗೆ ಪ್ರಯತ್ನಿಸಿ ಕೈ ಚೆಲ್ಲಿದರು. ಸ್ವಾತಂತ್ರ್ಯ ದೊರೆತ ಮೊದಲ ದಶಕದಲ್ಲಿ ಆ ಜಾಡನ್ನು ಹಿಡಿದು ಇಲ್ಲಿಯ ಹಿರಿಯ ಮುತ್ಸದ್ದಿ ದಿ. ಸುಗಂಧಿ ಮುರಿಗೆಪ್ಪನವರು ಲೋಕಸಭೆಯಲ್ಲಿ ಪ್ರಪ್ರಥಮವಾಗಿ ಮುಳವಾಡ ಏತ ನೀರಾವರಿ ಯೋಜನೆಯನ್ನು ಅಂಕಿ-ಸಂಖ್ಯೆ ನಕ್ಷೆಗಳೊಂದಿಗೆ ಮಂಡಿಸಿದ್ದರು.

ಕರ್ನಾಟಕ ರಾಜ್ಯೋದಯವಾದ ಮೇಲೆ ಇಲ್ಲಿಯ ಭೂಮಿ, ಮನೆಗಳನ್ನು ಮುಳುಗಿಸಿ ಕಲಬುರ್ಗಿ, ರಾಯಚೂರು ಜಿಲ್ಲೆಗಳಿಗೆ ನೀರನ್ನು ಉಣಿಸುವ ಕೃಷ್ಣಾ ಮೇಲ್ದಂಡೆ ಯೋಜನೆಯ ಶಿಲಾನ್ಯಾಸವನ್ನು 1964 ರಲ್ಲಿ ಮಾಡಲಾಯಿತು. ಆಗ ಮತ್ತೆ ಜಿಲ್ಲೆಯ ಬರ ಪರಿಹಾರಕ್ಕಾಗಿ ಮೊದಲು ವಿಜಾಪುರ ಜಿಲ್ಲೆಗೆ ನೀರುಣಿಸುವ ಮುಳವಾಡ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಒತ್ತಡ ಹೇರಿತು. ಆದರೆ ಆಮ ಫಲಿಸಲಿಲ್ಲ. ನಾರಾಯಣಪುರ ಆಣೆಕಟ್ಟಿನ ಮೊದಲು ರಚಿಸಿ ಅನಂತರ ಆಲಮಟ್ಟಿ ಎಂದಿತು ಕರ್ನಾಟಕ ಸರಕಾರ. ಆಲಮಟ್ಟಿ ಆಣೆಕಟ್ಟಿನಲ್ಲಿ ನಿಲ್ಲಿಸುವ 123 ಟಿ.ಎಂ.ಸಿ. ನೀರಿನಲ್ಲಿ 8.5 ಟಿ.ಎಂ.ಸಿ. ನೀರನ್ನು ನಿಗದಿಪಡಿಸಿ ಮುಳವಾಡ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸಿತು. ಆಷ್ಟು ನೀರಾದರೂ ಬಂದು ಇಲ್ಲಿಯ ಭೂಮಿ ನೀರು ಕಂಡೀತೆಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದರು ಇಲ್ಲಿಯ ರೈತರು. 1987ರಲ್ಲಿ ರಾಮಕೃಷ್ಣ ಜೆಗಡೆ ಅವರು ಶಿಲಾನ್ಯಾಸವನ್ನು ಮಾಡಿದ್ದರು.

ಸರಕಾರದ ವರದಿಯಂತೆಯೇ ಮುಳವಾಡ ಏತ ನೀರಾವರಿ ಯೋಜನೆಯ ಮೊದಲ ಹಂತದ 8.5 ಟಿ.ಎಂ.ಸಿ. ನೀರು 1996-97ರಲ್ಲೇ ಹರಿಯಬೇಕಾಗಿತ್ತು. ಆದರೆ ಇರ ಇಲ್ಲ, ಶಿವ ಇಲ್ಲ, ಕಾದುವ ದೇವರ ಕಾಟಾಚಾರ ಕಳೆವಂತೆ ಬಳೂತಿಯಲ್ಲಿ ಕೆಲಸ ಪ್ರಾರಂಭಿಸಿ ಇಲ್ಲಿಯ ಜನರ ಮೂಗಿಗೆ ತುಪ್ಪ ಸವರಿದರು 1991-93ರಲ್ಲಿ.

ಆಲಮಟ್ಟಿಯಲ್ಲಿ ನೀರು ನಿಂತು ಆರು ವರ್ಷಗಳಾದವು. ಆಲಮಟ್ಟಿ ದಿಬ್ಬದ ಮೇಲೆ ನಿಂತು ನೋಡಿದರೆ ನೀರೇ-ನೀರು. ಸಾಗರೋಪಾದಿಯಲ್ಲಿ ನೀರು. ಆದರೆ ಸಾಗರದ ನೀರಿನಂತೆ ದಂಡೆಯ ಜನರಿಗೆ ಅದು ಮೃಗಜಲ. ಬಳೂತಿಯಿಂದ ಕೆಲಸ ಮುಂದೆ ಸಾಗಲೇ ಒಲ್ಲದು. ಎಲ್ಲೋ ಕಾಲುವೆ ಇನ್ನೊಲ್ಲೊ ಜಾಕ್‌ವೆಲ್. ಬಳೂತಿಯಿಂದ ಹಣಮಾಪೂರ ಜಾಕ್‌ವೆಲ್‌ಗೆ ನೀರು ಬಂದರೆ ಕಾಲುವೆಗಳಿಗೆ ನೀರು. ಆದು ಹೊಲಗಳಿಗೆ ಬಂದೀತು. ಆದರೆ ಹಣಮಾಪೂರ ಜಾಕ್‌ವೆಲ್ ಬಾರಾಕಮಾನದಂತೆ ನಿಂತಿತು. ಕಾಲುವೆಗಳು ಮುಂದೆ ಸಾಗಿದವು. ಮೊದಲಿನ 10 ಕಿ.ಮೀ. ಕಾಲುವೆಯೇ ಇಲ್ಲ, ನೀರನ್ನು ಎತ್ತಲು ಪಂಪುಗಳೆಲ್ಲ, ಪಂಪುಗಳನ್ನು ತಂದರೆ ವಿದ್ಯುತ್ ಇಲ್ಲ, ವಿದ್ಯುತ್ ಬಂದರೆ ಜಾಕ್‌ವೆಲ್ ಇಲ್ಲ. ಜಾಕ್‌ವೆಲ್ ಪೂರ್ತಿಯಾದರೆ ಮೊದಲಿನ ಹತ್ತು ಕಿ.ಮೀ. ಕಾಲುವೆ ಇಲ್ಲ, ಎಲ್ಲ ಅಧ್ವಾನಮಯ. ಎರಡು ವರ್ಷಗಳ ಹಿಂದೆ ಆದನ್ನು ಕಂಡವರು ಕನಿಷ್ಠ ಇನ್ನೂ ಹತ್ತು ಹದಿನೈದು ವರ್ಷಗಳಾದರೂ ಇಲ್ಲಿ ನೀರು ಕಾಣುವುದು ಸಾಧ್ಯವೇ ಇಲ್ಲ ಎಂಬ ಅನಿಶ್ಚಿತ ವಾತಾವರಣವಿತ್ತು. ಸುಟ್ಟ ಮನೆಗಳ ಹಿರಿಯುದಂತೆ ಇಂಥ ವಾತಾವರಣದಲ್ಲಿ ಮುಳವಾಡ ಏತ ನೀರಾವರಿ ಯೋಜನೆಗೆ ನಿಗದಿಪಡಿಸಿದ ನೀರಿನಲ್ಲಿ 20 ಟಿ.ಎಂ.ಸಿ. ನೀರನ್ನು ಎತ್ತಿಕೊಂದು ಹೋಗಿ ಬಿದುವ ಹುನ್ನಾರ ನಡೆಯಿತು. ಆಗಲೇ ಇಲ್ಲಿಯ ಜನ ಭಾವಿಸಿದ್ದು ಮುಳವಾಡ ಏತ ನೀರಾವರಿ ಯೋಜನೆ ಸಮಾಧಿಯಾಯಿತು ಎಂದು.

ಹೊಸ ಚುನಾವಣೆಯೊಂದಿಗೆ ಹೊಸ ಮುಖ ಬಂದಿತು. ಶಿವಾನಂದ ಪಾಟೀಲರು ಬಸವನ ಬಾಗೇವಾಡಿ ಮತಕ್ಷೇತ್ರದ ಚುನಾಯಿತ ಸದಸ್ಯರಾದರು. ಇಲ್ಲಿಯ ಆಧ್ವಾನಗಳನ್ನು ಅಭ್ಯಸಿಸಲು ಅವರಿಗೆ ಒಂದು ವರ್ಷ ಹಿಡಿಯಿತು. ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಎಲ್ಲಿಂದ ಕೆಲಸ ಪ್ರಾರಂಭಿಸಬೇಕು ಎಂಬುದೇ ಅವರಿಗೆ ಸಮಸ್ಯೆಯಾಯಿತು. ಮುಂದಿನ ಕಾಲುವೆಗಳ ನಿರ್ಮಾಣದ ಹಂತದಲ್ಲಿದೆ. ಆದರೆ ಮೊದಲ ಹತ್ತು ಕಿ.ಮೀ. ಕಾಲುವೆಯೇ ಇಲ್ಲ, ಗುತ್ತಿಗೆ ಹಿಡಿದ ಕಂತ್ರಾಟುದಾರ ಬಟ್ಟು ಹೋಗಿದ್ದಾನೆ. ಹೊಸ ಟೆಂದರೂ ಇಲ್ಲ, ಆಲ್ಲಿಂದ ಪ್ರಾರಂಭವಾಯಿತು ಕೆಲಸ.

ಕಳೆದ ವರ್ಷ ದಿ.19-1-05 ರಂದು ಮೊದಲ 10 ಕಿ.ಮೀ. ಕಾಲುವೆಯ ನಿರ್ಮಾಣಕ್ಕೆ ಚಾಲನೆಯನ್ನು ಕೊಟ್ಟರು. ಆಂದು ಸೇರಿದ ಸುಮಾರು 50 ಸಾವಿರಕ್ಕೂ ಅಧಿಕ ಜನರ ಎದುರು ಶಾಸಕರು ಪ್ರಮಾಣ ಮಾಡಿದರು. ಒಂದು ವರ್ಷದಲ್ಲಿ ಮೊದಲ ಹಂತದ ಭೂಮಿಗೆ ನೀರು ಹರಿಸುವುದು ಎಂದರು. ಆದು ಅಸಾಧ್ಯ ಎಂದಿತು ಜನ. ಕಾಲುವೆ ಆದೀತು ಆದರೆ ಹಣಮಾಪೂರದ ಜಾಕ್‌ವೆಲ್ ಪೂರ್ತಿಯಾಗಬೇಕು. ಬಳೂತಿ ಮತ್ತು ಜಣಮಾಪೂರ ಜಾಕ್‌ವೆಲ್‌ಗಳಲ್ಲಿ ವಿದ್ಯುತ್ ಪಂಪುಗಳನ್ನು ಅಳವಡಿಸಬೇಕು. ಅವುಗಳ ಕಾರ್ಯ ಮಾದಲು 35 ಕಿ.ಮೀ. ದೂರದ ವಿದ್ಯುತ್ ತಂತಿಯನ್ನು ತರಬೇಕು. ಇವೆಲ್ಲ ಹನ್ನೆರಡು ತಿಂಗಳಲಿ ಸಾದವೆ?

ಯಾರಿಗಿಲ್ಲ ಇಚ್ಛಾಶಕ್ತಿ ಇದ್ದರೆ ಆದು ಸಾಧ್ಯ ಎಂಬುದನ್ನು ಶಾಸಕ ಶಿವಾನಂದ ಪಾಟೀಲರು ಕೇ 12 ತಿಂಗಳುಗಳಲ್ಲಿ ಮಾಡಿ ತೋರಿಸಿದರು. ಇಂದು 55ನೇಯ ಪ್ರಜಾರಾಜ್ಯದ ದಿನ. ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಮೊಟ್ಟ ಮೊದಲ ಬಾರಿಗೆ ನೀರು ಹರಿಯುತ್ತಿನ ಕಳೆದ ಮುಕ್ಕಾಲು ಶತಮಾನಕ್ಕಿಂತ ಅಧಿಕ ಕಾಲದಿಂದ ಕಾಯುತ್ತಿದ್ದ ಜನ ಕಾಲುವೆಯಲ್ಲಿ ನೀರು ಹರಿಯುವುದನ್ನು ಕಣ್ತುಂಬ ನೋಡುತ್ತಿದ್ದಾರೆ.

ಮುಳವಾಡ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯ ಒಂದು ಪುಟ್ಟ ಯೋಜನೆಯಾಗಿದೆ. ವಿಶೇಯಾದಲ್ಲೆ ಅತಿ ದೊಡ್ಡ ಯೋಜನೆಯ ಎರಡು ಹಂತಗಳಲ್ಲಿ ಪೂರ್ಣಗೊಳ್ಳುತ್ತಿದೆ. ಮೊದಲ ಹಂತದಲ್ಲಿನ 8.5 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಸುಮಾರು 30,850 ಹೆಕ್ಟೇರ್ ಆಂದರೆ 76,900 ಎಕರೆಗಳಿಗೆ ನೀರಾವರಿಯಾಗುತ್ತದೆ. ಸುಮಾರು 41 ಹಳ್ಳಿಗಳ ಭೂಮಿಗೆ ನೀರಾವರಿಯಾಗುತ್ತದೆ. ಇಂದು ಹರಿಯುವ ನೀರಿನಿಂದ ಕ್ಷೇ 4000 ಹೆಕ್ಟೇರ್ ಆಂದರೆ 9880 ಎಕರೆಗಳಿಗೆ ನೀರಾವರಿಯಾಗುತ್ತದೆ. ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಹರಿಯುವ ಕಾಲುವೆಗಳಿಂದ ಕ್ರಮವಾಗಿ ಆಳವಾಡಿ, ತೀಕಳವಾಡಿ, ಭಾಗಾಸಗರ, ಹಣಮಾಪೂರ, ಆರಸಣಗಿ, ಸುಳಬೇವ, ತಡಲಗಿ, ಮಟ್ಯಾಳ, ನಾಗರದಿನ್ನಿ, ಹಿರೇಇಸಂಗಿ, ಚಿಕ್ಕ ಆಸಂಗಿ ಹಿರೇಗರಸಂಗಿ, ಚಿಕ್ಕಗರಸಂಗಿ, ಕುರುಬರದಿನ್ನಿ, ಚೀರಲದಿನ್ನಿ, ಮತ್ತುಂದಿನ್ನಿ, ರೋಣೆಹಾಳ ಮತ್ತು ಕೊಲ್ಹಾರದ ಕೆಲವು ಭೂಮಿಗಳಿಗೆ ನೀರು ಬರುತ್ತದೆ. ಇದಂತೆ ಇನ್ನೂ ಕೆಲವೇ ತಿಂಗಳುಗಳಲ್ಲಿ ಜಮಖಂಡಿ ತಾಲೂಕಿನ ಚಿಕ್ಕಲಕಿವರೆಗೂ ನೀರು ಹರಿಯುತ್ತದೆ.

ಎರಡನೆಯ ಹಂತದಲ್ಲಿ ಬ ಸ್ಕೀಮಿನ ತೀರ್ಪು ಬಂದಾಗ ಇನ್ನು 54 ಟಿ.ಎಂ.ಸಿ. ನೀರನ್ನು ಬಳಸಿ ಮತ್ತೆ 1 ಲಕ್ಷ 80 ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗುತ್ತದೆ. ಕದಿತಗೊಂಡ ಬಿ ಸ್ಕೀಮಿನಲ್ಲಿಯ ನೀರನ್ನು ಹಿಂತಿರುಗಿ ಪಡೆವಲ್ಲಿ ಶಾಸಕರು ಯಶಸ್ವಿಯಾಗಿದ್ದಾರೆ.

ಸರಕಾರ ಪುನರ್ ಪರಿಶೀಲಿಸಿ ಹೊರಡಿಸಿದ ಆದೇಶದಲ್ಲಿ ಮುಳವಾಡ ಏತ ನೀರಾವರಿ ಯೋಜನೆಯ ಎರಡನೆಯ ಹಂತದ ಯೋಜನೆಗಳಿಗೆ 54.431 ಟಿ.ಎಂ.ಸಿ. ನೀರನ್ನು ನಿಗದಿಪಡಿಸಿದೆ. ಆದಕ್ಕಾಗಿ ಇನ್ನುಮುಂದೆ ಉಪವಾಸ ಸತ್ಯಾಗ್ರಹಗಳನ್ನು ಮಾಡುವ ಅಗತ್ಯವಿಲ್ಲ, ಆದರೆ ಆಮ್ಮ ಶೀಘ್ರದಲ್ಲಿ ಉಳಿದ ಕಾಮಗಾರಿಗಳು ಪೂರ್ಣಗೊಳ್ಳುವಂತೆ ನೋಡಿಕೊಳ್ಳುವುದು ಇಂದಿನ ತುರ್ತು ಕೆಲಸವಾಗಿದೆ.

ಸಮಗ್ರ ನೀರಾವರಿ ಹೋರಾಟ ಅಂದರೇನು ?

ವಿಜಾಪುರ ಜಿಲ್ಲೆಯಲ್ಲಿ ಈಗ ಎಲ್ಲಿ ನೋಡಿದಲ್ಲಿ ಸಮಗ್ರ ನೀರಾವರಿ ಕುರಿತು ಹೋರಾಟ ನಡೆದಿದೆ. ಕರ್ನಾಟಕ ರಾಜ್ಯ ನಿರ್ಮಾಣವಾಗಿ ಐವತ್ತು ವರ್ಷಗಳು ಸಮೀಪಿಸುತ್ತಿವೆ. ಜಿಲ್ಲೆಯ ಇಂಡಿ, ಸಿಂದಗಿ ತಾಲೂಕಿನ ಕೆಲ ಭಾಗ ನೀರಾವರಿ ಆದುದನ್ನು ಬಿಟ್ಟರೆ ಉಳಿದೆಡೆ ಒಂದು ಹನಿ ನೀರು ಹೊಲಗಳಿಗೆ ಹರಿಯುತ್ತಿಲ್ಲ ಪ್ರತಿ ಹತ್ತು ಹನ್ನೆರೆಡು ವರ್ಷಗಳಿಗೆ ಒಮ್ಮೆ ಬರುವ ಕುಂಭ ಮೇಳಗಳಂತೆ ನೀರಾವರಿಗಾಗಿ ಇಲ್ಲಿ ಹೋರಾಟ ನಡೆಯುತ್ತಲೇ ಇವೆ. ಹಾವು-ಏಣಿ ಆಟದಂತೆ ಹೋರಾಟ ಎರಡು ಹೆಜ್ಜೆ ಮುಂದೆ ಹೋಗುತ್ತಿದ್ದಂತೆ ಒಂದು ಹೆಜ್ಜೆ ಹಿಂದೆ ಸರಿದಿರುತ್ತದೆ.

ಇತ್ತೀಚೆಗೆ ತಿಂಗಳುಗಳ ಹಿಂದೆ ಭಾರತೀಯ ಜನತಾ ಪಕ್ಷದವರು ಆಲಮಟ್ಟಿಯಲ್ಲಿ ಜಿಲ್ಲೆಯ ಸಮಗ್ರ ನೀರಾವರಿಗಾಗಿ ಹೋರಾಟ ಹಮ್ಮಿಕೊಂಡರು. ಅದು ಇಂದಿಗೂ ನಡೆಯುತ್ತಲೇ ಇದೆ. ಆನಂತರ ಪ್ರತಿ ತಾಲೂಕುಗಳಲ್ಲಿ ಪ್ರಾರಂಭಿಸಿದರು. ಇದ್ದಕ್ಕಿದ್ದಂತೆ ಅದನ್ನು ಕೆಲವು ದಿನಗಳ ಹಿಂದೆ ಪಕ್ಷಾತೀತ ಹೋರಾಟ ಎಂದು ಕಮಲದ ಧ್ವಜಗಳನ್ನು ಹಿಂದೆ ಸರಿಸಿದರು. ಹಳೆ ಹೊಸ ಮುಖಂಡರನ್ನು ಕಲೆ ಹಾಕಿ ಚರ್ಚಿಸಿದರು. ಇದೀಗ ಪಕ್ಷಾತೀತವಾಗಿ ಭೀಮೆಯಿಂದ ಕೃಷ್ಣೆಯವರೆಗೆ ಪಾದಯಾತ್ರೆ ನಡೆದಿದೆ. ಈ ಹಿಂದಿನ ಹೋರಾಟಗಳು ಯಾಕೆ ಯಶಸ್ಸು ಕಾಣಲಿಲ್ಲ ಎಂಬುದನ್ನು ಈ ಮುಖಂಡರು ಆತ್ಮಾವಲೋಕನ ಮಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಕೇವಲ ಹೋರಾಟಗಳಿಂದ ಗುರಿ ಸಾಧಿಸುವುದು ಕಷ್ಟದ ಕೆಲಸ ಎಂಬುದು ಈ ಜನರಿಗೆ ಅರ್ಥವಾಗಲೊಲ್ಲದು. ಪ್ರಜಾ ಪ್ರಭುತ್ವದಲ್ಲಿ, ಜನಪ್ರತಿನಿಧಿಗಳೇ ಪ್ರಭುಗಳಾಗಿರುವಾಗ, ಅವರು ಎಲ್ಲಿ ಹೋರಾಡಬೇಕೋ ಅಲ್ಲಿಹೋರಾಡದಿದ್ದಾಗ ಇನ್ನು ಐದು ದಶಕಗಳಾದರೂ ಜಿಲ್ಲೆಗೆ ನೀರು ದೊರೆಯುವುದಿಲ್ಲ ಇದ್ದಷ್ಟು ನೀರನ್ನು ಬೇರೆಡೆ ಹರಿಸಿ ಬಿಡುತ್ತಾರೆ. ಈಗ ಆಗಿದ್ದು ಮತ್ತು ಆಗುತ್ತಿರುವುದು ಅದೆಯೇ.

ಪಾದಯಾತ್ರೆಯ ಘೋಷಣಾ ಪತ್ರದಲ್ಲಿ ಮೊದಲ ಬೇಡಿಕೆ ಭೀಮಾ ನೀರಿನದಾಗಿದೆ. 1985ರಿಂದಲೇ ಕರ್ನಾಟಕದ ಭೀಮಾ ನದಿಯಲ್ಲಿ ನೈಸರ್ಗಿಕ ಹರಿವು ಸಂಪೂರ್ಣ ನಿಂತು ಹೋಗಿದೆ. ಅಂದರೆ ಕಳೆದ 20 ವರ್ಷಗಳಿಂದ ಭೀಮೆಯಲ್ಲಿ ನೀರಿಲ್ಲದಿದ್ದಾಗ ಆ ಮತಕ್ಷೇತ್ರದ ಜನಪ್ರತಿನಿಧಿಗಳು ಏನು ಮಾಡಿದರು ? ಎಷ್ಟು ಸಲ ಈ ಪ್ರಶ್ನೆಯನ್ನು ಸದನದಲ್ಲಿ ಎತ್ತಿದರು. ಅದಕ್ಕೆ ಪೂರಕವಾಗಿ ಜಿಲ್ಲೆಯ ಉಳಿದ ಎಷ್ಟು ಜನಪ್ರತಿನಿಧಿಗಳು ಸ್ಪಂದಿಸಿದರು ಎಂಬುದನ್ನು ಅರಿಯುವುದು ಅಗತ್ಯ. ಇದಾವುದನ್ನೂ ಜನಪ್ರತಿನಿಧಿಗಳು ಮಾಡದೇ ಇದ್ದಾಗ ಜನರು ಬೀದಿಗೆ ಇಳಿದರು. ಬೀದಿಗೆ ಇಳಿದರೂ ಫಲ ಸಿಗದಿದ್ದಾಗ ಸುಪ್ರೀಂಕೋರ್ಟ್ ಕಟ್ಟೆ ಹತ್ತಿದರು. ಮುಳವಾಡ ಏತ ನೀರಾವರಿ ಯೋಜನೆಯದೂ ಇದೆ ಸಮಸ್ಯೆ. ಮುಳವಾಡ ಏತ ನೀರಾವರಿ ಯೋಜನೆಯಿಂದ ವಿಜಾಪುರ ಜಿಲ್ಲೆ ಬರ ಪರಿಹಾರ ಸಾಧ್ಯ ಎಂಬುದನ್ನು ಬ್ರಿಟಿಷರ ಕಾಲದಿಂದ ಹೇಳುತ್ತ ಬಂದರೂ ಅದು ಇದುವರೆಗೂ ಪೂರ್ಣಗೊಂಡಿಲ್ಲ ಎಂದರೆ ಏನು ಅರ್ಥ ? ಯೋಜನೆಯನ್ನು ಮೂಲದಲ್ಲಿ ರೂಪಿಸುವಾಗ ಅಂದಿನ ಖ್ಯಾತ ಎಂಜನಿಯರ ದಿ.ಬಾಳೆಕುಂದ್ರಿ ಅವರು ನಾಲ್ಕು ಹಂತಗಳಲ್ಲಿ ರೂಪಿಸಿ ಇಂದಿನ ವಿಜಾಪುರ ಜಿಲ್ಲೆಯ ಬಹುತೇಕ ಭಾಗ ನೀರಾವರಿಗೆ ಒಳಪಡುವಂತೆ ಯೋಜಿಸಿದ್ದರು. ಕೃಷ್ಣಾ ಮೇಲ್ದಂಡೆ ಯೋಜನೆ 'ಎ' ಸ್ಕೀಮಿನಲ್ಲಿ 4.45 ಟಿಎಂಸಿ ನೀರನ್ನು ಬಳಸಿ, ಅದರಿಂದ ಬಸವನ ಬಾಗೇವಾಡಿ ತಾಲೂಕಿನ 16659, ವಿಜಾಪುರ ತಾಲೂಕಿನ 4330 ಮತ್ತು ಜಮಖಂಡಿ ತಾಲೂಕಿನ 5861 ಹೆಕ್ಟೇರ ಭೂಮಿ ನೀರಾವರಿಗೆ ಒಳಪಡಿಸಿದ್ದರು. ಜಿಲ್ಲೆಯ ಆಲಮಟ್ಟಿಯಲ್ಲಿ ನೀರು ನಿಂತು ನಾಲ್ಕು ವರ್ಷಗಳಾದವು. ಇಂದಿಗೂ ಒಂದು ಹನಿ ನೀರು ಹರಿದಿಲ್ಲ ಯಾಕೆ ?

ಪ್ರಜಾ ಪ್ರಭುತ್ವದಲ್ಲಿ, ಜನಪ್ರತಿನಿಧಿಗಳೇ ಪ್ರಭುಗಳಾಗಿರುವಾಗ, ಅವರು ಎಲ್ಲಿ ಹೋರಾಡಬೇಕೋ ಅಲ್ಲಿ ಹೋರಾಡದಿದ್ದಾಗ ಇನ್ನು ಐದು ದಶಕಗಳಾದರೂ ಜಿಲ್ಲೆಗೆ ನೀರು ದೊರೆಯುವುದಿಲ್ಲ. ಇದ್ದಷ್ಟು ನೀರನ್ನು ಬೇರೆಡೆ ಹರಿಸಿ ಬಿಡುತ್ತಾರೆ. ಈಗ ಆಗಿದ್ದು ಮತ್ತು ಆಗುತ್ತಿರುವುದು ಅದೆಯೇ.

ಯೋಜನೆಯ ಎರಡನೇ ಹಂತದ ಕಾರ್ಯ ಮುಗಿದು, ಪಂಪುಗಳ ಅಳವಡಿಕೆಯೂ ಆಗಿದೆ. ವಿದ್ಯುತ್ ಸಂಪರ್ಕ ಮಾತ್ರ ಜೋಡಿಸಬೇಕು. ಆದರೆ ಪ್ರಾರಂಭದ 10 ಕಿ.ಮೀ.ಕಾಲುವೆಯಾಗದೇ, ಆದರ ಪೂರ್ವ, ಪುಟ್ಟಿಮ ಕಾಲುವೆಗಳು ಕಿ.ಮೀ. 11ರಿಂದ ಪ್ರಾರಂಭವಾಗಿ ಮುಗಿಯುವ ಹಂತದಲ್ಲಿವೆ. ಮೊದಲಿನ ಹತ್ತು ಕಿ.ಮೀ. ಕಾಲುವೆಯಾಗಿದ್ದರೆ. ಈಗ ಅಲ್ಲಿ ನೀರು ಹರಿದು ನಾಲ್ಕು ವರ್ಷಗಳೇ ಆಗುತ್ತಿದ್ದವು. ಇದೀಗ ಹೊಸದಾಗಿ ಬಂದ ಜನಪ್ರತಿನಿಧಿ ಆರು ತಿಂಗಳುಗಳಿಂದ ಬೆನ್ನುಹತ್ತಿ ಮೊದಲಿನ ಹತ್ತು ಕಿ.ಮೀ. ಕಾಲುವೆ ಕಾಮಗಾರಿಗೆ ಚಾಲನೆ ನೀಡಿದರು. ತಾತ್ಪರ್ಯ, ಜನಪ್ರತಿನಿಧಿಯು ಸರಿಯಾದ ದಾರಿಯಲ್ಲಿ ಪ್ರಯತ್ನಿಸಿದರೆ ಕೆಲಸ ಆಗುತ್ತದೆ ಎಂದಾಯಿತು. ಹಾಗೆಂದ ಮಾತ್ರಕ್ಕೆ ಆ ಜನಪ್ರತಿನಿಧಿಯ ಸಾಧನೆ ಬಹು ದೊಡ್ಡದು ಎಂದಲ್ಲ ಮುಳವಾಡ ಏತ ನೀರಾವರಿ ಕರ್ಮಕಾಂಡ ಇಷ್ಟಕ್ಕೆ ಮುಗಿಯುವುದಿಲ್ಲ ಅದರ 'ಬಿ' ಸ್ಕೀಮಿನಲ್ಲಿ 56.10 ಟಿಎಂಸಿ ನೀರಿನ ಬಳಕೆಯನ್ನು ನಿಗದಿಪಡಿಸಿದ್ದು, ಇಂದು ಅದನ್ನು ಮಾಸ್ಟರ ಪ್ಲಾನಿನಲ್ಲಿ 36.514 ಟಿಎಂಸಿ ನೀರಿಗೆ ನಿಗದಿ ಮಾಡಲಾಗಿದೆ. ಅಂದರೆ 20 ಟಿಎಂಸಿ ನೀರನ್ನು ಕಡಿಮೆ ಮಾಡಿದವರು ಯಾರು ? ಯಾಕೆ ? ಎಂಬುದನ್ನು ಜಿಲ್ಲೆಯ ಪ್ರತಿನಿಧಿಗಳು ಎಂದಾದರೂ ಕೇಳಿದರೆ ? ಹಾಗೆ ಕೇಳಿಯೂ ಫಲ ದೊರೆಯದಿದ್ದರೆ ಆಗ ಜನರ ಮುಂದೆ ಬರಬೇಕು. ಜನಾಂದೋಲನ ರೂಪಿಸಬೇಕು. ಇದೀಗ ಮುಳವಾಡ ಏತ ನೀರಾವರಿ ಯೋಜನೆ ಎರಡನೇ ಹಂತದಲ್ಲಿ ಮುಗಿಯುವ ಸಾಧ್ಯತೆ ಇದೆ. ಆದು ಕೂಡ 'ಬಿ' ಸ್ಕೀಮಿನಲ್ಲಿ ನಮಗೆ ನೀರು ಸಿಕ್ಕರೆ ಮಾತ್ರ. ಹೊಸದಾಗಿ ನಿರ್ಮಿತವಾಗಿರುವ ನ್ಯಾಯಾಧಿಕರಣದ ಮುಂದೆ 'ಎ' ಸ್ಕೀಮಿನಲ್ಲಿ ಕರ್ನಾಟಕ್ಕೆ ನಿಗದಿಪಡಿಸಿದ 734 ಟಿಎಂಸಿ ನೀರನ್ನು ಆದು ಪೂರ್ಣವಾಗಿ ಬಳಸಿಲ್ಲ ಬಳಸಲಾರದ 152 ಟಿಎಂಸಿ ನೀರಿನ ಪುನರ್ವಿಮರ್ಶೆ ಆಗಬೇಕೆಂದು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳು ಕೇಳಿವೆ. ಆದನ್ನು ಅಂದಿನ ಎನ್‌ಡಿಎ ಸರಕಾರ ಒಪ್ಪಿಕೊಂಡು ನ್ಯಾಯಾಧಿಕರಣಕ್ಕೆ ಆ ಬಗ್ಗೆ ತೀರ್ಪು ನೀಡಲು ಹೇಳಿದೆ. ಅಲ್ಲಿ ನಮ್ಮವರು ಬಳಕೆಯನ್ನು ಸ್ಥಾಪಿಸುವುದು ತುಂಬ ಕಠಿಣವಾಗುತ್ತದೆ. 'ಎ' ಸ್ಕೀಮಿನಲ್ಲಿಯ 734 ಟಿಎಂಸಿ ನೀರನ್ನು ಇಂದು ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಈ ಹಂತದಲ್ಲಿ ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ನಾವು 4.450 ಟಿಎಂಸಿ ನೀರಿಗೆ ತೃಪ್ತಿಯಾಗುವ ಶಂಕೆಯಿದೆ. ಈ ಅಂಶಗಳನ್ನು ಜನಪ್ರತಿನಿಧಿಗಳು ಮನಗಾಣಬೇಕು ಮತ್ತು ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಒಂದಾಗಿ ಪಕ್ಷಭೇದ ಮರೆತು ಸದನದ ಒಳಹೊರಗೂ ತಿಳುವಳಿಕೆ ಲಾಬಿಯನ್ನು ಮಾಡಬೇಕಾದ ಅವಶ್ಯಕತೆ ಇದೆ.

ಅಂಥದೇ ಸಮಸ್ಯೆಗಳು ಚಿಮ್ಮಲಗಿ, ಗುತ್ತಿ ಬಸವಣ್ಣ ಮತ್ತು ಇಂಡಿ ಶಾಖಾ ಕಾಲುವೆಗಳ ಯೋಜನೆಗಳ ಅನುಷ್ಠಾನದಲ್ಲೂ ಇವೆ. ಚಿಮ್ಮಲಗಿ ಏತ ನೀರಾವರಿ ಮೂಲ ಯೋಜನೆಯಲ್ಲಿ 25.150 ಟಿಎಂಸಿ ನೀರಿನ ಬಳಕೆ ಇದ್ದದ್ದು ಈಗ 5 ಟಿಎಂಸಿ ಕಡಿತಗೊಂಡು 20.789 ಟಿಎಂಸಿ ನೀರನ್ನು ನಿಗದಿ ಮಾಡಲಾಗಿದೆ. ಇಂಡಿ ಶಾಖಾ ಕಾಲುವೆಯ ಉಪಯೋಜನೆಯಾದ ಗುತ್ತಿ ಬಸವಣ್ಣ ಯೋಜನೆಯು 'ಎ' ಸ್ಕೀಮಿನಲ್ಲಿ ಅಳವಡಿಸಲಾಗಿತ್ತು. ಆದರ 97 ಕಿ.ಮೀ. ಕಾಲುವೆ ಮುಗಿದಿದ್ದು, ಉಳಿದ 50 ಕಿ.ಮೀ. ಕಾಲುವೆ ಆಗಬೇಕು. ಈಗ ಉಳಿದ 50 ಕಿ.ಮೀ. ಕಾಲುವೆಯಿಂದ ಹರಿವ ನೀರನ್ನು 'ಬಿ' ಸ್ಕೀಮಿಗೆ ನಿಗದಿ ಪಡಿಸಿ, ಯೋಜನೆಯಲ್ಲಿ ಇಲ್ಲದ, ಮುಖ್ಯಮಂತ್ರಿಗಳ ಮತಕ್ಷೇತ್ರಕ್ಕೆ ಆ ನೀರನ್ನು ಹರಿಸುವ ಯೋಜನೆಯನ್ನು ರೂಪಿಸಿ ಕೆಲಸ ಪ್ರಾರಂಭವಾಗಿದೆ. ಇದನ್ನು ಯಾರು ಕೇಳಬೇಕು ?

ಹೀಗೆ ಸಮಸ್ಯೆಗಳ ಪಟ್ಟಿಯನ್ನು ಮಾಡಬಹುದು. ಜಿಲ್ಲೆ ಬಳಲುತ್ತಿರುವುದು ಯಾವುದೇ ಪಕ್ಷದ ರಾಜ್ಯ ಸರಕಾರದಿಂದ ಅಲ್ಲ ಜನಪ್ರತಿನಿಧಿಗಳ ಇಚ್ಛಾ ಶಕ್ತಿಯ ಕೊರತೆಯಿಂದ ಬಳಲುತ್ತಿದೆ ಎಂಬುದನ್ನು ಅವರು ಮನಗಾಣಬೇಕು. ಜನರು ಹೋರಾಟ ಮಾಡಲು ಹಿಂಜರಿಯುವುದಿಲ್ಲ ಆದರೆ ಅದನ್ನು ತಮ್ಮ ಮನಸ್ಸಿಗೆ ಬಂದಾಗ ಉಪಯೋಗಿಸುತ್ತೇವೆ ಎಂದರೆ ಹೋರಾಟಕ್ಕೆ ಅರ್ಥ ಉಳಿಯುವುದಿಲ್ಲ ಅದು ತನ್ನ ಮೌಲ್ಯವನ್ನೇ ಕಳೆದುಕೊಳ್ಳುವ ಭೀತಿ ಇದೆ. ಹಾಗಾಗದ ಮುನ್ನ ಜಿಲ್ಲೆಯ ಎಲ್ಲಜನಪ್ರತಿನಿಧಿಗಳು ಪ್ರತಿಷ್ಠೆ ಬದಿಗಿಟ್ಟು, ಪಕ್ಷಭೇದವಿಲ್ಲದೆ ಒಂದಾಗಿ ಮೊದಲು ಜಿಲ್ಲೆಯ ನೀರಾವರಿ ಸಮಸ್ಯೆಗಳನ್ನು ಸದನದಲ್ಲಿ ಅರ್ಥಪೂರ್ಣವಾಗಿ ಬಿಂಬಿಸುವ ಪ್ರಯತ್ನ ಮಾಡಲಿ. ಅಲ್ಲಿ ಜಿಲ್ಲೆಗೆ ಅನ್ಯಾಯವಾಗುತ್ತದೆ ಎಂದು ಕಂಡು ಬಂದರೆ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ರಾಜೀನಾಮೆ ಕೊಟ್ಟು ಹೊರಬರಲಿ. ಆಗ ಇಡೀ ಜಿಲ್ಲೆಯೇ ಅವರ ಬೆನ್ನ ಹಿಂದೆ ನಿಲ್ಲುತ್ತದೆ.

-ಕೃಷ್ಣ ಕೊಲ್ಹಾರ ಕುಲಕರ್ಣಿ

ಆಲಮಟ್ಟಿ ಅಣೆಕಟ್ಟೆ ಎತ್ತರಕ್ಕೆ ನಿರ್ಬಂಧ: ಕರ್ನಾಟಕಕ್ಕೆ ಉರುಳು

ಕೃಷ್ಣ ಕೊಲ್ಹಾರ ಕುಲಕರ್ಣಿ

ವಿಜಾಪುರ, ಡಿ. 15– ಆಲಮಟ್ಟಿ ಅಣಕಟ್ಟೆಗೆ 26 ಕ್ರೆಸ್ಟ್ ಗೇಟ್‌ಗಳನ್ನು ಅಳವಡಿಸಲು ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಸರ್ಕಾರಕ್ಕೆ ಅನುಮತಿ ನೀಡಿದೆಯಾದರೂ 509 ಮೀಟರ್‌ಗಿಂತ ಅಧಿಕ ಎತ್ತರದ ಗೋಡೆಯನ್ನು ನಿರ್ಮಿಸಕೂಡದೆಂಬ ನಿರ್ಬಂಧದಿಂದಾಗಿ 2000 ಇಸ್ವಿಯೊಳಗಾಗಿ ಕರ್ನಾಟಕವು ತನ್ನ 173 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂಬುದು ತಜ್ಞರ ಅಭಿಪ್ರಾಯವಾಗಿದೆ.

ಬಚಾವತ್ ಆಯೋಗದ ತೀರ್ಪಿನಲ್ಲಿ 'ಎ' ಸ್ಕೀಮಿನ ಅನುಗುಣವಾಗಿ ಕರ್ನಾಟಕವು ಕ್ರಿ.ಶ. 2000 ರೊಳಗೆ 734 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬೇಕು.

ಆಲಮಟ್ಟಿ ಅಣೆಕಟ್ಟೆಯ ಗೋಡೆಯನ್ನು ಈಗ 509 ಮೀಟರ್‌ಗೆ ಎತ್ತರಿಸುವುದರಿಂದ ಕ್ರೆಸ್ಟ್ ಗೇಟ್‌ಗಳ ಮೇಲೆ 506 ಮೀಟರ್‌ನಿಂದ ಕೇವಲ ಮೂರು ಮೀಟರ್ ಎತ್ತರಿಸಿ ಸುಮಾರು 30 ಟಿ.ಎಂ.ಸಿ. ನೀರಿನ ಕ್ಷಮತೆಯನ್ನು ಹೊಂದಿ ಗರಿಷ್ಠ ಸುಮಾರು 45 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬಹುದು.

ಹೀಗೆ ಒಟ್ಟಾರೆ ನಾರಾಯಣಪುರ ಹಾಗೂ ಆಲಮಟ್ಟಿಗಳಿಂದ ಗರಿಷ್ಠವಾಗಿ 99 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಲು ಸಾಧ್ಯವಾದೀತು. ಆಗ ಕರ್ನಾಟಕಕ್ಕೆ ಅನುಮತಿ ಇರುವ ಇನ್ನುಳಿದ 74 ಟಿ.ಎಂ.ಸಿ. ನೀರಿನ ಬಳಕೆ ಸಾಧ್ಯವೇ ಆಗುವುದಿಲ್ಲ.

ಫಲಿತಾಂಶವಾಗಿ ಅಪ್ಪರ ಬಳಕೆಯಿಂದ ಶಾಶ್ವತವಾಗಿ ವಂಚಿತವಾಗಬೇಕಾಗುತ್ತದೆ. ಇನ್ನು ಅಧಿಕ ನೀರನ್ನು ಬಳಸಿಕೊಳ್ಳುತ್ತದೆ ಎಂಬ ಆಂಧ್ರದ ಬೊಬ್ಬೆ ಉದ್ಭವಿಸುವುದೇ ಇಲ್ಲ. ಆದ್ದರಿಂದ 509 ಮೀಟರ್‌ಗಿಂತ ಅಧಿಕವಾಗಿ ಗೋಡೆಯನ್ನು ಎತ್ತರಿಸುವುದಿಲ್ಲವೆಂದು ಪ್ರಮಾಣಪತ್ರ ಬರೆದುಕೊಡುವುದೆಂದರೆ ಅದು ಕರ್ನಾಟಕದ ಪಾಲಿಗೆ ಆತ್ಮಹತ್ಯಾ ಕ್ರಮವಾಗುವುದಲ್ಲದೆ ರಾಜ್ಯಕ್ಕೆ ಈ ಶತಮಾನದ ಅತ್ಯಂತ ಕ್ರೂರ ಶಿಕ್ಷೆಯಾಗುತ್ತದೆಂದೂ ಹೇಳಲಾಗುತ್ತದೆ.

ವಾಸ್ತವದಲ್ಲಿ ಬಚಾವತ್ ಆಯೋಗದ ತೀರ್ಪಿನಲ್ಲಿ ಕೇವಲ ನೀರಿನ ಬಳಕೆಯ ಪ್ರಮಾಣವಿದೆಯೇ ಹೊರತು ಅದನ್ನು ಹೇಗೆ? ಎಲ್ಲಿ? ಮತ್ತು ಯಾವ ರೀತಿಯಾಗಿ ಬಳಸಿಕೊಳ್ಳಬೇಕೆಂಬ ಉಲ್ಲೇಖವಿಲ್ಲ.

ಕರ್ನಾಟಕವು ತನ್ನ ಪಾಲಿನ 734 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಕ್ರಿ.ಶ. 2000ರ ಹೊತ್ತಿಗೆ ಸಮರ್ಥವಾಗಬೇಕು. ಆಗದಿದ್ದಲ್ಲಿ ಅಷ್ಟು ಪ್ರಮಾಣದ ನೀರಿನ ಬಳಕೆಯ ಹಕ್ಕನ್ನು ಕಳೆದುಕೊಳ್ಳುತ್ತದೆ ಎಂದು ಹೇಳಲಾಗುತ್ತದೆ.

ಅಲ್ಲಿ ಇಂತಿಷ್ಟೇ ಎತ್ತರದ ಗೋಡೆಯನ್ನು ಕಟ್ಟರಿ, ಇಲ್ಲಿಯೇ ಕಟ್ಟರಿ ಇತ್ಯಾದಿಯಾಗಿ ಎಲ್ಲಿಯೂ ನಮೂದಿಸಿಲ್ಲ. ಪ್ರತಿ ರಾಜ್ಯಗಳು ನಿರ್ದಿಷ್ಟ ಪ್ರಮಾಣದ ನೀರನ್ನು ಬಳಸಿಕೊಳ್ಳುವ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಎಂದು ಸ್ಪಷ್ಟವಾಗಿದೆ.

ಆಂಧ್ರದ ಈ ಮೊಂಡು ನ್ಯಾಯದಿಂದ ಈಗ ಕರ್ನಾಟಕವು 74 ಟಿಎಂಸಿ ನೀರಿನ ಬಳಕೆಯಿಂದ ವಂಚಿತವಾಗುವ ಸಂದರ್ಭ ಉಂಟಾಗಿದೆ. ಕ್ರಿ.ಶ. 2000ದ ಹೊತ್ತಿಗೆ ಈ ನೀರನ್ನು ಬಳಸಿಕೊಳ್ಳದಿದ್ದರೆ ಶಾಶ್ವತವಾಗಿ ಅಷ್ಟನ್ನೂ ಕಳೆದುಕೊಳ್ಳುತ್ತದೆ. ಕರ್ನಾಟಕ ಬಳಸಿಕೊಳ್ಳಬೇಕಾದ 734 ಟಿಎಂಸಿ ನೀರಿನಲ್ಲಿಯ 173 ಟಿಎಂಸಿ ನೀರಿನ ಬಳಕೆಯನ್ನು ಆಲಮಟ್ಟಿಯಿಂದ ಮಾಡಿಕೊಳ್ಳುವ ಯೋಜನೆಯ ಪ್ರಥಮ ಹಂತವು ಹತ್ತು ವರುಷಗಳ ಹಿಂದೆಯೇ ಈ 5-9 ಮೀಟರ್ ಎತ್ತರದ ಗೋಡೆಯನ್ನು ಕಟ್ಟಿ ಸುಮಾರು 119 ಟಿಎಂಸಿ ನೀರನ್ನು ಬಳಸಿಕೊಳ್ಳಬೇಕಾಗಿತ್ತು.

ಅನಂತರದ ಎರಡನೆಯ ಹಂತದಲ್ಲಿ ಗೋಡೆಯನ್ನು 519.60 ಮೀಟರುಗಳಿಗೆ ಎರಿಸಿ ಉಳಿದ 54 ಟಿಎಂಸಿ ನೀರನ್ನು ಬಳಸಿಕೊಳ್ಳುವುದು ಆದರ ಉದ್ದೇಶವಾಗಿತ್ತು. ಇದರಲ್ಲಿ ಡಾಮದಾಳ, ಹಿಪ್ಪರಗಿ, ಮುಳವಾಡ ಮುಂತಾದ ಯಾತ ನೀರಾವರಿ ಯೋಜನೆಗಳೂ ಒಳಗೊಂಡಿವೆ. (ಆರನೇ ಪುಟಕ್ಕೆ)

ಆಲಮಟ್ಟಿ ಅಣೆಕಟ್ಟೆ ಎತ್ತರಕ್ಕೆ ನಿರ್ಬಂಧ

(ಮೊದಲನೇ ಪುಟದಿಂದ)

ಈಗ ಈ ಯಾವ ಯಾತ ನೀರಾವರಿ ಯೋಜನೆಗಳೂ ಪೂರ್ಣಗೊಂಡಿಲ್ಲವಾದರೂ ಅವು ಮುಂದೆ ಪೂರ್ಣಗೊಂಡಾಗಲೂ 509 ಮೀಟರು ಗೋಡೆಯಿಂದ ಯಾತ ನೀರಾವರಿಗೆ ನೀರನ್ನು ಬಳಸಿಕೊಳ್ಳುವುದೂ ಸಾಧ್ಯವಾಗುವುದಿಲ್ಲ. ಜೊತೆಗೆ ವಿದ್ಯುತ್ ಉತ್ಪಾದನೆಯನ್ನಂತೂ ಮರೆತೇ ಬಿಡಬೇಕಾಗುತ್ತದೆ.

ಅಣಕಟ್ಟನ್ನು 519.60 ಮೀಟರ್ ಎತ್ತರಿಸಿ ತನ್ನ ಪಾಲಿನ 173 ಟಿಎಂಸಿ ನೀರನ್ನು ಬಳಸಿಕೊಳ್ಳಲು ಬೇಕಾಗುವ ವಿದ್ಯುತ್ತನ್ನು ಉತ್ಪಾದಿಸಲು ಗೋಡೆಯನ್ನು 524-256 ಮೀಟರಿನಷ್ಟು ಎತ್ತರಿಸಬೇಕಾಗುತ್ತದೆ. 519.60 ಮೀಟರ್‌ನಿಂದ 524-256 ಮೀಟರಿನವರೆಗೆ ಹರಿಯುವ ನೀರನ್ನು ವಿದ್ಯುತ್ತಿಗೆ ಮಾತ್ರ ಉಪಯೋಗಿಸಿ ಅದನ್ನು ಕೃಷಿಗೆ ಉಪಯೋಗಿಸದ ಹಾಗೆಯೇ ಮುಂದೆ ಹರಿಯ ಬಿಡುವುದು ಯೋಜನೆಯ ಆಶಯವಾಗಿತ್ತು.

ಈಗ ಗೋಡೆ 509 ಮೀಟರಿಗೆ ನಿಂತರೆ ಬಳಕೆಯ ಪ್ರಮಾಣದಲ್ಲಿಯ 74 ಟಿಎಂಸಿ ನೀರಿನ ಪೋತಾ ಆದಾಗ ವಿದ್ಯುತ್ ಉತ್ಪಾದನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

'ನಾಳೆಯಿಂದಲೇ ಕಾರ್ಯ ಪ್ರಾರಂಭ' ಎಂದು ಹೇಳುವ ನೀರಾವರಿ ಸಚಿವ ನಾಗೇಗೌಡರಿಗೆ ಅಲ್ಲಿ ಪ್ರಾರಂಭಿಸಲು ಅವಕಾಶವೇ ಇಲ್ಲ, ಏನಿದ್ದರೂ ಸಮಾಧಿ ಮಾತ್ರ ಎಂದು ತಜ್ಞರು ಹೇಳುತ್ತಾರೆ.

ಈಗ ಸುಮಾರು 75 ಟಿಎಂಸಿ ನೀರನ್ನು ಶಾಶ್ವತವಾಗಿ ಕಳೆದುಕೊಳ್ಳುವಾಗ ನಾಗೇಗೌಡರು ಸ್ವಾಗತಿಸುತ್ತಿದ್ದಾರೆ ಎಂಬುದು ಮಾತ್ರ ಇಲ್ಲಿಯ ದುರಂತ!

ಪಿಸಿದ್ದಾರೆ. ಪಂಚಾಯ್ತಿಯಿಂದ ಹಿಡಿದು ತಾಲೂಕಾ ಅಧಿಕಾರಿಗಳವರೆಗೆ ಈ ಬಗ್ಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದಿರುವ ಅವರು, ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸುವರೇ ಎಂದು ಪ್ರಶ್ನಿಸಿದ್ದಾರೆ.

ನಾಳೆ ಸಯೀದ್ ಅಯ್ಯೆ ಖಚಿತ

ನವ ದೆಹಲಿ, ಡಿ. 15- ಅಧಿಕಾರಾರೂಢ ಬಿಜೆಪಿ ಮೈತ್ರಿಕೂಟ ಹಾಗೂ ಕಾಂಗ್ರೆಸ್‌ಗಳ ಒಮ್ಮತದ ಅಭ್ಯರ್ಥಿ ಪಿ.ಎಂ. ಸಯೀದ್ ಅವರು ಗುರುವಾರ ಲೋಕಸಭೆ ಉಪಾಧ್ಯಕ್ಷ ಸ್ಥಾನಕ್ಕೆ ವಿಪಚಾರಿಕವಾಗಿ ಆಯ್ಕೆಗೊಳ್ಳಲಿದ್ದಾರೆ.

ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ರೀತಾ ವರ್ಮಾ ಕಣದಿಂದ ಹಿಂದೆ ಸರಿಯುತ್ತಿರುವುದರಿಂದ ಸಯೀದ್ ಆಯ್ಕೆ ಖಚಿತವಾದಂತಾಗಿದೆ.

ನಿರಾಶ್ರಿತರ ಹೋರಾಟ: ಬಣ್ಣ ಬದಲಿಸಿದ ಶಾಸಕರು

1-3-97

(ವಿಶೇಷ ಪ್ರತಿನಿಧಿಯಿಂದ)

ಬಿಸಿರಕ್ತದ ತರುಣರು, ರಾಜಕೀಯದ ಲೇಪವಿಲ್ಲದೆ ತೊಂಭತ್ತು ಹಳ್ಳಿಗಳನ್ನು ತಿರುಗಿ ಅಲ್ಲಿಯ ಅವಸ್ಥೆಯನ್ನು ಕಂಡು ಕೆರಳಿದರು. ರಾಜಕೀಯ ಮುಖಂಡರು ತಮ್ಮ ಮತಪೆಟ್ಟಿಗೆಯನ್ನು ಭದ್ರಗೊಳಿಸಲು ಮಾತ್ರ ಘೋಷಣೆಗಳನ್ನು ಕೂಗುತ್ತಿದ್ದಾರೆಂದು ತಿಳಿದು ಕೊನೆಗೆ ತಾವೇ ಕಳೆದ 11ನೆಯ ತಾರೀಖಿನಂದು ಸಂತ್ರಸ್ತರ ಬೃಹತ್ ಸಮಾವೇಶವನ್ನು ಕರೆದರು. ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಆಮರಣ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಹದಿಮೂರನೆಯ ದಿನ ಅವರನ್ನು ಕಂಡಾಗ ಸತ್ಯಾಗ್ರಹದ ನೇತೃತ್ವವನ್ನು ವಹಿಸಿದ ಪದವೀಧರ ಮಲ್ಲಿಕಾರ್ಜುನ ಹಿರೇಮಠರು ಹೇಳಿದ್ದು "ಅವರೆಗೆ ಯಾವ ರಾಜಕಾರಣಿಯಾಗಲಿ, ಅಧಿಕಾರಿಗಳಾಗಲಿ, ಮಂತ್ರಿಗಳಾಗಲಿ ಬಂದು ಕೇಳಲಿಲ್ಲವಂತೆ. ಬದಲಾಗಿ ದಿನಾಂಕ 17 ರಂದು ಮೊದಲೆ ತಿಳಿಸಿ ಒಂದು ದಿನದ ರಸ್ತೆ ತಡೆಯನ್ನು ಕೈಕೊಂಡಾಗ 32 ಜನ ತರುಣ ಸತ್ಯಾಗ್ರಹಿಗಳನ್ನು ಬಂಧಿಸಿ ವಿಜಾಪುರದ ದರ್ಗಾ ಜೇಲಿಗೆ ಕಳಿಸಿದರಂತೆ. ಎರಡು ದಿನಗಳ ನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು ಮತ್ತೆ ಕುಳಿತಿದ್ದಾರೆ.

ಅವರು ಜೇಲಿಗೆ ಹೋದಾಗ ಸುತಲಿನ ಹಳ್ಳಿಯ ಜನ ಹಣ್ಣು ಗಂಡಂಬ ಭೇದವಿಲ್ಲದೆ ನೂರಾರು ಜನ ಸತ್ಯಾಗ್ರಹವನ್ನು ಮುಂದುವರಿಸಿದ್ದರು ಎಂದು ಹೋರಾಟ ಸಮಿತಿ ಅಧ್ಯಕ್ಷ ಕಂಪ್ಯೂಟರ್ ವಿಜ್ಞಾನದ ಪದವೀಧರ ಟಿ.ಆರ್. ಪಾಟೀಲ್ ಹೇಳಿದರು. ಪ್ರಥಮ ದಿನದ ಬೃಹತ್ ಸಮಾವೇಶ ಹಾಗೂ ಸತ್ಯಾಗ್ರಹವನ್ನು ಉದ್ಘಾಟಿಸಿದ ಮಾಜಿ ಸಂಸತ್ ಸದಸ್ಯ ಎಸ್.ಟಿ. ಪಾಟೀಲ ಹಾಗೂ ಜಿಲ್ಲಾ ಪರಿಷತ್ತಿನ ಮಾಜಿ ವಿರೋಧಿ ನಾಯಕ ಬಾಡಗಂಡಿಯ ಎಸ್.ಆರ್. ಪಾಟೀಲರನ್ನು ಬಿಟ್ಟರೆ ಉಳಿದಂತೆ ಯೋಜನಾ ಬಾಧಿತ ಪ್ರದೇಶಗಳ ಶಾಸಕರು, ಸಂಸತ್ ಸದಸ್ಯರು ಇತ್ತ ಕಡೆಗೆ ಕಣ್ಣು ಹಾಯಿಸದೇ ಇರಲು ಮುಖ್ಯ ಕಾರಣವೆಂದರೆ ಅವರ ಪ್ಲಾರ್ಥ ರಾಜಕಾರಣವೆಂದು ಕಾರ್ಯದರ್ಶಿ ಕೆ.ಬಿ. ಬಾಳಗೋಳ ಹೇಳುವಾಗ ಅವರಲ್ಲಿ ಸಿಟ್ಟು ತುಂಬಿಬಂದಿತ್ತು.

ವಾಸ್ತವದಲ್ಲಿ ಯೋಜನಾ ಬಾಧಿತ ಪ್ರದೇಶದ ಐವರು ಶಾಸಕರಲ್ಲಿ ಕಾಂಗ್ರೆಸ್ ಹಾಗೂ ಜನತಾದಳದ ಉಭಯ ಪಕ್ಷಗಳವರೂ ಇದ್ದಾರೆ. ಒಬ್ಬರು ರಾಜ್ಯ ಮಂತ್ರಿಗಳೂ ಆಗಿದ್ದಾರೆ. ಸಂಸತ್ ಸದಸ್ಯರಿಬ್ಬರೂ ದಳದವರು. ವಿಧಾನ ಸಭೆಯ ಚುನಾವಣೆಯ ನಂತರ ಮುಳುಗಡೆ ಪ್ರದೇಶದ ಜನರ ಸಂಕಷ್ಟಗಳನ್ನೆ ಮುಂದೆ ಮಾಡಿ ಅದೇ ಬಂಡವಾಳದಿಂದ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಬೀಳಗಿಯ ಶಾಸಕರಾದ ತರುಣ ಜೆ.ಟಿ. ಪಾಟೀಲರು ಅವರ ಜೊತೆಗಾರರಾದ ವಾಸಣ್ಣ ದೇಸಾಯಿ ತಮ್ಮನ್ನೆಲ್ಲ ಉಪಯೋಗಿಸಿಕೊಂಡರೆಂದು ನೇರವಾಗಿ ಆಪಾದಿಸುತ್ತಾರೆ ಹಿರೇಮಠ, ಪಾಟೀಲ ಹಾಗೂ ಬಾಳಗೋಳ ಅವರು.

ಕೃಷ್ಣಾ ಮೇಲ್ದಂಡೆ ಯೋಜನೆ

ಕೊನೆಗೆ ಬೆಂಗಳೂರಿನಲ್ಲಿ ನೀರಾವರಿ ಮಂತ್ರಿ ನಾಗೇಗೌಡರನ್ನು ಭೇಟಿಯಾಗಲು ಸಂತ್ರಸ್ತರನ್ನು ಸಂಘಟಿಸುವಲ್ಲಿ ತಮ್ಮ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿಕೊಂಡರಂತೆ. ಅನಂತರ ಏನಾಯಿತೊ ಒಮ್ಮೆಲೆ ಜೆ.ಟಿ. ಪಾಟೀಲರ ಹಾಗೂ ವಾಸಣ್ಣ ದೇಸಾಯಿಯವರ ದನಿಯೇ ಬದಲಾಗಿ ಎಲ್ಲ ಬೇಡಿಕೆಗಳನ್ನು ಸರಕಾರ ಒಪ್ಪಿಕೊಂಡಿದೆಯೆಂದು ಹೇಳಿಕೆ ನೀಡ ಹತ್ತಿದರೆಂದು ಹೇಳುವಾಗ ಈ ತರುಣರಿಗೆ ಶಾಸಕರ ಬಗ್ಗೆ ಸಂಶಯ.

ಇಂದು ಸರಕಾರ ಹಾಗೂ ಶಾಸಕರು ಮಾಡಿದಂತೆ ಪ್ರತಿದಿನ ತೊಂದರೆ ಕೊಟ್ಟರು. ಕೊನೆಗೆ ಶಾಂತತಾ ಭಂಗ, ಸಾರ್ವಜನಿಕ ತೊಂದರೆ ಹಾಗೂ ದಂಗೆಯ ಆರೋಪಣೆಗಳನ್ನು ಹೊಂಸಿ 32 ಜನರನ್ನು ದಸ್ತಗಿರಿ ಮಾಡಿದರೆಂದು ಹೇಳುತ್ತಾರೆ.

ಊರವರ ಹೇಳಿಕೆಯಂತೆ ಸತ್ಯಾಗ್ರಹಿಗಳಿಂದ ಯಾವುದೇ ಶಾಂತತಾ ಭಂಗವಾಗಲೀ, ದಂಗೆಯಾಗಲೀ ನಡೆದಿಲ್ಲ, ಶಾಂತತೆಯಿಂದ ಸತ್ಯಾಗ್ರಹ ಮುಂದುವರಿಯುತ್ತಿದೆಯೆಂದು ಹೇಳುತ್ತಾರೆ. ಪ್ರತಿದಿನ ಸುತ್ತಲಿನ ಬೇರೆ-ಬೇರೆ ಹಳ್ಳಿಯ ಮಹಿಳೆಯರು-ಗಂಡಸರು ಗುಂಪುಗುಂಪಾಗಿ ಬಂದು ಸರದಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತುಕೊಳ್ಳುತ್ತಾರೆ.

ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರ ಪುನರ್ವಸತಿ ಯೋಜನೆಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ. ಶಾಸಕರು ತಮ್ಮ ಬಣ್ಣ ಬದಲಿಸಿದ್ದಾರೆ. ಬೇಡಿಕೆ ಈಡೇರಿಲ್ಲ ಎಂದು ಬಿಸಿರಕ್ತದ ತರುಣರು ಹೋರಾಟಕ್ಕಿಳಿದು ಜೈಲು ಸೇರಿದ್ದಾರೆ.

ಹೇಳುವ ಬೇಡಿಕೆಯ ಈಡೇರಿಕೆಯ ಬಗ್ಗೆ ಹೇಳುವಾಗ ವಾಸ್ತವದಲ್ಲಿ ಯಾವ ಬೇಡಿಕೆಗಳೂ ಈಡೇರಿಲ್ಲವೆಂದು ಪಟ್ಟಿ ಮಾಡುತ್ತಾರೆ. ಪ್ರತಿಯೊಬ್ಬರಿಗೂ ನಿವೇಶನ ಹಾಗೂ ಕಟ್ಟಲು 22 ಸಾವಿರ ರೂಪಾಯಿಗಳ ಒಪ್ಪಂದ ಮೊದಲೇ ಆಗಿತ್ತು. ಉಳಿದ ಎಲ್ಲ ಬೇಡಿಕೆಗಳ ಬಗ್ಗೆ ಇಂದಿಗೂ ಕೇವಲ ಭರವಸೆ ಮಾತ್ರ ಕೊಡುತ್ತಿದ್ದಾರೆಯೇ ಹೊರತು ಕ್ರಿಯೆಯಲ್ಲಿ ಬಂದಿಲ್ಲವೆನ್ನುತ್ತಾರೆ. ಅದಕ್ಕಾಗಿಯೇ ಈ ರಾಜಕಾರಣಿಗಳ ಬಗ್ಗೆ ರೋಸಿ ತಾವೇ ಸತ್ಯಾಗ್ರಹ ಸಂಘಟಿಸಿದರು. ಮೊದಲ ದಿನ ಹತ್ತುಸಾವಿರಕ್ಕೂ ಅಧಿಕ ಜನರು ಕೂಡಿದ್ದನ್ನು ಕಂಡ ಶಾಸಕರು, ಅಧಿಕಾರಿಗಳು ಇದನ್ನು ಹತ್ತಿಕ್ಕಲೇಬೇಕೆಂಬ ಶಪಥ ಮಾಡಿದ್ದಾರೆ. ಅವರನ್ನು ದಮನ ಮಾಡುವ ಪ್ರಯತ್ನವನ್ನು ರಾಜಕಾರಣಿಗಳು ಮಾಡಿದರೆ ಅಧಿಕಾರಿಗಳಿಗೆ ತುಂಬ ಅನುಕೂಲವಾಗುತ್ತದೆ. ಮೊದಲೆ ಭ್ರಷ್ಟ ವ್ಯವಸ್ಥೆಯಲ್ಲಿ ಮುಳುಗಿದ್ದ ಪುನರ್ವಸತಿ ಪುನರ್ನಿರ್ಮಾಣ ಇಲಾಖೆಗೆ ಇದು ವರವಾಗಿದೆ. ತಾವು ಮಾಡಿದ್ದೇ ರಾಜ್ಯವೆಂಬ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ಅಧಿಕಾರಿಗಳ ಹುಳುಕುಗಳನ್ನು ಎತ್ತಿ ತೋರಿಸುವಲ್ಲಿ ಈ ತರುಣರು ಯಶಸ್ವಿಯಾಗಿದ್ದಾರೆಂದೇ ಸಂತ್ರಸ್ತರ ಮನೆಕಟ್ಟುವಲ್ಲಿ ನೀಡುವ ಅನುದಾನದಲ್ಲಿಯ ಐದೂವರೆಕೋಟಿ ರೂಪಾಯಿಗಳ ಹಗರಣ ಈಗ ಎಲ್ಲರಿಗೂ ಗೊತ್ತಾಗಿದೆ.

ತಾವು ಅಮೆರಿಕೆಗೆ ಹೋದಾಗ ಇಂಥದಾಯಿತೆಂದು ಪುನರ್ವಸತಿ-ಪುನರ್ನಿರ್ಮಾಣ ಆಯುಕ್ತದ ನಿಮಿತ್ತ ಕಾರ್ಯದರ್ಶಿಗಳಾದ ಡಾ. ಎಸ್.ಎಂ. ಜಾಮದಾರರು ಸಮಜಾಯಿಷಿ ನೀಡಿದ್ದಾರಾದರೂ ಅವರು ಪರದೇಶಕ್ಕೆ ಹೋದದ್ದು ಒಂದು ತಿಂಗಳು ಮಾತ್ರ. ಆದರೆ ಈ 'ಗುಳುಂ' ವ್ಯವಹಾರ ಕಳೆದ ಒಂದು ವರ್ಷದಿಂದ ನಡೆದಿದೆಯೆಂದು ದಾಖಲೆ ಸಹಿತ ಈ ಸತ್ಯಾಗ್ರಹಿಗಳು ಹೇಳುತ್ತಾರೆ.

ಬರೀ ಪ್ರಾಮಾಣಿಕರಾಗಿದ್ದರಷ್ಟೇ ಸಾಲದು. ದಕ್ಷತೆ ಹಾಗೂ ಬಿಗಿ ಆಡಳಿತವೂ ಬೇಕು ಎನ್ನುತ್ತಾರೆ. ಎಷ್ಟೋ ವರುಷಗಳಿಂದ ತಮ್ಮ ಪಿತ್ರಾರ್ಜಿತ ಆಸ್ತಿ ಎಂಬ ಹಾಗೆ ವರ್ತಿಸುತ್ತಿರುವ ಪುನರ್ವಸತಿ ಕಚೇರಿಗಳಲ್ಲಿಯ ಸಿಬ್ಬಂದಿಯನ್ನು ಮಾತನಾಡಿಸಬೇಕಾದರೇ ದುಡ್ಡು ಕೊಡಬೇಕಾಗುತ್ತದೆ ಎಂದು ರೋಷದಿಂದ ಹೇಳುತ್ತಾರೆ. ಪರಿಸ್ಥಿತಿಯ ಅರಿವು ಈ ತರುಣರಲ್ಲಿದೆ. ಆದರೆ ಅದನ್ನು ಯೋಗ್ಯರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಆದಕ್ಕಾಗಿ ಅಧಿಕಾರಿಗಳು, ರಾಜಕಾರಣಿಗಳು ತಮ್ಮ ತಮ್ಮ ತಪ್ಪು ಹೊರಬೀಳುತ್ತದೆಂಬ ಕಾರಣದಿಂದ ಇವರನ್ನು ಬಲಿಪಶುವನ್ನಾಗಿ ಮಾಡಲು ಹೊರಟರೆ ಇಡೀ ಮುಳುಗಡೆ ಪ್ರದೇಶಕ್ಕೆಯೇ ಕೊಳ್ಳಿ ಇಟ್ಟಂತಾದೀತೆಂದು ನೆರೆದವರಲ್ಲಿಯ ಹಿರಿಯರೊಬ್ಬರು ನುಡಿದದ್ದು ಸತ್ಯವಾಗಿಬಾರದು.

ರಾಜು

ಅಭ್ಯಂಜನ



ನೀರಿನ ಗುಳ್ಳೆ ಒಡೆದು ತನ್ನ ಮೇಲೆ ಬಿದ್ದಾಗ ಶ್ವಾನಮರಿ ಮಾತಾಡಿಸಿ ರಾಜುವಿಗೆ ಸ್ನಾನ ಮಾಡಿಸಿತು.

52

ಕೃಷ್ಣಾ ಮೇಲ್ದಂಡೆ ಪುನರ್ವಸತಿ ಯೋಜನೆ: ತೊಗಲಕ್ ದರ್ಬಾರು-೨

ಲಕ್ಷಾಂತರ ರೂ. ಪ್ಯೋಲು: ಸೌಲಭ್ಯ ಮಾತ್ರ ಸೊನ್ನೆ!

ವರದಿ: ಕೃಷ್ಣಕೊಲ್ಹಾರ ಕುಲಕರ್ಣಿ

ಧವಳೇಶ್ವರ ಬೀಳಗಿ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ಸುಮಾರು ೧೫೦-೧೭೦ ಮನೆಗಳಿರಬಹುದು. ಈ ವರುಷ ಧವಳೇಶ್ವರ ಗ್ರಾಮ ಕೃಷ್ಣೆಯಲ್ಲಿ ಮುಳುಗುತ್ತದೆಂದು ನೀರಾವರಿ ಇಲಾಖೆಯವರು ಅಂದಾಜು ಮಾಡಿದ್ದಾರೆ. ಮನೆಗಳ ಹಾಗೂ ಮುಳುಗಡೆಯಾಗುವ ಭೂಮಿಯ ಪರಿಹಾರ ಹಣವನ್ನೂ ಕೊಟ್ಟಿದ್ದಾರೆ. ನಾಲ್ಕು ವರುಷಗಳ ಹಿಂದೆ ಪುನರ್ವಸತಿ ಕೇಂದ್ರವನ್ನು ಗುರುತಿಸಿ ಸ್ಥಳವನ್ನೂ ಪಡೆದುಕೊಂಡರು. ಅದೊಂದು ಎರೆ ಭೂಮಿಯ ಹೊಲ. ಅಲ್ಲಿ ಹತ್ತೆಂಟು ಅಡಿಗಳಷ್ಟು ಅಗೆದರೂ ಥರ ಸಿಗುವುದಿಲ್ಲ. ಈ ವಿಷಯವನ್ನು ಧವಳೇಶ್ವರ ಗ್ರಾಮದ ಜನರು ಸಂಬಂಧಪಟ್ಟ ಅಧಿಕಾರಿಗಳಿಗೆ ಅಂದೇ ತಿಳಿಸಿದರು. ಅದನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಸರ್ಕಾರದ ಜನರು ತಮ್ಮ ಪಾಡಿಗೆ ತಾವು ಮುಂದಿನ ಕ್ರಮ ತೆಗೆದುಕೊಳ್ಳಹತ್ತಿದರು.

ಧವಳೇಶ್ವರ ಗ್ರಾಮದ ಜನರಿಗಾಗಿ ಈ ಪುನರ್ವಸತಿ ಕೇಂದ್ರದಲ್ಲಿ ಶಾಲೆಯನ್ನು ಕಟ್ಟಲು ಪ್ರಾರಂಭಿಸಿತು. ಆಗಲೂ ಜನರು ತಿಳಿಸಿ ಹೇಳಿದರು. ಸರಕಾರ ಕೇಳಲಿಲ್ಲ. ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿಯೇಬಿಟ್ಟಿತು. ಅದಕ್ಕೆ ಖರ್ಚನ್ನೂ ಮಾಡಿತು. ಅರ್ಧ ಕಟ್ಟುವುದರ ಒಳಗಾಗಿ ಕಟ್ಟಡ ಬಿರುಕು ಬಿಟ್ಟಿತು. ಥರವೇ ಇಲ್ಲದಾಗ ಕಟ್ಟಡ ಹೇಗೆ ನಿಂತೀತು? ಮುಂದಿನ ದಿನಗಳಲ್ಲಿ ಕಟ್ಟೋಣವನ್ನು ಅಲ್ಲಿಗೆಯೇ ನಿಲ್ಲಿಸಿ ಸರಕಾರ ನಿದ್ದೆ ಮಾಡಹತ್ತಿತು. ಈಗ ಈ ವರುಷ ಧವಳೇಶ್ವರ ಗ್ರಾಮ ನೀರಲ್ಲಿ ಮುಳುಗುತ್ತದೆ ಎಂದು ಖಚಿತವಾದಾಗ ಮತ್ತೆ ಓಡಾಡ ಹತ್ತಿತು. ಗ್ರಾಮಸ್ಥರ ಮನ ಒಲಿಸಲು ಪ್ರಯತ್ನಿಸಿತು. ಊರ ಜನ ಅಲ್ಲಿಗೆ ಹೋಗಲು ಸ್ಪಷ್ಟವಾಗಿ ನಿರಾಕರಿಸಿದಾಗ ಅನಿವಾರ್ಯವಾಗಿ ಬೇರೊಂದು ಸ್ಥಳ ಹುಡುಕಲು ಪ್ರಾರಂಭಿಸಿದೆ.

ಇನ್ನು ಸ್ಥಳ ದೊರೆಯಬೇಕು ಸರಕಾರ ಅದನ್ನು ತನ್ನ ಎಂದಿನ ವೇಗದಲ್ಲಿ ಸ್ವಾಧೀನ ಪಡಿಸಿಕೊಂಡು ನಿವೇಶನಗಳನ್ನು ಗುರುತಿಸಬೇಕು. ಅಲ್ಲಿ ನೀರಿನ, ದೀಪದ ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಕಟ್ಟಡಗಳಾದ ಶಾಲೆ, ದೇವಸ್ಥಾನ, ಪಂಚಾಯಿತಿ ಇತ್ಯಾದಿ ಕಟ್ಟಡಗಳನ್ನು ಕಟ್ಟಬೇಕು. ರಸ್ತೆಗಳನ್ನು ಮಾಡಬೇಕು. ಬೇರೆ ಊರುಗಳೊಂದಿಗೆ ಸಂಪರ್ಕ ಕಲ್ಪಿಸಬೇಕು. ಇದಕ್ಕೆಲ್ಲ ಮೊದಲು ಪುನರ್ವಸತಿ ಕೇಂದ್ರಕ್ಕಾಗಿ ಸ್ಥಳ ದೊರೆಯಬೇಕು. ಇನ್ನು ವಾರ ಒಪ್ಪತ್ತಿನಲ್ಲಿ ಊರು ನೀರಲ್ಲಿ ನಿಲ್ಲುತ್ತದ ಹೇಗಿದೆ ಸರಕಾರೀ ಕೆಲಸ? ಈಗ ಬೆಂಗಳೂರಿನಿಂದ ಹಿಡಿದು ತಾಲ್ಲೂಕುಮಟ್ಟದವರೆಗೆ ಎಲ್ಲ ಅಧಿಕಾರಿಗಳೂ ಧವಳೇಶ್ವರ ಗ್ರಾಮದ ಪ್ರದಕ್ಷಿಣೆ ಹಾಗುತ್ತಿದ್ದಾರೆ. ಕಾರುಗಳು-ಜೀಪುಗಳು ಸ್ಪರ್ತಿನಿತ್ಯ ಊರಿಗೆ ಬರುತ್ತಿವೆ. ಏನೆಲ್ಲ ಮಾತನಾಡುತ್ತಾರೆ. ತಿರುಗಿ ಹೋಗುತ್ತಾರೆ. ಹಳ್ಳಿಯ ಮಕ್ಕಳಿಗೆ ಎಂದೂ ಕಾಣದ ಬಣ್ಣ-ಬಣ್ಣದ ಕಾರುಗಳನ್ನು ನೋಡುವುದೇ ಒಂದು ಆಕರ್ಷಕ ಕೆಲಸವಾಗಿದೆ. ಈಗ ತುರ್ತು ವ್ಯವಸ್ಥೆ ಆಗತ್ಯವಾಯಿತು. ಸರಿ ಆಕಸ್ಮಿಕ ಯೋಜನೆ ಸಿದ್ಧವಾಯಿತು. ಧವಳೇಶ್ವರದ ಪುನರ್ವಸತಿ ಕೇಂದ್ರ ದೊರೆತು ಸಿದ್ಧವಾಗುವವರೆಗೆ ಬದಲೀ ವ್ಯವಸ್ಥೆಯೆಂದು ಹತ್ತಿರದ ಗಡದಿನ್ನಿ ಗ್ರಾಮದ ಭೂಮಿಯನ್ನು ಸರಕಾರ ದೇಣಿಗೆ ಪಡೆದಿದೆ. ಅದರಲ್ಲಿ ಕಟ್ಟಿಗೆಯ ಗಳುವು, ಸಿಂದೀ ಚಾಪೆ ಹಾಗೂ ಟಿನ್ ಷೀಟುಗಳ ೭೦X೨೦ರ ಷೆಡ್ಡುಗಳನ್ನು ಕಟ್ಟುತ್ತಿದ್ದಾರೆ. ಈ ೭೦X೨೦ರ ಒಂದೊಂದು ಷೆಡ್ಡುಗಳಲ್ಲಿ ಹತ್ತು-ಹತ್ತರ ೧೪ ವಿಭಾಗಗಳು. ಈ ಒಂದೊಂದು ವಿಭಾಗದಲ್ಲಿ ಧವಳೇಶ್ವರದ ಒಂದೊಂದು ಕುಟುಂಬ ವಾಸಿಸಬೇಕು. ಅಂದರೆ ಹತ್ತು-ಹತ್ತು ಆಡಿಯ ಗುಡಿಸಲಿನಲ್ಲಿ ಆ ಕುಟುಂಬ ಧವಳೇಶ್ವರದಲ್ಲಿಯ ತನ್ನ ಎಲ್ಲ ಸಾಮಾನು-ಸರಂಜಾಮು, ಹೆಂಡತಿ-ಮಕ್ಕಳು, ದನ-ಕರು ಎಲ್ಲವನ್ನೂ ತಂದು ಇಟ್ಟುಕೊಳ್ಳಬೇಕು. ಹೀಗೆ ಮುಂದೆ ಧವಳೇಶ್ವರದ ಪುನರ್ವಸತಿ ಕೇಂದ್ರಕ್ಕೆ ಸ್ಥಳ ದೊರೆತು ಅಲ್ಲಿ ಎಲ್ಲ ವ್ಯವಸ್ಥೆ ಆಗುವವರೆಗೂ ಈತ ಈ ಹತ್ತು-ಹತ್ತರ ಷೆಡ್ಡಿನಲ್ಲಿ ವಾಸಿಸಬೇಕು! ಸಾಧ್ಯವೆ? ಆದರೆ ಘನ ಸರಕಾರವು ಈ ಜನರಿಗೆ ದೊಡ್ಡ ಉಪಕಾರ ಮಾಡಿದಂತೆ ತನ್ನ ಕೆಲಸವನ್ನು ಮಾಡುತ್ತಲೇ ಇದೆ. ಅಧಿಕಾರಿಗಳು ಬಂದು ನಿಂತು ಕೆಲಸ ಮಾಡಿಸುತ್ತಿದ್ದಾರೆ. ಕೂಲಿಕಾರರು, ಬಡಗಿಗಳು ಕಟ್ಟುತ್ತಿದ್ದಾರೆ. ಆದರೆ ಗ್ರಾಮದ ಜನರು ಇಲ್ಲಿ ಬಂದು ಇರುವುದು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅವರು ತಮ್ಮ ಬೀಗರು-ಬಿಜ್ಜರು ಮತ್ತೆ ಅನ್ಯ ವ್ಯವಸ್ಥೆಯಲ್ಲಿ ತೊಡಗಿದ್ದಾರೆ. ಸರಕಾರ ಒಂದೊಂದು ಷೆಡ್ಡಿಗೆ ಒಂದೊಂದು ಲಕ್ಷಕ್ಕಿಂತ ಅಧಿಕವಾಗಿ ವೆಚ್ಚ ಮಾಡುತ್ತಿದೆ!

ಲಿಂಗದಳ್ಳಿ: ವಿಜಾಪುರ ತಾಲ್ಲೂಕಿನ ಲಿಂಗದಳ್ಳಿಯ ಕಥೆ ಇದಕ್ಕಿಂತಲೂ ರೋಚಕವಾಗಿದೆ. ೧೫೦ ಮನೆಗಳಲ್ಲಿ ೬೦೦ ಜನ ವಸತಿ ಇರುವ ಗ್ರಾಮ. ಈ ವರುಷ ಪೂರ್ತಿಯಾಗಿ ಸ್ಥಳಾಂತರಗೊಳ್ಳಬೇಕು. ಆದರೆ ಈ ತಿಂಗಳೊಪ್ಪತ್ತಿನವರೆಗೂ ಈ ಹಳ್ಳಿ ಮುಳುಗಡೆ ಪ್ರದೇಶದಲ್ಲಿ ಬರುತ್ತದೆಂಬ ಯೋಚನೆಯೂ ಇಲ್ಲದಂತೆ ಸರಕಾರ ಈ ಮೂವತ್ತು ವರುಷಗಳಿಂದ ಇದ್ದುಬಿಟ್ಟಿದೆ. ಇಲ್ಲಿಯ ಯಾವ ಮನೆಗಳಿಗೂ ಪರಿಹಾರ ಹಣ ದೊರೆತಿಲ್ಲ. ಸುಮಾರು ಒಂದು ಸಾವಿರ ಎಕರೆಯಷ್ಟು ಹೊಳೆದಂಡೆಯ ಫಲವತ್ತಾದ ಭೂಮಿ ನೀರಲ್ಲಿ ನಿಲ್ಲುತ್ತದೆ. ಅದಕ್ಕೂ ಪರಿಹಾರವಿಲ್ಲ. ಇಡೀ ಈ ಮೂವತ್ತು ವರುಷಗಳಲ್ಲಿ ತಲಾ ಎಂಟು-ಹತ್ತು ಗುಂಟೆಗಳಷ್ಟು ಭೂಮಿಯ ಅಂದರೆ ಸಾವಿರ ಎಕರೆಯಲ್ಲಿ ಸುಮಾರು ೨೦-೩೦ ಎಕರೆ ಭೂಮಿಗೆ ಪರಿಹಾರ ಹಣ ಕೊಟ್ಟಿದ್ದಾರೆ. ಆದರೆ ಅದನ್ನು ಗ್ರಾಮದ ಬಹುತೇಕ ರೈತರು ತೆಗೆದುಕೊಂಡೇ ಇಲ್ಲ. ಯಾಕೆಂದರೆ ಬರುವ ಮುನ್ನೂರು-ನಾನೂರು ರೂಪಾಯಿಗಳಿಗೆ ನಾಲ್ಕೆಂಟು ಸಲ ಆಲಮಟ್ಟಿಗೆ ಪ್ರದಕ್ಷಿಣೆ ಹಾಕಬೇಕು. ಹಾಕಿಯೂ ಕೈಬೆಚ್ಚಗೆ ಮಾಡದ ಹಣ ಬರುವುದಿಲ್ಲ! ಇಷ್ಟೆಲ್ಲ ಮಾಡಿದಾಗ ಬರುವ ಹಣ ಕೈಗೆ ಬರದೆ ಕೈಯಿಂದ ನೂರಿನ್ನೂರು ಖರ್ಚು ಮಾಡಬೇಕಾಗುತ್ತದೆಂಬ ಹೆದರಿಕೆಯಿಂದ ಆಲಮಟ್ಟಿಗೆ ಹೋಗುವುದನ್ನೇ ಬಿಟ್ಟಿವು ಎಂದು ಊರಿನ ಗಣ್ಯ ವ್ಯಕ್ತಿಗಳಾದ ಶ್ರೀ ಹಣಮಂತಗೌಡರು ಹೇಳುತ್ತಾರೆ.

ತಮ್ಮ ಊರಿನ ಪರಿಸ್ಥಿತಿಯ ಕುರಿತು ಗೌಡರು ಬಹು ಸ್ವಾರಸ್ಯವಾಗಿ ಹೇಳುತ್ತಾರೆ. ಈ ತಿಂಗಳೊಪ್ಪತ್ತಿನ ಹಿಂದಿನವರೆಗೂ ತಮ್ಮ ಊರು ಇಷ್ಟು ಬೇಗ ಮುಳುಗುತ್ತದೆ ಎಂದು ಆನಿಸಿರಲೇ ಇಲ್ಲವಂತೆ. ಯಾಕೆಂದರೆ ಮುಳುಗುವುದಕ್ಕಿಂತ ಮೊದಲು ಸರಕಾರದವರು ಇಲ್ಲಿಗೆ ಬಂದು ಹೊಲಗಳ-ಮನೆಗಳ ಅಳತೆಯನ್ನು ಮಾಡಿ, ಪರಿಹಾರವನ್ನು ಕೊಟ್ಟು ಪುನರ್ವಸತಿ ಕೇಂದ್ರದಲ್ಲಿ ವ್ಯವಸ್ಥೆ ಮಾಡಿ ತಮ್ಮನ್ನೆಲ್ಲ ಆದರಪೂರ್ವಕವಾಗಿ ಕಳಿಸುತ್ತಾರೆಂದು ತಿಳಿದುಕೊಂಡಿದ್ದರಂತೆ. ಆದರೆ ಒಂದು ತಿಂಗಳಿನ ಹಿಂದೆ ಸರಕಾರದ ಜನ ಧಿಡೀರನೇ ಬಂದು 'ನಿಮ್ಮ ಊರು ಮುಳುಗತ್ಯತಿ. ಊರಾಗ ಆಳುದ್ದ ನೀರು ನಿಲ್ಲತ್ಯೆತಿ, ನೀವು ಊರ ಬಡಬೇಕಾಗತ್ಯೆತಿ' ಎಂದು ಹೇಳಿದರಂತೆ. ಆಗ ಊರವರಿಗೆಲ್ಲ ವಿದ್ಯುತ್ ಸಂಚಾರವಾದಂತಾಯಿತು.

ಹೊಳೆ ಬರುವುದು, ಅವರಿಗೆ ಹೊಸದಲ್ಲ. ನೆರೆ ಬಂದಾಗ ನಾಲ್ಕೆಂಟು ದಿನ ಪರ ಊರುಗಳ ಸಂಪರ್ಕವನ್ನೇ ಕಡಿದುಕೊಂಡ ದೃಷ್ಟಾಂತಗಳೂ ಉಂಟು. ಆದರೆ ಮತ್ತೆ ಹೊಳೆ ಇಳಿದ ಮೇಲೆ ನಾಲ್ಕೆಂಟು ದಿನ ಒಂದೆರಡು ವಾರಗಳಲ್ಲಿ ಎಂದಿನ ಜನಜೀವನ ಸಾಗುತ್ತಿತ್ತು. ಆದರೆ ಈ ಸಲ ಹಾಗಲ್ಲ. ಊರಲ್ಲಿಯೇ ನೀರು ಬರುತ್ತದೆ. ನಾಲ್ಕು ದಿನ ಏಕೆ ನಾಲ್ಕೆಂಟು ಗಂಟೆಗಳಷ್ಟು ಕಾಲ ಈ ಹಳೆಯ ಮನೆಗಳು ನೀರಲ್ಲಿ ನಿಂತರೆ ಸಾಕು ನೆನೆದು ಬಿದ್ದುಬಿಡುತ್ತವೆ. ತಿರುಗಿ ಅಲ್ಲಿ ಇರಲು ಸಾಧ್ಯವೇ ಇಲ್ಲ. ಇಂಥ ಪರಿಸ್ಥಿತಿಯನ್ನು ಎದುರಿಸಲು ಸರಕಾರ ಈ ಮೊದಲೇ ಏಕೆ ಯೋಚಿಸಲಿಲ್ಲ. ಇಲ್ಲಿಯ ಮನೆಗಳ ಭೂಮಿಯ ಅಳತೆಯ ಮೇಲೆ ಬೆಲೆಯನ್ನು ಏಕೆ ಕಟ್ಟಲಿಲ್ಲ? ಈಗ ಒಂದೇ ಒಂದು ದಿನದಲ್ಲಿ ಇಡೀ ಹಳ್ಳಿ ನಿರ್ನಾಮವಾಗುವ ಸಂಭವವಿದೆ. ಹಾಗೇನಾದರೂ ಆದರೆ ಇಲ್ಲಿಯ ಮನೆಗಳ ಬೆಲೆಯನ್ನು ಹೇಗೆ ಕಟ್ಟಲಾದೀತು ಎಂದು ಯಾರಾದರೂ ವಿಚಾರಿಸಿದರೆ? ಇಲ್ಲ, ಈ ಪ್ರಶ್ನೆಯನ್ನು ಎತ್ತಿದರೆ ಐ.ಎ.ಎಸ್. ಅಧಿಕಾರಿಗಳು ಕಾರಿನಲ್ಲಿ ಕುಳಿತುಕೊಂಡು ಈ ಎಲ್ಲ ಮನೆಗಳ ವಿಡಿಯೋ ಚಿತ್ರೀಕರಣ ಮಾಡೋಣ ಎಂದರಂತೆ! ವಿಡಿಯೋ ಚಿತ್ರದಲ್ಲಿ ಮನೆಗೆ ಉಪಯೋಗಿಸಿದ ಕಲ್ಲು, ಕಟ್ಟಿಗೆ-ಕಬ್ಬಿಣಗಳ ಅಳತೆ ಸಿಗುತ್ತದೆ! ಸಾಗವಾನಿಯೋ, ಬೇವಿನ ಜಾಲಿಯ ಕಟ್ಟಿಗೆ ಗೊತ್ತಾಗುತ್ತವ ಅಲ್ಲವ? ಅಲ್ಲ, ಈ ಜನ ಇಪ್ಪತ್ತು ವರುಷಗಳಿಂದ ಏನು ಮಾಡಿದರು?

(೯ನೇ ಪುಟಕ್ಕೆ)

ಕೃಷ್ಣಾ ಮೇಲ್ದಂಡೆ ಯೋಜನೆ ಶನಿ ೫ 30-9-95

'ಅದ್ವಾನ'ಗಳ ಮುಗಿಯದ ಕಥೆ

'ಕೃಷ್ಣೆಯ ಕೂಗ'ನ್ನು ಕೇಳಿಸುತ್ತಿರುವ ವಿಧಾನ ಮಂಡಲದ ವಿರೋಧ ಪಕ್ಷದ ನಾಯಕರುಗಳಾದ ಎಚ್.ಕೆ. ಪಾಟೀಲರು ಹಾಗೂ ಬಿ.ಎಸ್. ಯಡಿಯೂರಪ್ಪನವರು ಮತ್ತು ಇತರರು ಆಗೀಗ ೨,೦೦೦ ವರ್ಷಗಳ ಹೊತ್ತಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾರ್ಯ ಪೂರ್ತಿಗೊಳ್ಳಬೇಕು. ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಸಮರ್ಥರಾಗಬೇಕೆಂದು ಕೂಗುತ್ತಲೇ ಇದ್ದಾರೆ. ಆಡಳಿತ ಪಕ್ಷವು ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ 'ಮುಗಿಸುವ' ಭರವಸೆಯನ್ನು ಕೊಡುತ್ತಲೇ ಇದ್ದಾರೆ. ಆದರೆ ಇದು ನಿಜವಾಗಿಯೂ ಮುಗಿಯುತ್ತದೆಯೇ? ನಾವು ನಿಗದಿತ ಅವಧಿಯಲ್ಲಿ ಕಾರ್ಯವನ್ನು ಪೂರ್ತಿಗೊಳಿಸಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಸಮರ್ಥರಾಗುತ್ತೇವೆಯೆ? ಎಂಬ ಪ್ರಶ್ನೆಗಳಿಗೆ ಎದೆತಟ್ಟಿಕೊಂಡು ಉತ್ತರ ಹೇಳುವ ಧೈರ್ಯ ಯಾರಲ್ಲಿಯೂ ಇದ್ದಂತೆ ಕಾಣುವುದಿಲ್ಲ.

ಟೊಳ್ಳು ಆಶ್ವಾಸನೆಗಳು: ಆಳುವ ಪಕ್ಷ ಮೊದಲ್ಗೊಂಡು ಎಲ್ಲಾ ರಾಜಕೀಯ ಪಕ್ಷಗಳೂ ಸಂದರ್ಭಕ್ಕೆ ಅನುಸಾರವಾಗಿ ಹೇಳಿಕೆಗಳನ್ನು ಕೊಡುತ್ತಾರೆಯೇ ಹೊರತು ವಾಸ್ತವದಲ್ಲಿ ಈ ಯೋಜನೆಯ ಕಾರ್ಯ ವಿಳಂಬದಲ್ಲಿರುವ ಕಾರಣಗಳನ್ನು ಗುರುತಿಸುವಲ್ಲಿ ಇನ್ನೂ ಯಶಸ್ವಿಯಾಗಿಲ್ಲವೆಂದೇ ಕಾಣುತ್ತದೆ. ಅಲಮಟ್ಟಿಯ ಸುತ್ತ ಮುತ್ತ ಬಂದರೆ ಆಣೆಕಟ್ಟನ್ನು ನಿಗದಿತ ಅವಧಿಯಲ್ಲಿ ಕಟ್ಟಿ ಮುಗಿಸುವುದಾಗಿ ಹೇಳುತ್ತಾರೆ. ರಾಯಚೂರು ಜಿಲ್ಲೆಯಲ್ಲಿದ್ದರೆ ಬಲದಂಡೆ ಕಾಲುವೆಯನ್ನು ಪ್ರಾರಂಭಿಸಬೇಕು ಎಂದು ಪ್ರತಿ ಪಕ್ಷಗಳು ಹೇಳಿದರೆ ಆಡಳಿತ ಪಕ್ಷ ಇನ್ನೇನು ಇಂದೋ ನಾಳೆಯೋ ಕಾಲುವೆಯನ್ನು ಆಗೆಯಲು ಪ್ರಾರಂಭಿಸುವುದಾಗಿ ಹೇಳುತ್ತಾರೆ. ಕಲಬುರ್ಗಿಯಲ್ಲೂ ಅದೇ ತರದ, ಅಲ್ಲಿಯ ಕೆಲಸದ ಕುರಿತು ಹೇಳಿಕೆ ಕೊಡುತ್ತಾರೆ. ಮುಳುಗಡೆ ಪ್ರದೇಶಕ್ಕೆ ಬಂದರೆ ಈ ಎಲ್ಲಾ ಜನರ 'ಸ್ವರ' ಬದಲಾಗಿ ಮತ್ತೊಂದು 'ರಾಗ'ದಲ್ಲಿ ಆಲಾಪ ಕೇಳಿಬರುತ್ತದೆ. ಸ್ಥಳೀಯ ಶಾಸಕರು ಪುನರ್ವಸತಿ-ಪುನರ್ವ್ಯವಸ್ಥೆ ಕುರಿತು ಹೇಳಿದರೆ, ಅದಕ್ಕೆ ಕೈಕೊಂಡ ಯೋಜನೆಗಳ ಯಾದಿಯನ್ನೇ ಆಡಳಿತ ಪಕ್ಷ ತೋರಿಸುತ್ತದೆ. ಪ್ರತಿಪಕ್ಷಗಳು ಅದು ಸಾಲದು-ಇನ್ನಷ್ಟು ಬೇಕು ಎನ್ನುತ್ತವೆ. ಆದರೆ ಮೊತ್ತದಲ್ಲಿ ಈ ಎಲ್ಲ ಕಾರ್ಯಗಳ ಪ್ರತಿಫಲ ಒಂದು ದೊಡ್ಡ ಸೊನ್ನೆ.

ಮಾತೆತ್ತಿದರೆ ನೂರು-ಸಾವಿರ ಕೋಟಿಗಳಲ್ಲಿ ಮಾತನಾಡುವ ಮುಖ್ಯಮಂತ್ರಿಗಳಿಗೆ ಕೇವಲ ದುಡ್ಡಿನಿಂದಲೇ ಎಲ್ಲವೂ ಆಗುತ್ತದೆ ಎಂಬ ಭ್ರಮೆ ಇದ್ದರೆ ಅದು ತಪ್ಪು. ದುಡ್ಡು ಬೇಕು, ನಿಜ. ಆ ನೂರು ಸಾವಿರಕೋಟಿ ರೂಪಾಯಿಗಳಲ್ಲಿ ಒಂದು ದುಡ್ಡನ್ನು ಈವರೆಗೆ ಕೊಟ್ಟಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಒಂದು ವೇಳೆ ದುಡ್ಡನ್ನು ಇಂದೋ-ನಾಳೆಯೋ ಕೊಟ್ಟಾರು ಎಂಬ ಭರವಸೆಯನ್ನು ಇಟ್ಟುಕೊಂಡರೂ ನಿಗದಿತ ಅವಧಿಯೊಳಗೆ ಕಾರ್ಯಪೂರ್ತಿಯಾಗುವ ಯೋಜನೆಯನ್ನು ಸಂಬಂಧಪಟ್ಟ ಆಡಳಿತ ಯಂತ್ರ ತಯಾರಿಸಿದೆಯೆ? ತಯಾರಿಸಿದ್ದರೂ ಅದಕ್ಕೆ ಬೇಕಾಗುವ 'ಮಾನವ ಶಕ್ತಿ'ಯ ಅನುಕೂಲತೆ ಇದೆಯೆ? ಕಾಗದಗಳಲ್ಲಿ ಅಷ್ಟು ಮಾನವ ಶಕ್ತಿಯನ್ನು ರೂಪಿಸಿರಬಹುದಾದರೂ ವಾಸ್ತವದಲ್ಲಿ ಅದು ದೊರೆಯುವ ಸಾಧ್ಯತೆಗಳಿವೆಯೆ? ಎಂಬ ಹಲವಾರು ಪ್ರಶ್ನೆಗಳಿಗೆ ಉತ್ತರಗಳು ಸುಲಭವಾಗಿ ಸಿಗುವುದಿಲ್ಲ.

ಚಕ್ರವ್ಯೂಹದಲ್ಲಿ ಸಿಕ್ಕಿರುವ ಯೋಜನೆ: ಮೂರು ದಶಕಗಳಿಂದ ಕುಂಟುತ್ತಾ ಸಾಗಿ ಬರುತ್ತಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾರ್ಯ ಇಂದು ಒಂದು 'ಚಕ್ರವ್ಯೂಹ'ದಲ್ಲಿ ಸಿಲುಕಿದೆ ಎಂದು ಉನ್ನತ ಅಧಿಕಾರಿಗಳೇ ಹೇಳುತ್ತಾರೆ. ಎಲ್ಲರಿಗೂ ಆ ವ್ಯೂಹದಲ್ಲಿ ಪ್ರವೇಶಿಸುವುದು ಮಾತ್ರ ಗೊತ್ತು. ಅದನ್ನು ಭೇದಿಸಿ

ಕೃಷ್ಣ ಕೊಲ್ಹಾರಕುಲಕರ್ಣಿ

ಹೊರಬರುವ ಧೈರ್ಯವನ್ನು ತೋರಿಸುವ ಯೋಧರು ಇಲ್ಲವೆಂದೇ ಹೇಳಲಾಗುತ್ತದೆ.

ಇಂದು ಚಕ್ರವ್ಯೂಹವಾಗಿ ಪರಿಣಮಿಸಿದ ಕೃಷ್ಣಾ ಮೇಲ್ದಂಡೆ ಯೋಜನೆ ಒಂದು 'ವಿಷ ಚಕ್ರ'ವಾಗಿಯೂ ಪರಿಣಮಿಸಿದೆ ಎಂದು ಮತ್ತೊಬ್ಬ ಉನ್ನತ ಅಧಿಕಾರಿಗಳು ಹೇಳುತ್ತಾರೆ. ಅದನ್ನು ಅರ್ಥ ಮಾಡಿಕೊಳ್ಳುವುದೇ ಕಠಿಣವಾಗಿದೆ ಎನ್ನುತ್ತಾರೆ. ಬಡ ಮುದುಕಿಯೊಬ್ಬಳು ತನ್ನ ಹರಿದ ಸೀರೆಯನ್ನು ಹೊಲಿದುಕೊಳ್ಳುತ್ತಿರುವಾಗಲೇ ಇನ್ನೊಂದೆಡೆ ಹರಿದಿರುತ್ತದೆ. ಅದನ್ನು ಹೊಲಿದುಕೊಳ್ಳಬೇಕೆಂಬಷ್ಟರಲ್ಲಿ ಮತ್ತೊಂದು ಕಡೆ ಹೀಗೆ ಜೀರ್ಣವಾದ ಆ ವಸ್ತ್ರವನ್ನು ಉಡಲು ಹೇಗೆ ಪ್ರಯತ್ನಿಸಬೇಕೆಂಬುದೇ ಒಂದು ಸಮಸ್ಯೆಯಾಗಿದೆ.

ಯೋಜನೆಯನ್ನು ಪೂರ್ತಿಗೊಳಿಸಲು ಇದ್ದ ಅವಧಿ ಇನ್ನು ಕೇವಲ ನಾಲ್ಕು ವರ್ಷಗಳು ಮಾತ್ರ. ಹೋಗಲಿ ಅದನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬಹುದೆಂದು ಇಟ್ಟುಕೊಂಡರೂ ಈ ಅವಧಿಗಳಲ್ಲಿ ಯೋಜನೆಯ ಬಹುಮುಖದ ಕೆಲಸಗಳು ಒಂದೇ ಕಾಲದಲ್ಲಿ ನಡೆಯಬೇಕಾಗಿದೆ ಎಂಬುದು ಗಮನಾರ್ಹವಾಗಿದೆ. ಆಣೆಕಟ್ಟು ೫೦೯.೫ ಮೀಟರ್ ಎತ್ತರ ಕಟ್ಟುತ್ತಿರುವಂತೆ ಆದರಲ್ಲಿ ನಿಲ್ಲುವ ನೀರಿನಲ್ಲಿ ಮುಳುಗಡೆಯಾಗುವ ಹಳ್ಳಿಗಳು ಸ್ಥಳಾಂತರಗೊಳ್ಳಬೇಕು. ನಿಂತ ನೀರಿನ ಉಪಯೋಗ ಪಡೆಯಲು ಕಾಲುವೆಗಳಾಗಬೇಕು. ಈ ಮೂರೂ ಕೆಲಸಗಳಲ್ಲಿ ಕಾಲುವೆಗಳನ್ನು ನಿಧಾನಿಸಬಹುದಾದರೂ ಉಳಿದ ಎರಡು ಕೆಲಸಗಳು ಸಮ-ಸಮನಾಗಿಯೇ ನಡೆಯಬೇಕಾದುದು ಅಗತ್ಯವಾಗಿದೆ.

೧೯೯೬ರ ಜೂನ್ ವೇಳೆಗೆ ಅಂದರೆ ಇನ್ನು ೮ ತಿಂಗಳುಗಳಲ್ಲಿ ಆಣೆಕಟ್ಟನ್ನು ೫೧೯.೫ ಮೀಟರಿನಷ್ಟು ಎತ್ತರ ಕಟ್ಟಿ ಬಾಗಿಲುಗಳನ್ನು ಕೂಡಿಸುವ ಕೆಲಸವನ್ನು ಒಬ್ಬ ಗುತ್ತಿಗೆದಾರರಿಗೆ ಕೊಡಲಾಗಿದೆ. ಅವರು ಆ ಅವಧಿಯಲ್ಲಿ ಅಥವಾ ತುಸು ಹೆಚ್ಚು-ಕಡಿಮೆ ಅವಧಿಯಲ್ಲಿ ತಮ್ಮ ಕೆಲಸವನ್ನು ಪೂರ್ತಿಗೊಳಿಸುತ್ತಾರೆ. ಯಾಕೆಂದರೆ ಅದು ಗುತ್ತಿಗೆದಾರರ ಕೆಲಸ. ತಮ್ಮ ಕೆಲಸ ಎಷ್ಟು ಬೇಗ ಪೂರ್ತಿಯಾಗುತ್ತದೆಯೋ ಅಷ್ಟು ಬೇಗ ಅವರಿಗೆ ಹಣ ದೊರೆಯುವುದಲ್ಲದೆ ಮತ್ತೆ ಮುಂದಿನ ತಮ್ಮ ಬೇರೆ ಗುತ್ತಿಗೆ ಕೆಲಸಗಳತ್ತ ಅವರ ದೃಷ್ಟಿ ಇರುತ್ತದೆ. ಆದರೆ ಈ ೫೧೯.೫ ಮೀಟರ್ ಆಣೆಕಟ್ಟು ಸಿದ್ಧವಾಗುವಷ್ಟರಲ್ಲಿ ಹಿಂದಿನ ಸುಮಾರು ೯೦ ಹಳ್ಳಿಗಳನ್ನು ಈ ೮ ತಿಂಗಳ ಅವಧಿಯಲ್ಲಿ ಸ್ಥಳಾಂತರಿಸುವ ಅಗಾಧವಾದ ಕೆಲಸ ಸರಕಾರಿ ಆಡಳಿತ ಯಂತ್ರಕ್ಕಿದೆ ಎಂಬುದನ್ನು ಹಗುರವಾಗಿ ಕಾಣಲು ಸಾಧ್ಯವೇ ಇಲ್ಲ.

ಸ್ಥಳಾಂತರ, ಪುನರ್ವಸತಿ: ಸರ್ಕಾರಿ ಕಡತಗಳ ಪ್ರಕಾರ ೧೯೬೪ರಲ್ಲಿ ೬ ಹಳ್ಳಿಗಳನ್ನು, ೧೯೬೫ರಲ್ಲಿ ೨೧ ಹಳ್ಳಿಗಳನ್ನು ಹಾಗೂ ೧೯೯೬ರ ಮಳಿಗಾಲದ ಹೊತ್ತಿಗೆ ೬೮ ಹಳ್ಳಿಗಳನ್ನು ಅಂದರೆ ಒಟ್ಟು ೯೫ ಹಳ್ಳಿಗಳಲ್ಲಿಯ ಸುಮಾರು ಎರಡು ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಕಳಿಸಬೇಕು. ಈ ೯೫ ಹಳ್ಳಿಗಳನ್ನು ೭೧ ಪುನರ್ವಸತಿ ಕೇಂದ್ರಗಳಲ್ಲಿ ಸ್ಥಳಾಂತರಿಸುವುದೆಂದು ಗುರುತಿಸಲಾಗಿದೆ. ಈ ೭೧ ಪುನರ್ವಸತಿ ಕೇಂದ್ರಗಳಲ್ಲಿ ಇಂದಿನ ಮಿತಿಗೆ ಕೇವಲ ೩೦ ಪುನರ್ವಸತಿ ಕೇಂದ್ರಗಳು ಸಿದ್ಧವಾಗಿವೆ. ಆಲ್ಲಿಯ ವ್ಯವಸ್ಥೆಯನ್ನು ಹಳೆಯ ಸರಕಾರಿ ನಿಯಮಗಳ ಪ್ರಕಾರ ಮಾಡಿದ್ದರಿಂದ ಅವು ಕೂಡ ನಿರುಪಯುಕ್ತವಾಗಿವೆ ಎಂದರೆ ಎಲ್ಲಾ ೭೧ ಪುನರ್ವಸತಿ ಕೇಂದ್ರಗಳೂ ಇನ್ನು ಕೇವಲ ೬ರಿಂದ ೮ ತಿಂಗಳುಗಳಲ್ಲಿ ಸಿದ್ಧವಾಗಬೇಕಿವೆ. ಆದೊಂದು ದೊಡ್ಡ ಕತೆ.

ಪ್ರಪಂಚದಲ್ಲಿಯೇ ಅತಿ ದೊಡ್ಡ ಪುನರ್ವಸತಿ ವ್ಯವಸ್ಥೆಯನ್ನು ಹೊಂದಿದ ಅಗ್ಗಳಿಕೆ ಈ ಆಣೆಕಟ್ಟಿಗಿದೆ. ಇಷ್ಟು ದೊಡ್ಡ ಪ್ರಮಾಣದ ಹಳ್ಳಿಗಳು ಹಾಗೂ ಜನ ವಸತಿಯನ್ನು ಸ್ಥಳಾಂತರಿಸುವ ಸಮಸ್ಯೆ ಈ ಹಿಂದಿನ ಯಾವ ಆಣೆಕಟ್ಟುಗಳ ನಿರ್ಮಾಣದಲ್ಲಿ ಬಂದಿರಲಿಲ್ಲವೆಂದೂ ಹೇಳಲಾಗುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ

21-2-97

ಹಳ್ಳಿಗಳ ಕಲ್ಪನೆ ಇಲ್ಲದ ಪುನರ್ವಸತಿ ಕೇಂದ್ರ

(ವಿಶೇಷ ಸುದ್ದಿಗಾರರಿಂದ)

ವಿಜಾಪುರ: ಕಳೆದ ವರ್ಷದ ಮಳೆಗಾಲದಲ್ಲಿ ಕಾಲುಭಾಗ ಕೃಷ್ಣೆಯಲ್ಲಿ ಮುಳುಗಿ ಮೇಲೆದ್ದ ಸಿದ್ಧನಾಥ ಹಳ್ಳಿ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬರುತ್ತದೆ. 270 ಮನೆಗಳಲ್ಲಿಯ ಸುಮಾರು ಎರಡೂವರೆ ಸಾವಿರ ಜನರಲ್ಲಿ ಮುಕ್ಕಾಲುಭಾಗ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿದ್ದು, ಹಳೆಯ ಹಳ್ಳಿಯಿಂದ ಉತ್ತರ ದಿಕ್ಕಿಗೆ ಸುಮಾರು 6 ಕಿಲೋ ಮೀಟರು ಅಂತರದಲ್ಲಿರುವ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾಂತರಗೊಂಡ ಜನರು ಹೊಸ ಜಗತ್ತಿಗೆ ಹೊಂದಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ.

ಮುಳುಗಡೆಯ ಸ್ಥಳದಲ್ಲಿಯ ಮನೆಗಳನ್ನು ಕೆಡವಿ ಸರಕಾರ ಕೊಟ್ಟ ಪುನರ್ವಸತಿ ಕೇಂದ್ರದಲ್ಲಿ ಹೊಸ ಮನೆಗಳನ್ನು ಕಟ್ಟುತ್ತಿದ್ದಾರೆ. ದನ ಕರುಗಳನ್ನು ತರಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ಪ್ರಮುಖ ಕಾರಣ ಪುನರ್ವಸತಿ ಕೇಂದ್ರದಲ್ಲಿ ನೀರಿನ ವ್ಯವಸ್ಥೆಯಿಲ್ಲ. ಪುನರ್ವಸತಿ ಕೇಂದ್ರದಲ್ಲಿ ಕೊಳವೆ ಬಾವಿಗಳಿಂದ ಪೂರೈಸುವ ನೀರು ಮನುಷ್ಯರಿಗೇ ಸಾಕಾಗುವುದಿಲ್ಲ, ಇನ್ನು ದನಕರುಗಳಿಗೆ ಹೇಗೆ ಪೂರೈಸುವುದು ಎಂದು ಹಳ್ಳಿಯ ಸಮಾಜ ಸೇವಕ ಯಲ್ಲಪ್ಪ ಕೊಲಮೇಲಿ ಕೇಳುತ್ತಾರೆ.

ಅದಕ್ಕಿಂತ ಮಿಗಿಲಾಗಿ ಹಳೆಯ ಊರಲ್ಲಿ ಪ್ರತಿಯೊಂದು ಗ್ರಾಮಕ್ಕೆ ಗೋಮಾಳವೆಂದು ಸ್ಥಳವಿರುತ್ತಿತ್ತು. ಸಿದ್ಧನಾಥದಲ್ಲಿ 41 ಎಕರೆ ಭೂಮಿ ಗೈರಾಣವೆಂದೇ ಪರಿಗಣಿಸಲಾಗಿತ್ತು. ಇಲ್ಲಿ ಹೊಸ ಕೇಂದ್ರದಲ್ಲಿ ಗೋಮಾಳವೇ ಇಲ್ಲವೆನ್ನುತ್ತಾರೆ ಎಸ್.ಜಿ. ಅಂಗಡಿ ಅವರು.

ಗ್ರಾಮದ ಜನರಲ್ಲಿಯ ಯುವಕ ಮಂಡಳಿಯ ಬಸಪ್ಪ ಮಾದರ, ಬಸಪ್ಪ ಹಡಪದ ಮೊದಲಾದವರು ಸರಕಾರದ ಅಧಿಕಾರಿಗಳಿಗೆ 'ನಮ್ಮ ಹಳ್ಳಿಗೋಳು ಅಂದರ ಹ್ಯಾಂಗ ಇರ್ತಾವ ಅಂಬೋದೇ ಗೊತ್ತಿಲ್ಲರೀ' ಎನ್ನುತ್ತಾರೆ. ಬೆಂಗಳೂರನ್ನಾಗೋ ಮತ್ತೆಲ್ಲೋ ಕೂತು ನಕಾಶೆದಾಗ ನೋಡಿ ಹಳ್ಳಿಗುರ್ತಾ ಹಾಕಿದರ ಹ್ಯಾಂಗ್ರಿ [illegible] ತ್ತಾರೆ.

ಚಿಕ್ಕಡಿಗಳ ಓಡಾಟಕ್ಕೆ ರಸ್ತೆಗಳಿಲ್ಲ

ಸರಕಾರ ಪುನರ್ವಸತಿ ಕೇಂದ್ರವನ್ನು ಗುರುತಿಸಿ ಪ್ಲಾಟುಗಳನ್ನು ಹಂಚಿತು. ಕೇಂದ್ರದ ಕೊನೆಯ ಅಂಚಿನವರೆಗೂ ಪ್ಲಾಟುಗಳನ್ನು ಗುರುತಿಸಿದ್ದರಿಂದ ಊರಲ್ಲಿ ತಿಪ್ಪೆ ಗುಂಡಿಯನ್ನಾಗಲೀ, ಊರ ಸುತ್ತಲಿನಿಂದ ಚಿಕ್ಕಡಿಗಳನ್ನು ತರಲು ದಾರಿಯೇ ಇಲ್ಲವೆಂಬುದನ್ನು ಕಂಡಾಗ ಊರವರ ಮಾತಿನಲ್ಲಿ ತಥ್ಯವಿದೆ ಎನಿಸುತ್ತದೆ. ಕೇಂದ್ರದ ಮನೆಗಳ ಅಂಚಿನಲ್ಲಿ ಬೇರೆ ಊರುಗಳ ಭೂಮಿ ಬರುವುದರಿಂದ ಅವರು ಈ ಜನರನ್ನು ಒಪ್ಪಿಕೊಳ್ಳುವುದಿಲ್ಲವೆನ್ನುತ್ತಾರೆ ಸಿದ್ಧನಾಥದ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾಂತರಗೊಂಡ ಜನರು. ತಮ್ಮ ಹೆಣ್ಣುಮಕ್ಕಳಿಗೆ ಬಹಿರ್ದೆಶೆಗೆ ಹೋಗಲು ಕೂಡ ಅಲ್ಲಿಯ ಜಮೀನಿನ ಜನ ಅವಕಾಶ ಕೊಡದೆ ಜಗಳಗಳಾದ ಸಂದರ್ಭಗಳೂ ಸಾಕಷ್ಟಿವೆ ಎನ್ನುತ್ತಾರೆ. ಅಂತಲೇ ಒಂದೋ ಹತ್ತಿರದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಒಂದೆರಡು ಎಕರೆಯಷ್ಟು ಸ್ಥಳದಲ್ಲಿ ಜನರಿಗೆ ಸಾಧ್ಯವಾದರೆ ಪಾಯಖಾನೆಗಳನ್ನು ಕಟ್ಟಿಸಬೇಕು ಇಲ್ಲವೆ ಹಾಗೆ ಬಿಟ್ಟರೂ ಗಿಡಗಂಟಿಗಳು ಬೆಳೆದು ಮರ್ಯಾದೆಯಿಂದ ತಮ್ಮ ಜನ ಪ್ರಾತಃ ವಿಧಿಗಳನ್ನು ಪೂರೈಸಬಹುದೆಂದು ಸೊಸೈಟಿ ಚೇರ್ಮನ್ನರಾದ ಜೆ.ಎಸ್. ಪಾಟೀಲರು ಹೇಳುತ್ತಾರೆ.

ಸ್ಮಶಾನ ಮತ್ತೊಂದು ಸಮಸ್ಯೆ

ಸಿದ್ಧನಾಥ ಪುನರ್ವಸತಿ ಕೇಂದ್ರದ ಇನ್ನೊಂದು ದೊಡ್ಡ ಸಮಸ್ಯೆಯೆಂದರೆ ಕೇಂದ್ರದಿಂದ ಮೂರು ಕಿಲೋಮೀಟರು ಅಂತರದಲ್ಲಿ ಗುರುತಿಸಿದ ಸ್ಮಶಾನ ಕಲ್ಲುಭೂಮಿ. ಒಂದು ಶವವನ್ನು ಹೂಳಬೇಕಾದರೆ ಅಲ್ಲಿ ಗುರುತಿಸಿದ ಭೂಮಿಯನ್ನೇ ಸ್ಮಶಾನವನ್ನಾಗಿ ಬಳಸಲು ಆಗ್ರಹಪಡಿಸುತ್ತಿದ್ದುದರಿಂದ ಅಧಿಕಾರಿಗಳು-ನಾಗರಿಕರ ಮಧ್ಯ ಘರ್ಷಣೆ ಪ್ರಾರಂಭವಾಗಿದೆ. ತೀರ ಇತ್ತೀಚೆಗೆ ಮಿದು ಭೂಮಿಯಲ್ಲಿ ಗುಳಿತೋಡಲು ಸಾಧ್ಯವೇ ಇಲ್ಲವೆಂಬಷ್ಟು ಕಲ್ಲು ಬಂಡೆಗಳವೆ. ಅಕ್ಷರಶಃ ಮದ್ದು ಉಪಯೋಗಿಸಿ ಭೂಮಿಯನ್ನು ಸ್ಫೋಟಗೊಳಿಸಬೇಕಾಗುತ್ತದೆಂದು ಹೇಳುತ್ತಾರೆ. ಈ ಸಮಸ್ಯೆಯನ್ನು ಕಳೆದ ಒಂದು ವರ್ಷದಿಂದ ಪುನರ್ವಸತಿ ಅಧಿಕಾರಿಗಳಿಗೆ ಹೇಳುತ್ತಿದ್ದರೂ ಯಾರೂ ಕಿವಿಗೆ ಹಾಕಿಕೊಳ್ಳುವುದಿಲ್ಲವಂತೆ. ಹತ್ತಿರದಲ್ಲಿಯ ಮಿದುಭೂಮಿಯೊಂದನ್ನು ಗುರುತಿಸಿ ಅದನ್ನು ಸ್ವಾಧೀನಪಡಿಸಿಕೊಳ್ಳಲು ಆಗ್ರಹಪಡಿಸುತ್ತಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಪ್ರತಿಯಾಗಿ ತಾವು ಶವವೊಂದನ್ನು ಹೂಳಿ ಬೇರೆ ಊರಿನ ಆ ಭೂಮಾಲೀಕನ ಜೊತೆಗೆ ವಾದವಿವಾದವಾಗಿ ಶವವನ್ನು ಆಲಮಟ್ಟಿಯ ಪುನರ್ವಸತಿ ಅಧಿಕಾರಿಗಳ ಆಫೀಸಿಗೇ ತೆಗೆದುಕೊಂಡು ಹೋಗುವ ವರೆಗೆ ಪ್ರಸಂಗ ಬಂದಿತ್ತೆಂದು ಊರವರು ಹೇಳುತ್ತಾರೆ. ಅದು ಹೇಗೋ ತಪ್ಪಿದರೂ ಮುಂಬರುವ ದಿನಗಳಲ್ಲಿ ಅದು ನಿಜವಾಗುತ್ತದೆಂದು ಹೇಳುತ್ತಾರೆ.

ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿಗಾಗಿ ನಿರ್ಮಿಸಿದ ಕೇಂದ್ರಗಳಲ್ಲಿ ಯಾವ ನಾಗರಿಕ ಸೌಲಭ್ಯವೂ ಇಲ್ಲ, ಹಳ್ಳಿಗಳ ಕಲ್ಪನೆಯೇ ಇಲ್ಲದ ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತು ನಕಾಶೆ ನೋಡಿ ಗುರ್ತುಹಾಕಿ ನಿರ್ಮಿಸುವ ಗ್ರಾಮಗಳ ಬಗ್ಗೆ ಜನರಲ್ಲಿ ಅಸಮಾಧಾನವಿದೆ.

ವ್ಯವಸಾಯಕ್ಕೆ ಭೂಮಿಯಿಲ್ಲ

ಇವೆಲ್ಲ ಸಮಸ್ಯೆಗಳೊಂದಿಗೆ ಊರಿನ ಪ್ರತಿ ಶತ 60 ರಷ್ಟು ಸಾಗುವಳಿ ಭೂಮಿ ನೀರಲ್ಲಿ ಮುಳುಗುವುದರಿಂದ ಇಲ್ಲಿಯ ಬಹುಪಾಲು ಜನರು ಕೃಷಿಯಿಂದ ವಂಚಿತರಾಗಬೇಕು. ಕೃಷಿ ಕಾರ್ಯ ನಡೆಯದಿದ್ದಾಗ ಅದಕ್ಕೆ ಸಂಬಂಧಿಸಿದ ಕಂಬಾರ, ಕುಂಬಾರ ಹಾಗೂ ಬಡಿಗತನದ ಕೆಲಸಗಳೂ ಕಡಿಮೆಯಾಗಿ ಇಡೀ ಪುನರ್ವಸತಿ ಕೇಂದ್ರದ ಜನರಲ್ಲಿ ಒಂದು ರೀತಿಯ ನಿರಾಶೆಯ ಛಾಯೆ ಕಾಣುತ್ತಿದೆ. ಮುಳುಗುವ ಭೂಮಿಗೆ, ಮನೆಗಳಿಗೆ ಸರಕಾರ ಪರಿಹಾರವನ್ನೇನೋ ಕೊಟ್ಟಿದೆ. ಆದರೆ ಆ ಪರಿಹಾರದಿಂದ ಎಷ್ಟುದಿನ ಜೀವಿಸಲು ಸಾಧ್ಯ ಎಂಬ ಪ್ರಶ್ನೆ ಅವರೆದುರಿಗೆ ಬಹುದೊಡ್ಡದಾಗಿದೆ. ಫಲವತ್ತಾದ ಹೊಳೆದಂಡೆಯ ಭೂಮಿಯೇ ಮುಳುಗುವುದರಿಂದ ಅವರಿಗೆ ದಿಕ್ಕು ಕಾಣದಾಗಿದೆ ಎನ್ನುತ್ತಾರೆ. ಉಳಿದ ಭೂಮಿ ಖುಷ್ಕಿ ಜಮೀನಾದ್ದರಿಂದ ಅಲ್ಲಿ ಬೆಳೆಯೂ ನಿರೀಕ್ಷಿಸಿದಷ್ಟು ಬರುವುದಿಲ್ಲ. ಪ್ರತಿಯಾಗಿ ನೀರಾವರಿ ಜಮೀನು ಮುಳುಗುವದರಿಂದ ಬಹುಪಾಲು ಜನರಿಗೆ ಉದ್ಯೋಗ ಇಲ್ಲ. ದನಕರುಗಳನ್ನು ಸಾಕಲೂ ಸಾಧ್ಯವಾಗದೆ ಮಾರಬೇಕಾದ ಪ್ರಸಂಗ ಬಂದಿದೆಯೆಂದು ಹೇಳುವಾಗ ಅವರ ಕಂಠಗಳು ಉಬ್ಬಿ ಬರುತ್ತವೆ. ಒಂದೆಡೆ ಅತಿ ಪ್ರಾಚೀನವಾದ ಬೌದ್ಧಕಾಲದ ಹಳ್ಳಿ ಸಿದ್ಧನಾಥ ಅಲ್ಲಿಯ ಸಿದ್ಧನಾಮೇಶ್ವರ-ಕಲ್ಮೇಶ್ವರರನ್ನೂ ಪುನರ್ವಸತಿ ಕೇಂದ್ರಕ್ಕೆ ತರಲಾರದೆ ಅವುಗಳನ್ನು ಅಲ್ಲಿಯೇ ಬಿಟ್ಟುಬಂದ ಭಾವನಾತ್ಮಕ ಸಂಬಂಧವನ್ನು ಮರೆಯದ ಜನರು ಈಗಲೂ 6 ಕಿ.ಮೀ. ದೂರದ ಅಂತರವನ್ನು ಕ್ರಮಿಸಿ ಪ್ರತಿದಿನ ದರ್ಶನಕ್ಕೆ ಹೋಗುತ್ತಾರೆ. ಇನ್ನೊಂದೆಡೆ ಭವಿಷ್ಯದ ಕುರಿತು ನಿರ್ದಿಷ್ಟವಾದ ರೂಪುರೇಷೆಗಳನ್ನು ರೂಪಿಸಲು ಅಸಮರ್ಥರಾಗಿದ್ದಾರೆ.

ಕೆಲವು ಯುವಕರು ಸೇರಿ ಕೋಳಿಫಾರ್ಮನ್ನು ಪ್ರಾರಂಭಿಸಲು ಯೋಜನೆಯೊಂದನ್ನು ಹಾಕಿದರೆ ಅದಕ್ಕೆ ಸರಕಾರ ಒಂದಿಷ್ಟೂ ಗಮನ ಹರಿಸಲಿಲ್ಲವೆಂದು ಕೊಲಮೇಲಿ ಹೇಳುತ್ತಾರೆ. ದುಡ್ಡುಬೇಡ ಭೂಮಿ, ನೀರು, ವಿದ್ಯುತ್ತಿನ ಸವಲತ್ತನ್ನು ಮಾಡಿಕೊಡಿರೆಂದರೂ ಸರಕಾರ ಕೇಳಲಿಲ್ಲವಂತೆ. ಕೊನೆಗೆ ಜನರೇ ಇದೀಗ ಭೂಮಿಯನ್ನು ಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ. ಅದರಿಂದಾಗಿ 35-40 ಜನರ ಉದ್ಯೋಗವನ್ನು ನಿರೀಕ್ಷಿಸಿದ್ದಾರೆ. ಇಲ್ಲಿಯ ಜನ ಅದರ ಫಲಿತಾಂಶವನ್ನು ಕಾದು ನೋಡಬೇಕು.

ಏನಿದ್ದರೂ ಖುಷ್ಕಿ ಭೂಮಿಯನ್ನು ಹೇಗಾದರೂ ಮಾಡಿ ನೀರಾವರಿಗೆ ಒಳಪಡಿಸಿದರೆ ಮಾತ್ರ ಇಲ್ಲಿಯ ಬಹುತೇಕ ಜನರು ಬದುಕಲು ಸಾಧ್ಯ ಇಲ್ಲವಾದಲ್ಲಿ ಸರಕಾರ ಕೊಟ್ಟ ಪರಿಹಾರ ಹಣ ಮುಗಿದ ನಂತರ ವರುಷೆರಡು ವರುಷಗಳಲ್ಲಿ ಹೊರರಾಜ್ಯಗಳಿಗೆ ಕೂಲಿಗಾಗಿ ಗುಳೆ ಹೋಗುವುದೊಂದೇ ಅವರಿಗೆ ಮಾರ್ಗ ಎಂದು ಸೇರಿದ ಎಲ್ಲರೂ ಹೇಳುವಾಗ ಅವರ ಕಣ್ಣಾಲಿಗಳು ತುಂಬಿ ಬಂದಿರುತ್ತವೆ.

ಕೋರ್ಟ್ ಕಟ್ಟೆ ಹತ್ತಿದ ಸಿದ್ಧನಾಥ ಜನರು

ಕರ್ನಾಟಕ ಸರಕಾರವು ಭೂಸ್ವಾಧೀನ ಕಾಯಿದೆಯ ಅನುಗುಣವಾಗಿ 1982ರಲ್ಲಿ ಸಿದ್ಧನಾಥದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿತು. ಅದರಂತೆ ಭೂಮಿಗಳ ಬೆಲೆಯನ್ನು ನಿಗದಿಪಡಿಸುವಾಗ 1982ರ ಹಿಂದಿನ ಮೂರುವರುಷ ಬಸವನ ಬಾಗೇವಾಡಿ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಆದ ಬೆಲೆಯನ್ನು ಹಿಡಿದು ಆದರ ಮೂರು ಪಟ್ಟು ಬೆಲೆಯನ್ನು ನೀಡಿತು. 1979-82ರಲ್ಲಿ ಒಂದು ಎಕರೆಗೆ ಒಂದು ಸಾವಿರ ಬೆಲೆ ಇದ್ದುದನ್ನು ಸರಕಾರ ಮೂರು ಸಾವಿರ ಬೆಲೆ ಕಟ್ಟಿತು. ಪುನರ್ ಪರಿಶೀಲನೆಯಲ್ಲಿ ನ್ಯಾಯಾಲಯವು ಖುಷ್ಕಿ ಜಮೀನಿಗೆ ಒಂದು ಎಕರೆಗೆ 6 ಸಾವಿರವೆಂದೂ ನೀರಾವರಿ ಜಮೀನಿಗೆ ಒಂದು ಎಕರೆಗೆ 9500 ರೂ.ಗಳೆಂದೂ ಗೊತ್ತುಪಡಿಸಿತು. ರಾಜ್ಯ ಸರ್ವೋಚ್ಚ ನ್ಯಾಯಾಲಯವು ಹೀಗೆ ಬೆಲೆಯನ್ನು ನಿಗದಿಪಡಿಸುವಾಗ ನೀರಾವರಿ ಭೂಮಿಯಲ್ಲಿ ಕೆಲವಕ್ಕೆ ಎಕರೆಗೆ 9500 ರೂ. ಎಂದು ನಿಗದಿಪಡಿಸಿದರೆ ಇನ್ನು ಕೆಲವಕ್ಕೆ ಎಕರೆಗೆ 19,500 ರೂ.ಗಳೆಂದು ನಿಗದಿಪಡಿಸಿದೆ. ಈಗ ಜನರು ವಿಕರೂಪ ಪರಿಹಾರಕ್ಕಾಗಿ ಸುಪ್ರೀಂಕೋರ್ಟಿನ ಕಟ್ಟೆಯನ್ನು ಹತ್ತಿದ್ದಾರೆ. ಈ ಮಧ್ಯೆ ಕೃ.ಮೇ. ಯೋಜನೆಯ ಎರಡನೆಯ ಹಂತದ ಕಾರ್ಯದಲ್ಲಿ ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಸರಕಾರ ಅಧಿಸೂಚನೆ ಹೊರಡಿಸುತ್ತಿದೆ. ಇದೇ ಮಾನವನ್ನು ಹಿಡಿದರೆ ಇಂದು ಸಬ್ ರಿಜಿಸ್ಟ್ರಾರರ ಕಚೇರಿಯಲ್ಲಿ ಎಕರೆಗೆ 15 ಸಾವಿರ ರೂಪಾಯಿಯಂತೆ ನೋಂದಣಿಯಾಗುತ್ತಿದ್ದು ಸ್ವಾಧೀನಪಡಿಸಿಕೊಳ್ಳುವ ಖುಷ್ಕಿ ಭೂಮಿಗೆ ಸರಕಾರ ಎಕರೆಗೆ 45 ಸಾವಿರವೆಂದು ನಿಗದಿಪಡಿಸಿದರೂ ನ್ಯಾಯಾಲಯದ ಆದೇಶದನ್ವಯ ಅದು ಎಕರೆಗೆ 90 ಸಾವಿರ ಆಗಬೇಕೆಂದು ಜನರು ಹೇಳುತ್ತಾರೆ.

ರಾಜು

'ಪೆಟ್'



ಕೃಷ್ಣಾ ಮೇಲ್ದಂಡೆ ಯೋಜನೆ

19.2.97

ದಾರಿ-ದೀಪಗಳಿಲ್ಲದ ಪುನರ್ವಸತಿ ಕೇಂದ್ರ!

(ವಿಶೇಷ ಪ್ರತಿನಿಧಿಯಿಂದ)

ಸುಮಾರು ಎರಡು ಸಾವಿರ ಜನ ಸಂಖ್ಯೆಯ-ಇನ್ನೂರಕ್ಕಿಂತ ತುಸು ಅಧಿಕ ಮನೆಗಳಿರುವ ಹಳೆರೊಳ್ಳಿ ಗ್ರಾಮ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಕೃಷ್ಣೆಯ ದಂಡೆಯ ಮೇಲಿದೆ. ಕಳೆದ ವರುಷದ ಮಳೆಗಾಲದಲ್ಲಿ ಕೃಷ್ಣೆ ಊರಿಗೆ ಬಂದು ಹೋಗಿದ್ದಾಳೆ. ಎರಡು ವರುಷಗಳ ಹಿಂದೆಯೇ ಸರಕಾರವು ಈ ಗ್ರಾಮಕ್ಕೆ ಪುನರ್ವಸತಿ ಕೇಂದ್ರವನ್ನು ಕಲ್ಪಿಸಿ ಸಿದ್ದನಾಥದ ಪುನರ್ವಸತಿ ಕೇಂದ್ರದ ಹತ್ತಿರ ಮನೆಗಳನ್ನು ಕಟ್ಟಿಕೊಂಡು ಇರಲು ಹಕ್ಕುಪತ್ರಗಳನ್ನು ವಿತರಿಸಿತು. ತಮ್ಮ ಊರು ಮುಳುಗುವುದು ಖಚಿತವೆಂದು ತಿಳಿದು ಹಳೆರೊಳ್ಳಿಯ ಗ್ರಾಮದವರು ಯಾವ ತಕರಾರೂ ಇಲ್ಲದೆ ಸರಕಾರ ತೋರಿಸಿದ ಸ್ಥಳಕ್ಕೆ ಹೋಗಹತ್ತಿದರು. ಇಂದು ಪ್ರತಿಶತ ನೂರಕ್ಕೆ ನೂರರಷ್ಟು ಜನ ಸ್ಥಳಾಂತರಗೊಂಡಿದ್ದಾರೆ. ಹೊಸ ಸ್ಥಳದಲ್ಲಿ ತಮ್ಮ ಶಕ್ತಿಯ ಅಳವಿನಲ್ಲಿ ಒಂದು ಗೂಡು ಕಟ್ಟಿಕೊಂಡು ಇರಲು ಪ್ರಯತ್ನಿಸುತ್ತಿದ್ದಾರೆ.

ಸೋಜಿಗದ ವಿಷಯವೆಂದರೆ ಎರಡು ವರುಷಗಳ ಹಿಂದೆಯೇ ಸ್ಥಳಾಂತರಗೊಂಡರೂ ಇಂದಿನವರೆಗೂ ಹಳೆರೊಳ್ಳಿ ಪುನರ್ವಸತಿ ಕೇಂದ್ರಕ್ಕೆ ವಿದ್ಯುತ್ ಸಂಪರ್ಕವಿಲ್ಲ. ಹೊಂದಿಕೊಂಡೇ ಇರುವ ಸಿದ್ದನಾಥದ ಪುನರ್ವಸತಿ ಕೇಂದ್ರಕ್ಕೆ ವಿದ್ಯುತ್ ಸಂಪರ್ಕವಿದೆ. ರಾತ್ರಿಯಾದರೆ ಸಾಕು ಹೊಸ ಊರು, ಹೊಸ ಸ್ಥಳ ಇನ್ನೂ ಕಟ್ಟಬೇಕೆಂದು ತಂದ ಕಲ್ಲು-ಮಣ್ಣು ಬಹುತೇಕ ಎಲ್ಲರ ಮನೆಗಳ ಮುಂದೂ ಬಿದ್ದಿವೆ. ಪ್ರತಿ ದಿನ ಹತ್ತೆಂಟು ಜನ ಎಡವಿ ಬೀಳುತ್ತಾರೆ. ಕೈಯೋ-ಕಾಲೋ-ತಲೆಯೋ ಒಡೆಯುತ್ತದೆ. ಸಂಬಂಧಿಸಿದ ಅಧಿಕಾರಿಗಳಿಗೆ ಹೇಳಿದರೆ, ಮಾಡುತ್ತೇವೆ. ಕೆ.ಇ.ಬಿ. ಆವರಿಗೆ ಹೇಳಿದ್ದೇವೆ ಇನ್ನೇನು ಕಂಬಗಳು ಬರುತ್ತವೆ ಎನ್ನುತ್ತಿದ್ದಾರೆಂದು ಊರವರು ಹೇಳುತ್ತಾರೆ. 'ನಾವು ಯಾವ ತಕರಾರಿಲ್ಲದS ಸುಮ್ಮನS ಬಂದಿವ್ರಿ-ಒಂದಿನಾನರೇ ನಾವು ಹ್ಯಾಂಗಿದ್ದೇವಂತ ಕೇಳಬೇಕ್ರೀ ಈ ಜನ' ಎಂದು ಸರಕಾರಿ ಅಧಿಕಾರಿಗಳ ಬಗ್ಗೆ ಹೇಳುತ್ತಾರೆ ಮನಗೂಳಿ ಬಸಪ್ಪ. 'ಹೋಗ್ಲಿ ಬಿಡ್ರಿ-ಕರ್ಂಟ ಇಲ್ಲದಿದ್ರ ಬಿಡವಲದ್ಯಾ ಕರಿ-ಕಂಬಾ ಹಾಕಿದರರ ಏನ ಕರಂಟ ಇರೂದರಾಗೂ ಅಟS ಐತಿ. ಆದರS ಊರಿಗೆ ಹೋಗಾಕ ಒಂದು ದಾರಿ ಅನೂದರS ಬೇಕಲ್ಲರಿ-ಈ ಊರಿಗೆ ದಾರೀನS ಇಲ್ಲರೀ' ಎನ್ನುತ್ತಾರೆ ಸುಣಗಾರ ಈಶ್ವರಪ್ಪ, ಹೌದು. ಅವರು ಹೇಳಿದ್ದು ನಿಜ. ಪೂರ್ವಕ್ಕೆ ಸಿದ್ದನಾಥ ಕೇಂದ್ರ ಉಳಿದ ಮೂರು ದಿಕ್ಕುಗಳಲ್ಲಿ ಹಣಮಾಪೂರ, ಭಾಗಾನಗರ ಹಾಗು ಹಳೆರೊಳ್ಳಿಗಳ ಹೊಲಗಳಿವೆ. ಊರಿಗೊಂದು ದಾರಿ ಎಂಬ ಹಾಗೆ ಈ ಕೇಂದ್ರಕ್ಕೆ ದಾರಿಯೇ ಇಲ್ಲ, ಹಳೆರೊಳ್ಳಿಯಿಂದ ಬಂದರೆ-ಕೇಂದ್ರದ ಒಬ್ಬರ ಮನೆಗೆ ಹಾಯುತ್ತೀರಿ. ಇನ್ನೊಂದು ದಿಕ್ಕಿನಿಂದ ಬಂದರೆ ಸಿದ್ಧನಾಥ ಕೇಂದ್ರಕ್ಕೆ ಹೋಗುತ್ತೀರಿ. ಉಳಿದೆರಡು ದಿಕ್ಕುಗಳಲ್ಲಿ ಬೇರೆ ಊರುಗಳ ಹೊಲಗಳಿವೆ, ಅವರು ತಮ್ಮ ಹೊಲಗಳ ಮುಖಾಂತರ ಯಾರನ್ನೂ ಬಿಡುವುದಿಲ್ಲ. ಹೀಗೆ ಊರಿಗೆ ಬರಲು ದಾರಿ ಇಲ್ಲವೆಂದಷ್ಟೇ ಇಲ್ಲಿಯ ಜನರಿಗೆ ತಮ್ಮ ಹೊಲಗಳಿಗೂ ಹೋಗಲು ದಾರಿ ಇಲ್ಲವೆಂದು ಇಡೀ ಊರಿನ ಜನ ಹೇಳುತ್ತಾರೆ.

ಹಳೆರೊಳ್ಳಿಯ ಪ್ರತಿಶತ 39ರಷ್ಟು ಭೂಮಿ ನೀರಲ್ಲಿ ಮುಳುಗುತ್ತದೆ. ಉಳಿದ ಭೂಮಿ ಹಳೆಯ ಗ್ರಾಮದ ಉತ್ತರ-ಪಶ್ಚಿಮ ದಿಕ್ಕಿಗಿದೆ. ಈಗ ಪುನರ್ವಸತಿ ಕೇಂದ್ರದಿಂದ ಈ ಭೂಮಿಗಳಿಗೆ ಹೋಗಬೇಕಾದರೆ ಹಳೆರೊಳ್ಳಿ ಗ್ರಾಮಕ್ಕೆ ಬಂದೇ ಹೋಗಬೇಕು. ಒಂದೊಂದು ಹೊಲ ಗರಿಷ್ಠ ಹತ್ತು ಕಿಲೋಮೀಟರು ಅಂತರವಾಗುತ್ತದೆ. ಹತ್ತಿರದ ದಾರಿಯಿಂದ ಹೋಗಬೇಕಾದರೆ ಬೇರೆಯವರ ಹೊಲಗಳ ಮಧ್ಯ ಹಾಯಲು ಅವರು ದಾರಿ ಬಿಡುವುದಿಲ್ಲ. ಹೀಗಾಗಿ ತುಂಬ ಕಷ್ಟವಾಗುತ್ತದೆಂದು ನಾಗರಾಳ ಸಿದ್ದಪ್ಪ ಹೇಳುತ್ತಾರೆ.

ಪುನರ್ವಸತಿ ಕೇಂದ್ರವೆಂದರೆ ಕೇವಲ ಜನರಿಗೆ ಇರಲು ಒಂದು ಹಕ್ಕುಪತ್ರ ಕೊಟ್ಟರೆ ಹಂಚಿಬಿಟ್ಟರೆ ಹಳ್ಳಿಗರ ಬದುಕು ನಡೆಯುವುದಿಲ್ಲ. ಈಗ ಆದದ್ದು ಹಾಗೆ. ರೊಳ್ಳಿಯ ಜನ ತಾವು ತಮ್ಮ ಕುಟುಂಬ, ಸಾಮಾನುಗಳೊಂದಿಗೆ ಕೇಂದ್ರಕ್ಕೆ ಬಂದಿದ್ದಾರೆ. ತಮ್ಮ ದನಗಳನ್ನು, ಅವುಗಳಿಗೆ ಬೇಕಾಗುವ ಮೇವು-ಕಣಿಕೆಗಳನ್ನು ಹಳೆರೊಳ್ಳಿಯಲ್ಲಿಯೇ ಬಿಟ್ಟಿದ್ದಾರೆ. ಒಬ್ಬರು ಹೇಳುವಂತೆ, ಕೇಂದ್ರದಲ್ಲಿ ಹೆಂಡತಿ, ಮಕ್ಕಳು, ರೊಳ್ಳಿಯಲ್ಲಿ ತಮ್ಮ ದನಕರುಗಳು. ಬೆಳಗೆದ್ದು ಬುತ್ತಿ ಕಟ್ಟಿಕೊಂಡು ರೊಳ್ಳಿಗೆ ಬರುತ್ತಾರೆ. ಯಾಕೆಂದರೆ ದನಗಳನ್ನು ಕಟ್ಟಲು ಕೇಂದ್ರದಲ್ಲಿ ಸ್ಥಳವಿಲ್ಲ, ಅವುಗಳ ಆಹಾರ ಮೇವು-ಕಣಿಕೆಗಳನ್ನು ಸಂಗ್ರಹಿಸಲು, ಬಣವೆ ಒಟ್ಟಲು ಜಾಗವಿಲ್ಲ, ನೀರು ಕುಡಿಸಲು ನೀರಿಲ್ಲ.

> **ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ಕೇಂದ್ರಗಳು ಅಧ್ವಾನದ ತಾಣಗಳಾಗಿವೆ. ವಿದ್ಯುತ್ ದೀಪ ಹಾಗೂ ರಸ್ತೆ ಸಂಪರ್ಕಗಳಿಲ್ಲದೆ ಜನತೆ ತೊಂದರೆಗೀಡಾಗಿದ್ದಾರೆ. ಸರಕಾರಿ ಅಧಿಕಾರಿಗಳು ಭರವಸೆಗಳ ಮಳೆ ಸುರಿಸುತ್ತಿದ್ದಾರೆ.**

ಈ ಮನೆಗೆ ಪರಿಹಾರವಿಲ್ಲ ಸಂತ್ರಸ್ತನಿಗೆ ನಿವೇಶನವಿಲ್ಲ!

ಚಂದ್ರಪ್ಪ, ಬಸಪ್ಪ ಬ್ಯಾಕೋಡ ಹಳೆರೊಳ್ಳಿಯ ಒಬ್ಬ ರೈತ. ಆತನಿಗೆ ಮೂರು ಗಂಡು ಮಕ್ಕಳು. ನಾಗಪ್ಪ, ಬಸಪ್ಪ ಹಾಗೂ ನಿಂಗಪ್ಪ. ತಲೆತಲಾಂತರಗಳಿಂದ ಆವರು ಹಳೆರೊಳ್ಳಿಯಲ್ಲಿಯೇ ವಾಸಿಸುತ್ತಿದ್ದಾರೆ. ಪಿತ್ರಾರ್ಜಿತ ಭೂಮಿ, ಮನೆ ಎಲ್ಲ ಇದೆ. ಮುಳುಗಡೆಯಾಗುವ ಭೂಮಿಗೆ ಪರಿಹಾರವೂ ದೊರೆತಿದೆ. ಆರಿಣಿಗ ಗ್ರಾಮ ಪಂಚಾಯತ್‌ನಲ್ಲಿ ಬರುವ ಹಳೆರೊಳ್ಳಿಯ ಈ ಮನೆ ಸಂಖ್ಯೆ 22. ಊರಲ್ಲಿಯ ಎಲ್ಲ ಮನೆಗಳಿಗೂ ಪರಿಹಾರ ಹಣ ಬಂದಿದೆ. ಎಲ್ಲ ಮನೆಗಳನ್ನು ಕೆಡವಿದ್ದಾರೆ. ಯಜಮಾನರಿಗೆ ನಿವೇಶನಗಳೂ ದೊರೆತಿವೆ. ಆವರು ಹಕ್ಕು ಪತ್ರಗಳನ್ನು ಪಡೆದು ಪುನರ್ವಸತಿ ಕೇಂದ್ರದಲ್ಲಿ ಮನೆಗಳನ್ನು ಕಟ್ಟಿಕೊಂಡು ಸ್ಥಳಾಂತರಗೊಂಡಿದ್ದಾರೆ. ಆದರೆ ಈ 22ನೇ ನಂಬರಿನ ಮನೆಗೆ ಮಾತ್ರ ಪರಿಹಾರ ಹಣ ದೊರೆತಿಲ್ಲ. ಅದಕ್ಕೆ ಕಾರಣವೆಂದರೆ ಭೂಸ್ವಾಧೀನ ಕಾಯ್ದೆಯನ್ವಯ ಘೋಷಿಸುವ ಪರಿಪತ್ರದಲ್ಲಿ ಇವರ ಮನೆ ಸಂಖ್ಯೆ ಬರಲಿಲ್ಲವಂತೆ! ಹತ್ತು ಹದಿಮೂರು ವರ್ಷಗಳ ಹಿಂದೆ ಯಾರದೋ ನಿಷ್ಕಾಳಜಿಯಿಂದ ಈ ಮನೆ ನಂಬರು ಕಣ್ತಪ್ಪಿ ಗೆಜೆಟ್‌ನಲ್ಲಿ ಬರಲಿಲ್ಲವೆಂದಾಕ್ಷಣ ಮುಂದೆಯೂ ಆ ಕುರಿತು ನೋಡಬಾರದೆ? ಕಳೆದ ವರ್ಷ ಕೃಷ್ಣೆ ಊರಲ್ಲಿ ಬರಲು ಬೆದರಿಕೆ ಹಾಕಿದಾಗ ಸರ್ಕಾರ ಈ ಮನೆಯವರನ್ನು ಎಬ್ಬಿಸಿ ತಾತ್ಕಾಲಿಕವಾಗಿ ಕಟ್ಟಿದ ತಗಡಿನ ಶೆಡ್ಡಿನಲ್ಲಿ ಇರಿಸಿದರು. ಈಗಲೂ ಅವರು ಅಲ್ಲಿಯೇ ಇದ್ದಾರೆ. ಆದರೆ ಅವರ ಮನೆಗೆ ಇನ್ನೂ ಪರಿಹಾರ ಹಣ ದೊರೆತಿಲ್ಲ, ನಿವೇಶನ ದೊರೆತಿಲ್ಲ, ಎಲ್ಲರೂ ಬರುತ್ತಾರೆ. ನೋಡೋಣ ಎನ್ನುತ್ತಾರೆಂದು ಬಸಪ್ಪ ಹೇಳುತ್ತಾನೆ. 'ಏವು ಬರದರS ಏನಾದೀತು?' ಎಂದು ಪ್ರಶ್ನಿಸುತ್ತಾನೆ.

ಇರುವ ಎರಡು ಬೋರುಗಳು ಜನರಿಗೇ ಸಾಕಾಗುವುದಿಲ್ಲ, ಇನ್ನು ದನಗಳಿಗೆ ನೀರು ಹೇಗೆ? ಎನ್ನುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಪ್ರತಿನಿತ್ಯ ರೈತರು ಹೆಂಡಿಕಸ ಮಾಡಿ ಅದನ್ನು ತಮ್ಮದೇ ಆದ ತಿಪ್ಪೆಗುಂಡಿಯಲ್ಲಿ ಸಂಗ್ರಹಿಸುತ್ತಾರೆ. ಊರ ಹೊರಗಡೆಗೆ ಪ್ರತಿಯೊಬ್ಬರಿಗೂ ತಂತಮ್ಮ ತಿಪ್ಪೆಗುಂಡಿಗಳನ್ನು ಮಾಡಿಕೊಂಡಿರುತ್ತಾರೆ. ಅದುವೆ ಪ್ರತಿ ವರುಷ ಅವರ ಹೊಲಗಳಿಗೆ ಬೇಕಾಗುವ ಅಮೂಲ್ಯ ಗೊಬ್ಬರವಾಗುತ್ತದೆ. ಇಲ್ಲಿ ತಿಪ್ಪೆಗುಂಡಿಗಳನ್ನು ಎಲ್ಲಿ ಮಾಡಬೇಕು ಎಂದು ಕೇಳುತ್ತಾರೆ. ಆದ್ದರಿಂದ ಊರ ಪ್ರಮುಖರಾದ ಬಮ್ಮನಗೌಡರು, ನಾಗರಾಳ, ಮಣ್ಮ ನದಾಫ ಆಗ್ರಹಪಡಿಸುವುದು. ನಿವೇಶನಗಳ ಹೊರತಾಗಿ ಕನಿಷ್ಠ ಹತ್ತೆಂಟು ಎಕರೆ ಭೂಮಿ ಇದಕ್ಕಾಗಿ ಪಡೆದು ಪ್ರತಿ ರೈತನಿಗೂ ದಡ್ಡಿಗಾಗಿ ಚಿಕ್ಕದಾದರೂ ಒಂದು ನಿವೇಶನ ಕೊಡಬೇಕು. ಜೊತೆಗೆ ಒಂದು ಎಕರೆಯಷ್ಟು ಸ್ಥಳ ಪಡೆದು-ಹೆಣ್ಣು ಮಕ್ಕಳಿಗೆ-ಗಂಡು ಮಕ್ಕಳಿಗೆಂದು ಬೇರೆ-ಬೇರೆ ಬಹಿರ್ದೆಶೆಗೆ ಹೋಗುವ ಅನುಕೂಲ ಮಾಡಿಕೊಡುವುದು ತುರ್ತಾಗಿ ಆಗಬೇಕು ಎನ್ನುತ್ತಾರೆ. ಬೋರುಗಳ ಹೊರತಾಗಿ ಹೊಳೆಯಿಂದಲೇ ನೀರನ್ನು ತರುವ ವ್ಯವಸ್ಥೆಯಾದರೆ ಅವರ ದನಕರುಗಳು ಬದುಕ ಬಹುದು ಇಲ್ಲವೆ ಇದೇ ಪರಿಸ್ಥಿತಿ ಮುಂದುವರೆದರೆ ನಾಳೆ ತಂತಮ್ಮ ದನಕರುಗಳನ್ನು ಮಾರುವುದೊಂದೇ ದಾರಿ ಎನ್ನುತ್ತಾರೆ. ಯಾಕೆಂದರೆ ಬರುವ ಮಳೆಗಾಲದಲ್ಲಿ ಹಳೆರೊಳ್ಳಿ ಪೂರ್ತಿಯಾಗಿ ನೀರಲ್ಲಿ ನಿಲ್ಲುತ್ತದೆ. ಅಲ್ಲಿ ಹೋಗಲು ಸಾಧ್ಯವೇ ಇಲ್ಲವೆನ್ನುತ್ತಾರೆ.

ರಾಜೇಸಾಬ ನದಾಫರ ಸಮಸ್ಯೆಯೂ ದೊಡ್ಡದು. ಮುಸಲ್ಮಾನರಿಗೆ ಪ್ರತ್ಯೇಕ ಸ್ಮಶಾನದ ಅಗತ್ಯ ಇದೆಯೆನ್ನುತ್ತಾರೆ. ಈವರೆಗೆ ಸತ್ತವರೆನ್ನು ನಾಲ್ಕು ಕಿ.ಮೀ. ಅಂತರದ ಹಳೆರೊಳ್ಳಿಯಲ್ಲಿಯೇ ದಫನ ಮಾಡಿದ್ದಾರಂತೆ. ಇನ್ನು ನೀರು ಬಂದ ಮೇಲೆ ಸತ್ತವರ ಶವಗಳನ್ನು ಆಲಮಟ್ಟಿಯ ಪುನರ್ವಸತಿ ಅಧಿಕಾರಿಗಳ ಕಚೇರಿಗೇ ಕೊಂಡೊಯ್ಯಬೇಕಾದೀತೆಂಬ ಎಚ್ಚರಿಕೆಯನ್ನೂ ಕೊಡುತ್ತಾರೆ. ಅದೇ ಸಮಸ್ಯೆ ಹಿಂದುಗಳದ್ದೂ ಆಗಿದೆ.

ದಾರಿ, ದೀಪ, ನೀರು, ಸ್ಮಶಾನಗಳ ಅವಶ್ಯಕತೆಯಲ್ಲಿ ಅವರ ದೇವರುಗಳನ್ನು ಕೇಳುವವರೇ ಇಲ್ಲವಾಗಿದೆ. ಸುಮಾರು ಹತ್ತು ಹಿಂದು ಗುಡಿಗಳು ಒಂದು ಮಶೀದಿಗಳಿಗೆ ಕೇಂದ್ರದಲ್ಲಿ ಸ್ಥಳವನ್ನೇ ಗೊತ್ತುಮಾಡಿಲ್ಲ! ಅದಕ್ಕಾಗಿ ಇಡೀ ಊರವರು ಚಡಪಡಿಸುತ್ತಿದ್ದಾರೆ. ಹುಣ್ಣಿಮೆ ಅಮಾವಾಸ್ಯೆ ಹಬ್ಬಗಳಂದು ಈಗಲೂ ಜನ ಕೇಂದ್ರದಿಂದ ಹಳೆರೊಳ್ಳಿಗೆ ಹೋಗಿಯೇ ನಮಸ್ಕಾರ ಮಾಡಿ ಬರುತ್ತಿದ್ದಾರೆ. ಎಲ್ಲಿಯದೋ ಭೂಮಿಯ, ಯಾವುದೋ ಜನರ ಉತ್ಕರ್ಷಕ್ಕಾಗಿ ತ್ಯಾಗ ಮಾಡುತ್ತಿರುವ ಈ ಜನರ ಸ್ಥಿತಿಗತಿ ಮೊದಲಿನಂತಾಗುವುದು ಸಾಧ್ಯವೇ ಇಲ್ಲವೆಂದು ಅವರು ಭಾವಿಸಿದ್ದಾರೆ.

ಸಮಗ್ರ ನೀರಾವರಿ ಹೋರಾಟ ಅಂದರೇನು ?

ವಿಜಾಪುರ ಜಿಲ್ಲೆಯಲ್ಲಿ ಈಗ ಎಲ್ಲಿ ನೋಡಿದಲ್ಲಿ ಸಮಗ್ರ ನೀರಾವರಿ ಕುರಿತು ಹೋರಾಟ ನಡೆದಿದೆ. ಕರ್ನಾಟಕ ರಾಜ್ಯ ನಿರ್ಮಾಣವಾಗಿ ಐವತ್ತು ವರ್ಷಗಳು ಸಮೀಪಿಸುತ್ತಿವೆ. ಜಿಲ್ಲೆಯ ಇಂಡಿ, ಸಿಂದಗಿ ತಾಲೂಕಿನ ಕೆಲ ಭಾಗ ನೀರಾವರಿ ಆದುದನ್ನು ಬಿಟ್ಟರೆ ಉಳಿದೆಡೆ ಒಂದು ಹನಿ ನೀರು ಹೊಲಗಳಿಗೆ ಹರಿಯುತ್ತಿಲ್ಲ. ಪ್ರತಿ ಹತ್ತು ಹನ್ನೆರೆಡು ವರ್ಷಗಳಿಗೆ ಒಮ್ಮೆ ಬರುವ ಕುಂಭ ಮೇಳಗಳಂತೆ ನೀರಾವರಿಗಾಗಿ ಇಲ್ಲಿ ಹೋರಾಟ ನಡೆಯುತ್ತಲೇ ಇವೆ. ಹಾವು-ಏಣಿ ಆಟದಂತೆ ಹೋರಾಟ ಎರಡು ಹೆಜ್ಜೆ ಮುಂದೆ ಹೋಗುತ್ತಿದ್ದಂತೆ ಒಂದು ಹೆಜ್ಜೆ ಹಿಂದೆ ಸರಿದಿರುತ್ತದೆ.

ಈಗ .ತಿಂಗಳುಗಳ ಹಿಂದೆ ಭಾರತೀಯ ಜನತಾ ಪಕ್ಷದವರು ಆಲಮಟ್ಟಿಯಲ್ಲಿ ಜಿಲ್ಲೆಯ ಸಮಗ್ರ ನೀರಾವರಿಗಾಗಿ ಹೋರಾಟ ಹಮ್ಮಿಕೊಂಡರು. ಅದು ಇಂದಿಗೂ ನಡೆಯುತ್ತಲೇ ಇದೆ. ಆನಂತರ ಪ್ರತಿ ತಾಲೂಕುಗಳಲ್ಲಿ ಪ್ರಾರಂಭಿಸಿದರು. ಇದ್ದಕ್ಕಿದ್ದಂತೆ ಅದನ್ನು ಕೆಲವು ದಿನಗಳ ಹಿಂದೆ ಪಕ್ಷಾತೀತ ಹೋರಾಟ ಎಂದು ಕಮಲದ ಧ್ವಜಗಳನ್ನು ಹಿಂದೆ ಸರಿಸಿದರು. ಹಳೆ ಹೊಸ ಮುಖಂಡರನ್ನು ಕಲೆ ಹಾಕಿ ಚರ್ಚಿಸಿದರು. ಇದೀಗ ಪಕ್ಷಾತೀತವಾಗಿ ಭೀಮೆಯಿಂದ ಕೃಷ್ಣೆಯವರೆಗೆ ಪಾದಯಾತ್ರೆ ನಡೆದಿದೆ. ಈ ಹಿಂದಿನ ಹೋರಾಟಗಳು ಯಾಕೆ ಯಶಸ್ಸು ಕಾಣಲಿಲ್ಲ ಎಂಬುದನ್ನು ಈ ಮುಖಂಡರು ಆತ್ಮಾವಲೋಕನ ಮಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಕೇವಲ ಹೋರಾಟಗಳಿಂದ ಗುರಿ ಸಾಧಿಸುವುದು ಕಷ್ಟದ ಕೆಲಸ ಎಂಬುದು ಈ ಜನರಿಗೆ ಅರ್ಥವಾಗಲೊಲ್ಲದು. ಪ್ರಜಾ ಪ್ರಭುತ್ವದಲ್ಲಿ ಜನಪ್ರತಿನಿಧಿಗಳೇ ಪ್ರಭುಗಳಾಗಿರುವಾಗ, ಅವರು ಎಲ್ಲಿ ಹೋರಾಡಬೇಕೋ ಅಲ್ಲಿಹೋರಾಡದಿದ್ದಾಗ ಇನ್ನು ಐದು ದಶಕಗಳಾದರೂ ಜಿಲ್ಲೆಗೆ ನೀರು ದೊರೆಯುವುದಿಲ್ಲ. ಇದ್ದಷ್ಟು ನೀರನ್ನು ಬೇರೆಡೆ ಹರಿಸಿ ಬಿಡುತ್ತಾರೆ. ಈಗ ಆಗಿದ್ದು ಮತ್ತು ಆಗುತ್ತಿರುವುದು ಅದೆಯೇ.

ಪಾದಯಾತ್ರೆಯ ಘೋಷಣಾ ಪತ್ರದಲ್ಲಿ ಮೊದಲ ಬೇಡಿಕೆ ಭೀಮಾ ನೀರಿನದಾಗಿದೆ. 1985ರಿಂದಲೇ ಕರ್ನಾಟಕದ ಭೀಮಾ ನದಿಯಲ್ಲಿ ನೈಸರ್ಗಿಕ ಹರಿವು ಸಂಪೂರ್ಣ ನಿಂತು ಹೋಗಿದೆ. ಅಂದರೆ ಕಳೆದ 20 ವರ್ಷಗಳಿಂದ ಭೀಮೆಯಲ್ಲಿ ನೀರಿಲ್ಲದಿದ್ದಾಗ ಆ ಮತಕ್ಷೇತ್ರದ ಜನಪ್ರತಿನಿಧಿಗಳು ಏನು ಮಾಡಿದರು ? ಎಷ್ಟು ಸಲ ಈ ಪ್ರಶ್ನೆಯನ್ನು ಸದನದಲ್ಲಿ ಎತ್ತಿದರು. ಅದಕ್ಕೆ ಪೂರಕವಾಗಿ ಜಿಲ್ಲೆಯ ಉಳಿದ ಎಷ್ಟು ಜನಪ್ರತಿನಿಧಿಗಳು ಸ್ಪಂದಿಸಿದರು ಎಂಬುದನ್ನು ಅರಿಯುವುದು ಅಗತ್ಯ. ಇದಾವುದನ್ನೂ ಜನಪ್ರತಿನಿಧಿಗಳು ಮಾಡದೇ ಇದ್ದಾಗ ಜನರು ಬೀದಿಗೆ ಇಳಿದರು. ಬೀದಿಗೆ ಇಳಿದರೂ ಫಲ ಸಿಗದಿದ್ದಾಗ ಸುಪ್ರೀಂಕೋರ್ಟ್ ಕಟ್ಟೆ ಹತ್ತಿದರು. ಮುಳವಾಡ ಏತ ನೀರಾವರಿ ಯೋಜನೆಯದೂ ಇದೆ ಸಮಸ್ಯೆ. ಮುಳವಾಡ ಏತ ನೀರಾವರಿ ಯೋಜನೆಯಿಂದ ವಿಜಾಪುರ ಜಿಲ್ಲೆ ಬರ ಪರಿಹಾರ ಸಾಧ್ಯ ಎಂಬುದನ್ನು ಬ್ರೆಟಿಷರ ಕಾಲದಿಂದ ಹೇಳುತ್ತ ಬಂದರೂ ಅದು ಇದುವರೆಗೂ ಪೂರ್ಣಗೊಂಡಿಲ್ಲ ಎಂದರೆ ಏನು ಅರ್ಥ ? ಯೋಜನೆಯನ್ನು ಮೂಲದಲ್ಲಿ ರೂಪಿಸುವಾಗ ಅಂದಿನ ಖ್ಯಾತ ಎಂಜನಿಯರ ದಿ.ಬಾಳೆಕುಂದ್ರಿ ಅವರು ನಾಲ್ಕು ಹಂತಗಳಲ್ಲಿ ರೂಪಿಸಿ ಇಂದಿನ ವಿಜಾಪುರ ಜಿಲ್ಲೆಯ ಬಹುತೇಕ ಭಾಗ ನೀರಾವರಿಗೆ ಒಳಪಡುವಂತೆ ಯೋಜಿಸಿದ್ದರು. ಕೃಷ್ಣಾ ಮೇಲ್ದಂಡೆ ಯೋಜನೆ 'ಎ' ಸ್ಕೀಮಿನಲ್ಲಿ 4.45 ಟಿಎಂಸಿ ನೀರನ್ನು ಬಳಸಿ, ಆದರಿಂದ ಬಸವನ ಬಾಗೇವಾಡಿ ತಾಲೂಕಿನ 16659, ವಿಜಾಪುರ ತಾಲೂಕಿನ 4330 ಮತ್ತು ಜಮಖಂಡಿ ತಾಲೂಕಿನ 5861 ಹೆಕ್ಟೇರ ಭೂಮಿ ನೀರಾವರಿಗೆ ಒಳಪಡಿಸಿದ್ದರು. ಜಿಲ್ಲೆಯ ಆಲಮಟ್ಟಿಯಲ್ಲಿ ನೀರು ನಿಂತು ನಾಲ್ಕು ವರ್ಷಗಳಾದವು. ಇಂದಿಗೂ ಒಂದು ಹನಿ ನೀರು ಹರಿದಿಲ್ಲ ಯಾಕೆ ?

ಪ್ರಜಾ ಪ್ರಭುತ್ವದಲ್ಲಿ, ಜನಪ್ರತಿನಿಧಿಗಳೇ ಪ್ರಭುಗಳಾಗಿರುವಾಗ, ಅವರು ಎಲ್ಲಿ ಹೋರಾಡಬೇಕೋ ಅಲ್ಲಿ ಹೋರಾಡದಿದ್ದಾಗ ಇನ್ನು ಐದು ದಶಕಗಳಾದರೂ ಜಿಲ್ಲೆಗೆ ನೀರು ದೊರೆಯುವುದಿಲ್ಲ. ಇದ್ದಷ್ಟು ನೀರನ್ನು ಬೇರೆಡೆ ಹರಿಸಿ ಬಿಡುತ್ತಾರೆ. ಈಗ ಆಗಿದ್ದು ಮತ್ತು ಆಗುತ್ತಿರುವುದು ಅದೆಯೇ.

ಯೋಜನೆಯ ಎರಡನೇ ಹಂತದ ಕಾರ್ಯ ಮುಗಿದು, ಪಂಪುಗಳ ಅಳವಡಿಕೆಯೂ ಆಗಿದೆ. ವಿದ್ಯುತ್ ಸಂಪರ್ಕ ಮಾತ್ರ ಜೋಡಿಸಬೇಕು. ಆದರೆ ಪ್ರಾರಂಭದ 10 ಕಿ.ಮೀ.ಕಾಲುವೆಯಾಗದೇ, ಅದರ ಪೂರ್ವ, ಪುಶ್ಚಿಮ ಕಾಲುವೆಗಳು ಕಿ.ಮೀ. 11ರಿಂದ ಪ್ರಾರಂಭವಾಗಿ ಮುಗಿಯುವ ಹಂತದಲ್ಲಿವೆ. ಮೊದಲಿನ ಹತ್ತು ಕಿ.ಮೀ. ಕಾಲುವೆಯಾಗಿದ್ದರೆ. ಈಗ ಅಲ್ಲಿ ನೀರು ಹರಿದು ನಾಲ್ಕು ವರ್ಷಗಳೇ ಆಗುತ್ತಿದ್ದವು. ಇದೀಗ ಹೊಸದಾಗಿ ಬಂದ ಜನಪ್ರತಿನಿಧಿ ಆರು ತಿಂಗಳುಗಳಿಂದ ಬೆನ್ನುಹತ್ತಿಮೊದಲಿನ ಹತ್ತು ಕಿ.ಮೀ. ಕಾಲುವೆ ಕಾಮಗಾರಿಗೆ ಚಾಲನೆ ನೀಡಿದರು. ತಾತ್ಪರ್ಯ, ಜನಪ್ರತಿನಿಧಿಯು ಸರಿಯಾದ ದಾರಿಯಲ್ಲಿ ಪ್ರಯತ್ನಿಸಿದರೆ ಕೆಲಸ ಆಗುತ್ತದೆ ಎಂದಾಯಿತು. ಹಾಗೆಂದ ಮಾತ್ರಕ್ಕೆ ಆ ಜನಪ್ರತಿನಿಧಿಯ ಸಾಧನೆ ಬಹು ದೊಡ್ಡದು ಎಂದಲ್ಲ ಮುಳವಾಡ ಏತ ನೀರಾವರಿ ಕರ್ಮಕಾಂಡ ಇಷ್ಟಕ್ಕೆ ಮುಗಿಯುವುದಿಲ್ಲ ಆದರ 'ಬ' ಸ್ಕೀಮಿನಲ್ಲಿ 56.10 ಟಿಎಂಸಿ ನೀರಿನ ಬಳಕೆಯನ್ನು ನಿಗದಿಪಡಿಸಿದ್ದು, ಇಂದು ಅದನ್ನು ಮಾಸ್ಟರ ಪ್ಲಾನಿನಲ್ಲಿ 36.514 ಟಿಎಂಸಿ ನೀರಿಗೆ ನಿಗದಿ ಮಾಡಲಾಗಿದೆ. ಅಂದರೆ 20 ಟಿಎಂಸಿ ನೀರನ್ನು ಕಡಿಮೆ ಮಾಡಿದವರು ಯಾರು ? ಯಾಕೆ ? ಎಂಬುದನ್ನು ಜಿಲ್ಲೆಯ ಪ್ರತಿನಿಧಿಗಳು ಎಂದಾದರೂ ಕೇಳಿದರೆ ? ಹಾಗೆ ಕೇಳಿಯೂ ಫಲ ದೊರೆಯದಿದ್ದರೆ ಆಗ ಜನರ ಮುಂದೆ ಬರಬೇಕು. ಜನಾಂದೋಲನ ರೂಪಿಸಬೇಕು. ಇದೀಗ ಮುಳವಾಡ ಏತ ನೀರಾವರಿ ಯೋಜನೆ ಎರಡನೇ ಹಂತದಲ್ಲಿ ಮುಗಿಯುವ ಸಾಧ್ಯತೆ ಇದೆ. ಅದು ಕೂಡ 'ಬ' ಸ್ಕೀಮಿನಲ್ಲಿನಮಗೆ ನೀರು ಸಿಕ್ಕರೆ ಮಾತ್ರ. ಹೊಸದಾಗಿ ನಿರ್ಮಿತವಾಗಿರುವ ನ್ಯಾಯಾಧಿಕರಣವ ಮುಂದೆ 'ಎ'ಸ್ಕೀಮಿನಲ್ಲಿ ಕರ್ನಾಟಕ್ಕೆ ನಿಗದಿಪಡಿಸಿದ 734 ಟಿಎಂಸಿ ನೀರನ್ನು ಅದು ಪೂರ್ಣವಾಗಿ ಬಳಸಿಲ್ಲ ಬಳಸಲಾರದ 152 ಟಿಎಂಸಿ ನೀರಿನ ಪುನರ್ವಿಮರ್ಶೆ ಆಗಬೇಕೆಂದು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳು ಕೇಳಿವೆ. ಅದನ್ನು ಅಂದಿನ ಎನ್‌ಡಿಎ ಸರಕಾರ ಒಪ್ಪಿಕೊಂಡು ನ್ಯಾಯಾಧಿಕರಣಕ್ಕೆ ಆ ಬಗ್ಗೆ ತೀರ್ಪು ನೀಡಲು ಕೇಳಿದೆ. ಅಲ್ಲಿ ನಮ್ಮವರು ಬಳಕೆಯನ್ನು ಸ್ಥಾಪಿಸುವುದು ತುಂಬ ಕಠಿಣವಾಗುತ್ತದೆ. 'ಎ' ಸ್ಕೀಮಿನಲ್ಲಿಯ 734 ಟಿಎಂಸಿ ನೀರನ್ನು ಇಂದು ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಈ ಹಂತದಲ್ಲಿ ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ನಾವು 4.450 ಟಿಎಂಸಿ ನೀರಿಗೆ ತೃಪ್ತಿಯಾಗುವ ಶಂಕೆಯಿದೆ. ಈ ಅಂಶಗಳನ್ನು ಜನಪ್ರತಿನಿಧಿಗಳು ಮನಗಾಣಬೇಕು ಮತ್ತು ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಒಪಾಗಿ ಪಕ್ಷಭೇದ ಮರೆತು ಸದನದ ಒಳಹೊರಗೂ ತಿಳುವಳಿಕೆ ಲಾಬಿಯನ್ನು ಮಾಡಬೇಕಾದ ಅವಶ್ಯಕತೆ ಇದೆ.

ಅಂಥದೇ ಸಮಸ್ಯೆಗಳು ಚಿಮ್ಮಲಗಿ, ಗುತ್ತಿ ಬಸವಣ್ಣ ಮತ್ತು ಇಂಡಿ ಶಾಖಾ ಕಾಲುವೆಗಳ ಯೋಜನೆಗಳ ಅನುಷ್ಠಾನದಲ್ಲೂ ಇವೆ. ಚಿಮ್ಮಲಗಿ ಏತ ನೀಡಾವರಿ ಮೂಲ ಯೋಜನೆಯಲ್ಲಿ 25.150 ಟಿಎಂಸಿ ಪೈಕಿನ ಬಳಕೆ ಇದ್ದದ್ದು ಈಗ 5 ಟಿಎಂಸಿ ಕಡಿತಗೊಂಡು 20.789 ಟಿಎಂಸಿ ನೀರನ್ನು ನಿಗದಿ ಮಾಡಲಾಗಿದೆ. ಇಂಡಿ ಶಾಖಾ ಕಾಲುವೆಯ ಉಪಯೋಜನೆಯಾದ ಗುತ್ತಿ ಬಸವಣ್ಣ ಯೋಜನೆಯು 'ಎ' ಸ್ಕೀಮಿನಲ್ಲಿ ಅಳವಡಿಸಲಾಗಿತ್ತು. ಆದರ 97 ಕಿ.ಮೀ. ಕಾಲುವೆ ಮುಗಿದಿದ್ದು, ಉಳಿದ 50 ಕಿ.ಮೀ. ಕಾಲುವೆ ಆಗಬೇಕು. ಈಗ ಉಳಿದ 50 ಕಿ.ಮೀ. ಕಾಲುವೆಯಿಂದ ಹರಿವ ನೀರನ್ನು 'ಬ' ಸ್ಕೀಮಿಗೆ ಪಡದಿ ಪಡಿಸಿ, ಯೋಜನೆಯಲ್ಲಿ ಇಲ್ಲದ, ಮಾಮ್ಮಿಮಜ್ರಿಗಳ ಮತಕ್ಷೇತ್ರಕ್ಕೆ ಆ ನೀರನ್ನು ಹರಿಸುವ ಯೋಜನೆಯನ್ನು ರೂಪಿಸಿ ಕೆಲಸ ಪ್ರಾರಂಭವಾಗಿದೆ. ಇದನ್ನು ಯಾರು ಕೇಳಬೇಕು ?

ಹೀಗೆ ಸಮಸ್ಯೆಗಳ ಪಟ್ಟಿಯನ್ನು ಮಾಡಬಹುದು. ಜಿಲ್ಲೆ ಬಳಲುತ್ತಿರುವುದು ಯಾವುದೇ ಪಕ್ಷದ ಇಲ್ಲ ಸರಕಾರದಿಂದ ಅಲ್ಲ ಜನಪ್ರತಿನಿಧಿಗಳ ಇಚ್ಛಾ ಶಕ್ತಿಯ ಕೊರತೆಯಿಂದ ಬಳಲುತ್ತಿದೆ ಎಂಬುದನ್ನು ನಾವು ಮನಗಾಣಬೇಕು. ಜನರು ಹೋರಾಟ ಮಾಡಲು ಹಿಂಜರಿಯುವುದಿಲ್ಲ ಆದರೆ ಅದನ್ನು ತಮ್ಮ ಮನೆಗೆ ಬಂದಾಗ ಉಪಯೋಗಿಸುತ್ತೇವೆ ಎಂದರೆ ಹೋರಾಟಕ್ಕೆ ಅರ್ಥ ಬರುವುದಿಲ್ಲ. ಅದು ತನ್ನ ಮೌಲ್ಯವನ್ನೇ ಕಳೆದುಕೊಳ್ಳುವ ಭೀತಿ ಇದೆ. ಹಾಗಾಗದ ಹಾಗೆ ಜಿಲ್ಲೆಯ ಎಲ್ಲಜನಪ್ರತಿನಿಧಿಗಳುಪ್ರತಿಷ್ಠೆ ಬದಿಗಿಟ್ಟು ಪಕ್ಷಭೇದವಿಲ್ಲದೆ ಒಂದಾಗಿ ಮೊದಲು ಜಿಲ್ಲೆಯ ನೀರಾವರಿ ಸಮಸ್ಯೆಗಳನ್ನು ಸದನದಲ್ಲಿ ಅರ್ಥಪೂರ್ಣವಾಗಿ ಬಿಂಬಿಸುವ ಪ್ರಯತ್ನ ಮಾಡಲಿ. ಅಲ್ಲಿ ಜಿಲ್ಲೆಗೆ ಅನ್ಯಾಯವಾಗುತ್ತದೆ ಎಂದು ಕಂಡು ಬಂದರೆ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ರಾಜೀನಾಮೆ ಕೊಟ್ಟು ಹೊರಬರಲಿ. ಆಗ ಇಡೀ ಜಿಲ್ಲೆಯೇ ಅವರ ಬೆನ್ನ ಹಿಂದೆ ನಿಲ್ಲುತ್ತದೆ.

-ಕೃಷ್ಣ ಕೊಲ್ಹಾರ ಕುಲಕರ್ಣಿ

ಪ್ರಶಸ್ತಿ ರಾಜಕೀಯದ ಬಲೆಯಲ್ಲಿ ವಿಜಾಪುರದ ನೀರು !

ವಿಜಾಪುರ ಮತ್ತು ನೀರು ಕಳೆದ ನಾಲ್ಕು ದಶಕಗಳಿಂದ ಸುದ್ದಿಯಲ್ಲಿದೆ. ನೀರಿಲ್ಲ, ನೀರು ಇದ ಆದರೆ ತರುವ ವ್ಯವಸ್ಥೆ ಇಲ್ಲ. ವ್ಯವಸ್ಥೆಯಾಯಿತು ನಗರಕ್ಕೆ ಸಾಲುವಷ್ಟು ನೀರನ್ನು ತರಲು ಸಾಧ್ಯವಾಗಲಿಲ್ಲ. ಅನಂತರ ಅದರ ವ್ಯವಸ್ಥೆಯನ್ನೂ ಮಾಡಿ ಇಂದು ಬಿಜಾಪುರ ನೀರು ಸರಬರಾಜಿನ 2ನೆಯ ಹಂತದ ಕಾರ್ಯವನ್ನು ಪೂರ್ಣಗೊಳಿಸಿ ಕೊಲ್ಹಾರ ಬ್ಯಾರೇಜ್‌ನಿಂದ ನೀರು ತರುವ ಕಾರ್ಯ ಪ್ರಾರಂಭವಾಗಿ ಎರಡು ತಿಂಗಳ ಮೇಲಾಗಿದ್ದರೂ ಇನ್ನೂ ವಾರಕ್ಕೆ ಒಮ್ಮೆ ನೀರು ಬಿಡುವ ಸಂಪ್ರದಾಯಕ್ಕೆ ಮಂಗಳ ವನ್ನು ಹಾಡುವುದು ಆಗಲೇ ಇಲ್ಲ!

ಅದಕ್ಕೆ ಒಬ್ಬೊಬ್ಬರು ಒಂದೊಂದು ಕಾರ ಣಗಳನ್ನು ಕೊಡುತ್ತಿದ್ದಾರೆ. ನಗರದ ಬಿಜೆಪಿ ಶಾಸಕರು ಇದರಲ್ಲಿ ರಾಜಕೀಯ ಮಾಡಲಾ ಗುತ್ತಿದೆ ಎಂದು ದೂರಿದರೆ ಜನತಾದಳದ ನಗರ ಸಭಾಧ್ಯಕ್ಷರು ಕಳಪೆ ಕಾಮಗಾರಿ-ಭ್ರ ಷ್ಟಾಚಾರದ ಮಾತುಗಳನ್ನಾಡಿ ಸಿಓಡಿ ತನಿ ವೆಗೆ ಆಗ್ರಹಿಸಿದ್ದಾರೆ. ಜಲಮಂಡಳಿಯ ಅಧಿ ಕಾರಿಗಳು ಅದನ್ನು ಅಲ್ಲಗಳೆದು ಬ್ಯಾರೇ ಜಿನಿಂದ ನಗರಕ್ಕೆ ಸರಬರಾಜು ಆಗುವ ನೀರಿನಲ್ಲಿ ಯಾವ ವ್ಯತ್ಯಯವೂ ಇಲ್ಲ, ಕ್ಷಚಿ ತ್ತಾಗಿ ವಿದ್ಯುತ್‌ನಿಂದಾಗಿ ಸರಬರಾಜಿನ ತೊಂದರೆಯಾಗಿರಬಹುದೇ ಹೊರತು ಬೇರೆ ಕಾರಣಗಳಿಲ್ಲ. ಕಾರ್ಯ ಪ್ರಾರಂಭವಾ ದಂದಿನಿಂದ 50 ಕಿ.ಮೀ. ಅಂತರದ ಕೊಳವೆ ಮಾರ್ಗದಲ್ಲಿ ಎರಡು ಕಡೆಗೆ ಮಾತ್ರ ಅಲ್ಪ ಪ್ರಮಾಣದ ನೀರು ಸೋರುವಿಕೆಯಾಗಿದೆಯೇ ಹೊರತು, ಉಳಿದ ಕಡೆಗಳಲ್ಲಿಯ ಕೆಲಸಕ್ಕೆ ಹೋಲಿಸಿದರೆ ಅಪರೂಪದ ಕೆಲಸವಾಗಿದೆ ಯೆನ್ನುತ್ತಾರೆ. ಸಾಮಾನ್ಯವಾಗಿ ಕೊಳವೆ ಮಾರ್ಗವನ್ನು ಪ್ರಾರಂಭಿಸಿದ ತಕ್ಷಣ ಮೊದ ಲಿನ ಆರೆಂಟು ತಿಂಗಳು ತಲೆನೋವಾಗು ವಷ್ಟು ಸೋರಿಕೆ, ತಾಂತ್ರಿಕ ಅಡಚಣೆಗಳೆಲ್ಲ ಬರುವುದು ಸಹಜವಾಗಿದ್ದರೂ ಬಿಜಾಪುರ ನೀರಿನ ಎರಡನೆಯ ಹಂತದ ಕಾರ್ಯದಲ್ಲಿ ಅದು ಕೂಡ ಬಂದಿಲ್ಲವೆನ್ನುತ್ತಾರೆ. ಅದರಂತೆ ಕರ್ನಾಟಕ ವಿದ್ಯುತ್ ಮಂಡಳಿಯ ಅಧಿಕಾರಿ ಗಳನ್ನು ಸಂಪರ್ಕಿಸಿದಾಗ ಅವರು ನೀರು ಸರಬರಾಜಿನ ವಿದ್ಯುತ್ ಮಾರ್ಗವನ್ನು ಮುತುವರ್ಜಿಯಿಂದ ನೋಡಲಾಗುತ್ತಿದೆ. ಸಾರ್ವತ್ರಿಕ ಸ್ಥಗಿತದ ಹೊರತು ವಿದ್ಯುತ್ ಸಂಪರ್ಕದಲ್ಲಿ ಕಡಿತವಾಗಿಲ್ಲವೆಂದು ದಾಖಲೆ ಗಳನ್ನೇ ತೋರಿಸುತ್ತಾರೆ. ಹಾಗಾದರೆ ವಿಜಾ ಪುರ ನೀರು ಸರಬರಾಜಿನ ವ್ಯವಸ್ಥೆಯಲ್ಲಿ ಸುಧಾರಣೆ ಯಾಕೆ ಆಗಲೊಲ್ಲದು ಎಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ.

ನೀರಿನ ಕ್ಷಮತೆ

ವಿಜಾಪುರ ನೀರು ಸರಬರಾಜಿಗೆ ಇಂದು ಮೂರು ವ್ಯವಸ್ಥೆಗಳಿವೆ. ಕೊಲ್ಹಾರ ಬ್ಯಾರೇ ಜಿನ ಮೊದಲ ಹಂತದ ಕೊಳವೆ ಮಾರ್ಗ ಗಳಿಂದ ಪ್ರತಿನಿತ್ಯ 24 ಲಕ್ಷ ಗ್ಯಾಲನ್ ನೀರು ಬರುವ ಕ್ಷಮತೆ ಇದ್ದರೆ ಎರಡನೆಯ ಹಂತದ ಮಾರ್ಗದಿಂದ 60 ಲಕ್ಷ ಗ್ಯಾಲನ್ ನೀರು ಹಾಗೂ ಮೊದಲಿನ ಭೂತನಾಳ ಕೆರೆಯಿಂದ 16 ಲಕ್ಷ ಗ್ಯಾಲನ್ ಹೀಗೆ ಸಾಮಾನ್ಯ ಸಂದರ್ಭಗಳಲ್ಲಿ ಪ್ರತಿನಿತ್ಯ ಸುಮಾರು 100 ಲಕ್ಷ ಗ್ಯಾಲನ್ ನೀರು ಸರಬರಾಜು ಆಗುವ ಸಾಮರ್ಥ್ಯವನ್ನು ಹೊಂದಿದೆ. ಇದರಲ್ಲಿ ಭೂತನಾಳ ಕೆರೆ ಇಂದು ಪೂರ್ತಿಯಾಗಿ ಬಣಗಿದೆಯೆಂದರೂ, ತುಂಬಿ ನಿಂತ ಕೊಲ್ಹಾರ ಬ್ಯಾರೇಜಿನಿಂದ 84 ಲಕ್ಷ ಗ್ಯಾಲನ್ ನೀರು ಯಾವ ತೊಂದರೆಯೂ ಇಲ್ಲದೆ ಬರಬೇಕು.

ದಿನಕ್ಕೆ ಎರಡು ಗಂಟೆಯಂತೆ ನೀರು ಬಿಟ್ಟರೂ ವಿಜಾಪುರದ ಜನವಸತಿಗೆ ಇಂದು ಪ್ರತಿನಿತ್ಯ 90ರಿಂದ 100 ಲಕ್ಷ ಗ್ಯಾಲನ್ನಿನ ನೀರಿನ ಅವಶ್ಯಕತೆ ಇದೆ. ವಿದ್ಯುತ್, ಸಣ್ಣ ಪುಟ್ಟ ತಾಂತ್ರಿಕ ತೊಂದರೆಗಳನ್ನು ಗಣನೆಗೆ ತೆಗೆದುಕೊಂಡರೂ 84 ಲಕ್ಷ ಗ್ಯಾಲನ್ನಿನಲ್ಲಿ 50ರಿಂದ 60 ಲಕ್ಷ ಗ್ಯಾಲನ್ ನೀರು ಪ್ರತಿನಿತ್ಯ ವಿಜಾಪುರವನ್ನು ಮುಟ್ಟುವಲ್ಲಿ ಯಾವ ಅಡೆತಡೆಗಳೂ ಇಲ್ಲ. ಮಳೆಗಾಲದ ವರೆಗೆ ದಿನ ಬಿಟ್ಟು ದಿನ ನೀರು ಬಿಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ ಎಂದು ಹೆಸರು ಹೇಳಲಿಚ್ಛಿಸದ ಸಂಬಂಧಪಟ್ಟ ಅಧಿ ಕಾರಿಗಳೇ ಹೇಳುತ್ತಾರೆ. ಆದರೂ 8 ದಿನ, 9 ದಿನಕ್ಕೊಮ್ಮೆ ನೀರು ಯಾಕೆ? ಎಂಬುದು ಯಾರಿಗೂ ಅರ್ಥವಾಗಲೊಲ್ಲದು.

ಪ್ರಶಸ್ತಿ ರಾಜಕೀಯ

ವಿಜಾಪುರ ಜನರ ದುರ್ದೈವ. ಯಾರ ಶಾಪವೋ ಏನೋ, ನೀರು ಇಲ್ಲದಾಗಲೂ ಗೋಳಾಡಿದರು. ಇಂದು ನೀರು ಇದ್ದೂ ಗೋಳಾಡುವ ಪರಿಸ್ಥಿತಿ ಬಂದಿದೆ ಎನ್ನು ತ್ತಾರೆ ಹಿರಿಯರು. ರೊಚ್ಚಿಗೆದ್ದ ನಾಗರಿಕರು ಇತ್ತೀಚೆಗೆ ನಗರಸಭೆಗೆ ಮುತ್ತಿಗೆ ಹಾಕಿ ಪೀಠೋಪಕರಣ, ವಾಹನಗಳನ್ನು ರಸ್ತೆಗಿ ಳಿದು ಸುಡುವ ಮಟ್ಟಿಗೂ ಹೋಯಿತು. ಆದರೂ ಪರಿಸ್ಥಿತಿಯಲ್ಲಿ ಸುಧಾರಣೆಯಾಗಲೇ ಇಲ್ಲ.

ಈಗ ಬಂದಿರುವ ದೊಡ್ಡ ಪ್ರಶ್ನೆ ಎಂದರೆ! ವಿಜಾಪುರ ನೀರು ಸರಬರಾಜಿನ ಎರಡನೆಯ ಹಂತದ ಕಾರ್ಯ ಪೂರ್ಣತೆಯ ಪ್ರಶಸ್ತಿ ಯಾವ ಪಕ್ಷಕ್ಕೆ ಸಲ್ಲಬೇಕೆಂಬುದೇ ಇಂದಿನ ನೀರು ಸರಬರಾಜಿನಲ್ಲಿಯ ವ್ಯತ್ಯಯಕ್ಕೆ ಕಾರ ಣವೆಂದು ವಿಜಾಪುರ ನಿವಾಸಿ ರಾಜಕಾರಣಿ ಗಳೇ ಛಾಣಾಡಂಗುರವಾಗಿ ಮಾತನಾಡುತ್ತಿ ದ್ದಾರೆ. ವಾಸ್ತವದಲ್ಲಿ ಅದೊಂದು ಪ್ರತಿ ಷ್ಠೆಯ ಪ್ರಶ್ನೆಯಾಗಬಾರದಿತ್ತೆಂದೂ ಅವರೇ ವ್ಯಥೆಪಡುತ್ತಾರೆ. ವಿಜಾಪುರ ಜಿಲ್ಲೆಯ ವಿಶೇಷವಾಗಿ ನಗರದ ರಾಜಕಾರ ಣವೂ ಸ್ಪಷ್ಟವಾಗಿಲ್ಲದುದೂ ಅದಕ್ಕೆ ಕಾರ ಣವಾಗಿರಬೇಕು.

ನಗರ ನೀರು ಸರಬರಾಜಿನ ಎರಡ ನೆಯ ಹಂತದ ಕಾರ್ಯ ಪ್ರಾರಂಭವಾಗಿ ದಶಕಗಳು ಉರುಳಿದ್ದರೂ ಅದಕ್ಕೆ ವೇಗ ಬಂದುದು ರಮೇಶ ಜಿಗಜಿಣಗಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಎಂಬುದನ್ನು ಯಾರೂ ಒಪ್ಪುತ್ತಾರೆ. ಅವರು ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮನ ಒಲಿಸಿ ಅವರು ಹಣವನ್ನು ಮಂಜೂರು ಮಾಡಿಸಿ ಬಿಡುಗಡೆ ಮಾಡಿಸದಿದ್ದರೆ ಈ ಕೆಲಸ ಇನ್ನುವರೆಗೂ ಮುಗಿಯುತ್ತಿರಲಿಲ್ಲ ಎಂದೂ ಹೇಳಲಾಗುತ್ತದೆ.

ಅದಕ್ಕೆ ಸಮಾನಾಂತರವಾಗಿ ನಗರದ ಬಿಜೆಪಿ ಶಾಸಕರೂ ಒತ್ತಾಯಿಸಿದ್ದು, ಪಟ್ಟು ಹಿಡಿದದ್ದನ್ನೂ ಮರೆಯಲಾಗದು ಎನ್ನುತ್ತಾರೆ. ಈ ಮಧ್ಯೆ ಕಾಂಗ್ರೆಸ್ ಸರ್ಕಾರವಿ ದ್ದಾಗಲೂ ಈ ಕೆಲಸಕ್ಕೆ ಅತಿ ಮಹತ್ವ ಕೊಡಲಾಗಿತ್ತೆಂದು ಇಂದಿನ ಕಾಂಗ್ರೆಸ್ ಸಂಸದರ ವಾದ. ಇವೆಲ್ಲವುಗಳ ಮಧ್ಯೆ ಇಂದು ಜಿಗಜಿಣಗಿ ಲೋಕಶಕ್ತಿಗೆ ಹೋಗಿ ದ್ದಾರೆ. ಲೋಕಶಕ್ತಿ-ಬಿಜೆಪಿ ಮೈತ್ರಿಯಾಗಿದೆ. ರಾಜ್ಯದಲ್ಲಿ ಜನತಾದಳ ಅಧಿಕಾರವಿದೆ. ನಗರ ಸಭಾಧ್ಯಕ್ಷರೂ ಜನತಾದಳದವರು. ಈಗ ಒಮ್ಮೆಲೆ ಈ ಪ್ರಶಸ್ತಿಯನ್ನು ಲೋಕ ಶಕ್ತಿ-ಬಿಜೆಪಿಗೆ ಕೊಟ್ಟು ಬಿಡುವುದು ನಗರದ ಜನತಾದಳದ ಅತಿರಥರಿಗೆ ನುಂಗಲಾರದ ತುತ್ತಾಗಿದೆ ಎಂದು ನಗರ ರಾಜಕಾರಣ ತಜ್ಞರು ವಿಶ್ಲೇಷಿಸುತ್ತಾರೆ. ಹೀಗೆ ಗೂಳಿಗಳ ಕಾದಾಟದಲ್ಲಿ ಮರಗಳು ಬಡವಾಗು ತ್ತಿದ್ದಂತೆ ನಗರ ಜನತೆ ತೊಳಲಾಡುತ್ತಿ ದ್ದಾರೆ. ತೃಪ್ತರಾಗುತ್ತಿರುವ ಜನತೆ 'ಅವರ ಪ್ಪನ ಮನೆಯ ಗಂಟನ್ನು ಕೊಟ್ಟಂತೆ ಮಾಡುತ್ತಿದ್ದಾರೆ' ಎಂದು ಹೇಳಿಕೊಂಡು ಮತ್ತೆ ಎಂದಿನಂತೆ ಕೊಡಗಳನ್ನು ತೆಗೆ ದುಕೊಂಡು ಕೊಳವೆ ಬಾವಿಗಳನ್ನು ಹುಡು ಕಿಕೊಂಡು ಹೋಗುತ್ತಿರುವ ದೃಶ್ಯ ಸಾಮಾ ನ್ಯವಾಗಿದೆ.

ಕೃಷ್ಣ ಕೊಲ್ಹಾರ ಕುಲಕರ್ಣಿ

ಐತಿಹಾಸಿಕ ತೀರ್ಪು

ನೀರನ್ನು ಪೂರೈಸಲು ನಗರಸಭೆ ಕರವನ್ನು ಆಕರಣೆ ಮಾಡುವುದರಿಂದ ಅದು ಗ್ರಾಹಕರ ಸೇವೆಯೆಂದು ಪರಿಗಣಿಸಿ ವಿಜಾಪುರ ಜಿಲ್ಲಾ ಗ್ರಾಹಕರ ವೇದಿಕೆಯು ದಿನಾಂಕ ೨೭-೩-೯೯ರಂದು ಒಂದು ಐತಿಹಾಸಿಕ ತೀರ್ಪು ನೀಡಿ ಪ್ರತಿದಿನ ನೀರನ್ನು ಬಿಡುವ ತನಕ ನಗರಸಭೆಯು ನೀರಿನ ಕರವನ್ನು ಪರಿಷ್ಕೃತ ಮಾಡಲು ಬರುವುದಿಲ್ಲವೆಂದು ತೀರ್ಪು ನೀಡಿ ಒಂದು ಸಾವಿರ ರೂಪಾಯಿ ಅರ್ಜಿ ಖರ್ಚನ್ನು ನಗರಸಭೆಯು ವಾದಿಗಳಿಗೆ ನೀಡಬೇಕೆಂದು ಹೇಳಿದೆ.

ನಗರದ ದರಬಾರಗಲ್ಲಿಯ ಕೆಲವು ಜನ ಜಿಲ್ಲಾ ಗ್ರಾಹಕರ ವೇದಿಕೆಯನ್ನು ಸಂಪರ್ಕಿಸಿ ಕರ್ನಾಟಕದಲ್ಲೆಲ್ಲ ನೀರಿನ ದರವನ್ನು ಪರಿಷ್ಕೃತಗೊಳಿಸಿದಂತೆ ವಿಜಾಪುರ ನಗರದ ನೀರಿನ ದರವನ್ನು ಪರಿಷ್ಕರಿಸಲು ಅವರಿಗೆ ಹಕ್ಕಿಲ್ಲ ಯಾಕೆಂದರೆ ಅವರು ಪ್ರತಿದಿನ ನೀರನ್ನೇ ಕೊಡುವುದಿಲ್ಲ ಎಂದು ದೂರಿದ್ದರು. ಆವರ ದೂರನ್ನು ಎತ್ತಿಹಿಡಿದು ಜಿಲ್ಲಾ ಗ್ರಾಹಕರ ವೇದಿಕೆಯ ಅಧ್ಯಕ್ಷರಾದ ನಿವೃತ್ತ ನ್ಯಾಯಾಧೀಶರಾದ ಡಾ. ಕೆ.ಆರ್. ಕೊಡಗಾನೂರ ಅವರು ತಮ್ಮ ತ್ರಿಸದಸ್ಯ ಪೀಠದಿಂದ ಮೇಲಿನಂತೆ ತೀರ್ಪು ಕೊಟ್ಟಿದ್ದಾರೆ. ವಾದಿಗಳ ಪರವಾಗಿ ಆರ್.ಎ. ಕುಲಕರ್ಣಿ ವಕೀಲರೂ ಹಾಗೂ ನಗರ ಸಭೆ ಕಮೀಷನರರ ಪರವಾಗಿ ಎ.ಎಂ. ಕಟ್ಟ ವಕೀಲರೂ ವಾದಿಸಿದ್ದರು.

ವಿಜಾಪುರ ಮತ್ತು ನೀರು-5

ಶತಮಾನೋತ್ಸವ ಕಾಣುತ್ತಿರುವ ವಿಜಾಪುರ ನೀರಿನ ಸಮಸ್ಯೆ

1850ರಲ್ಲಿ ವಿಜಾಪುರ ನೀರಿನ ವ್ಯವಸ್ಥೆಯನ್ನು ಸುಧಾರಿಸಲು ಒಂದು ಅರ್ಧಹೃದಯದ ಪ್ರಯತ್ನವನ್ನು ಅಂದಿನ ಸರಕಾರ ಮಾಡಿತಷ್ಟೆ. ಮುಂದಿನ ನಾಲ್ಕು ವರುಷ ಗಳಲ್ಲಿ ಅಂದರೆ 1854ರಲ್ಲಿ ಜನಸಂಖ್ಯೆ ಕಡಿಮೆಯಿದ್ದರೂ ಬ್ರಿಟಿಶ ಸರಕಾರ ವಿಜಾಪುರವನ್ನು ನಗರವೆಂದು ಮನ್ನಿಸಿ ನಗರಸಭೆ ಯನ್ನು ರಚಿಸಲು ಅನುಮತಿ ನೀಡಿತು. ಅಂದಿನಿಂದ ನಗರದ ನೀರಿನ ಸಮಸ್ಯೆಯನ್ನು ನಗರ ಸಭೆಯ ತಲೆಗೆ ಕಟ್ಟಲಾಯಿತು.

ಹನ್ನೆರಡು ಸಾವಿರ ಜನಸಂಖ್ಯೆಗೆ ನಗರದಲ್ಲಿ ಲಭ್ಯವಿದ್ದ ಏಳೆಂಟು ಬಾವಿಗಳು ಸಾಕಾಗುತಿ ತು . ತೊರವೆ ಹಾಗು ಬೇಗಂ ತಾಲಾಬ ಕೆರೆಗಳಿಂದ ಯಾವ ಪ್ರಯೋಜನವೂ ಇರಲಿಲ್ಲ ಅವುಗಳಿಂದ ನೀರು ಕೂಡ ಬರುತಿ ರಲಿಲ್ಲ. ನಗರದ ಉಳಿದ ಸಣ್ಣ ದೊಡ್ಡ ಬಾವಿಗಳಲ್ಲಿ ಹಾಳು ಬಿದ್ದು ಅನುಪಯುಕ ವಾಗಿದ್ದವು. ಕ್ರಮೇಣ ಜನ ಸಂಖ್ಯೆ ಬೆಳೆದಂತೆಲ್ಲ ಒಂದೆರಡು ಬಾವಿಗಳನ್ನು ದುರಸಿ ಗೊಳಿಸುತ 1880-81ರವೇಳೆಗೆ ನಗರ ಸಭೆಯು 19 ಬಾವಿಗಳನ್ನು ಉಪಯೋಗಿಸುತಿ ತು . 1882-83ರ ನಗರ ಸಭೆಯ ವರದಿಯಂತೆ ಊರಿನ ನೀರಿನ ವ್ಯವಸ್ಥೆ ಚೆನ್ನಾಗಿದ್ದು ಕೇವಲ ಜುಮ್ಮಾಮಶೀದಿ ಓಣಿಯ ಜನರಿಗೆ ಮಾತ್ರ ನೀರಿನ ತುಸು ತೊಂದರೆ ಇತೆ ಂದೂ ಅದನ್ನು ಕೂಡ ಬೇಗಂ ತಾಲಾಬದ ಕೊಳವೆ ಮಾರ್ಗವನ್ನು ದುರಸಿ ಮಾಡಿ ಹಾಗು ಅಸಾರಮಹಲಿನ ಎದುರಿನ ಹೊಂಡವನ್ನು ಸ್ವಚ್ಛಮಾಡಿ ತೊಂದರೆಯನ್ನು ನಿವಾರಿಸಿತೆಂದು ಹೇಳಲಾಗಿದೆ. ಇದಕ್ಕೆ ಆರು ಸಾವಿರ ರೂಪಾಯಿ ಖರ್ಚಾಯಿತೆಂದೂ ಅಂದಿನ ಲೋಕೋಪಯೋಗಿ ಇಲಾಖೆ ಕೆಲಸ ಮಾಡಿತೆಂದೂ ನಮೂದಾಗಿದೆ.

ಆದಿಲಶಾಹಿ ಪತನದ ನಂತರ ಬೇಗಂ ತಾಲಾಬದ ಮೊಟ್ಟಮೊದಲ ದುರಸಿ ಇದಾಗಿದೆ. ಆದರೂ ಕೆರೆಗೆ ಕೈ ಹಚ್ಚಿಲ್ಲ ಎಂಬುದನ್ನು ಗಮನಿಸಿಬೇಕು ಮಾರ್ಗ ಮಧ್ಯದ ಕೊಳವೆ ಮಾರ್ಗವನ್ನು ಮಾತ್ರ ಬದಲಿಸಲಾಯಿತು ಅಂದಿನ ಜನವಸತಿಗೆ ಅಷ್ಟುಮಾತ್ರಸಾಕಾಗಿತು .

1885ರಲ್ಲಿ ವಿಜಾಪುರವು ಜಿಲ್ಲೆಯ ಪ್ರಧಾನ ಸ್ಥಳವಾದಾಗ ಮತೆ ಜನಸಂಖ್ಯೆ ಧಿಡೀರನೆ ಏರತೊಡಗಿತು ಮುಂದಿನ ಏಳೆಂಟು ವರೂಪಗಳಲ್ಲಿ ನೀರಿನ ಕೊರತೆಯ ಅರಿವು ಜನರಿಗೂ-ನಗರಸಭೆಗೂ ನಿಚ್ಚಳವಾಗಿ ಕಾಣತೊಡಗಿತು. ಈಗ ಮತೆ ಜನರ ತಲೆಯಲ್ಲಿ ಹಳೆಯ ಕೆರೆಗಳನ್ನು ದುರಸಿ ಮಾಡಿಸುವ ವಿಚಾರ ಬಂದಿತು. ಅಂತೆಯೇ ವಿಜಾಪುರ ನಗರ ಸಭೆಯು ತನ್ನ 1893ರ ವಾರ್ಷಿಕ ವರದಿಯಲ್ಲಿ ಮೊದಲ ಸಲ ಈ ಕುರಿತು ಧ್ವನಿ ಎತಿ ದೆ ಕಾಕತಾಳೀಯ ನ್ಯಾಯದಂತೆ ಸರಿಯಾಗಿ ಒಂದು ನೂರು ವರುಷಗಳ ಆನಂತರ ಮತೆ ನಗರದ ಜನತೆ ಅಂಥದೇ ಸೊಲ್ಲನ್ನು ಎತಿ ದೆ. ನಗರ ಸಭೆಯ ಅಂದಿನ ತನ್ನ ವರದಿಯಲ್ಲಿ " The restoration of the Torve aqueduct which was contruted on the persian priniciple of "Karezes" Similar to the under ground channel in use at Ahmednagar is worth of serious consideration This important work might be carried out piecemeal as funds became available if is highly improbable that the municipality will however be able to accomplish it unaided"

ಈ ರೀತಿಯ ವರದಿಗಳು ಮುಂದಿನ ಪ್ರತಿವರುಷ ಮಾಮೂಲಾಗಿ ಅದರ ಅರ್ಥ ವಿಜಾಪುರದ ನೀರಿನ ವ್ಯವಸ್ಥೆಗೆ ತಲೆಕೆಡಿಸಿಕೊಳ್ಳಹತಿ ಸರಿಯಾಗಿ ಇಂದಿಗೆ ನೂರುವರುಷಗಳಾದುವೆಂದು ತಿಳಿದರೆ, ನೀರು ತಲೆ ನೋವಿನ ಶತಮಾನೋತ್ಸವವನ್ನು ವಿಜಾಪುರ ಜನರು ಈ ವರುಷ ಅಮ್ಮಾರಿಯಿಂದ ಆಚರಿಸಬಹುದಾಗಿದೆ. ಅದರಲ್ಲಿ ಮಧ್ಯದ ಸುಮಾರು ನಲವತು ವರೂಪ ಮಾತ್ರ ಅಪವಾದವೆನಿಸಿದೆ. ಅದನ್ನು ಸಾಧಿಸಲು ನಗರದ ಜನರು ಮತೆ ಕಾಲು ಶತಮಾನ ಕಾಯಬೇಕಾಯಿತು.

ಈ ಶತಮಾನದ ಮೊದಲವರೂಪದಿಂದ ಸುಮಾರು ಹತು ವರೂಪಗಳ ವರೆಗೆ ಅಂದರೆ 1901ರಿಂದ 1910 ಮಧ್ಯ ತಾಜ ಬಾವಡಿಯೊಂದನ್ನು ಅದಕ್ಕಾಗಿ ಅಂದಿನ ಸರಕಾರ ಹಾಗೂ ನಗರ ಸಭೆಯು ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲೇಬೇಕಾದ ಪರಿಸ್ಥಿತಿ ಒದಗಿತು ಆಗ ಮತೆ ಹಳೆಯ ಕಡತಗಳನ್ನು ಹೊರ ತೆಗೆದು ಅಂದಿನ ಮುಂಬಯಿ ಸರಕಾರದ ಸ್ಯಾನಿಟರಿ ಇಂಜನಿಯರಾದ ಶ್ರೀ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರಿಗೆ ಒಂದು ದಾರಿ ಹುಡುಕಲು ಹೇಳಿ ಅವರನ್ನು ವಿಜಾಪುರಕ್ಕೆ ಕಳಿಸಲಾಯಿತು ಅವರು 1907ರ ಡಿಶೆಂಬರದಲ್ಲಿ ಶ್ರೀ ವಿಶ್ವೇರಯ್ಯನವರು ವಿಜಾಪುರದ ಹಳೆಯ ಎಲ್ಲ ಕೆರೆಗಳನ್ನು ಸ್ವತಃ ಹೋಗಿ ಪರೀಕ್ಷಿಸಿದರು.

ಹಳೆಯ ಕೆಲೆಗಳ ದುರಸಿ ವ್ಯರ್ಥ ವೆಚ್ಚವೆಂದು ಪರಿಗಣಿಸಿ ವಿಜಾಪುರದ ಅಂದಿನ ಜನಸಂಖ್ಯೆಗೆ ಅನುಕೂಲವಾಗುವಂತೆ ಒಂದು ಹೊಸ ಯೋಜನೆಯನ್ನೆ ತಯಾರಿಸಿದರು.

ಶ್ರೀ ವಿಶ್ವೇಶ್ವರಯ್ಯನವರು ಅಫಜಪುರದ ಕೆರೆಯ ಹತಿ ರ ಅದೇ ನೀರು ಶೇಖರಣಾಮೂಲಗಳನ್ನು ಉಪಯೋಗಿಸಿಕೊಂಡು ಇಂದಿನ ನಗರದ ನೀರು ಸರಬರಾಜಿನ ಮುಖ್ಯ ಆಧಾರವಾಗಿರುವ ಭೂತನಾಳ ಕೆರೆಯ ಯೋಜನೆಯನ್ನು ಹಾಕಿ ಕೊಟ್ಟರು ಅದಕ್ಕೆ ತಗಲುವ ವೆಚ್ಚ ನಾಲ್ಕು ಲಕ್ಷರೂಪಾಯಿಗಳೆಂದು ಅಂದಾಜು ಮಾಡಿ ಕೆಲಸ ಪ್ರಾರಂಭಿಸಿಯೇ ಬಿಟ್ಟರು. ನಾಲ್ಕು ವರೂಪ ಯೋಜನೆ ಕೊ ನೆಗೊ ಂಡಾಗ ಅದಕ್ಕೆ ತಗಲಿದ ಒಟ್ಟು ವೆಚ್ಚ 6,81,956 ರೂಪಾಯಿಗಳು. 1914ರಲ್ಲಿ ಯೋಜನೆ ಪೂರ್ತಿಗೊಂಡು ನಗರದ ಓಣಿಗಳಲ್ಲೆಲ್ಲ ನಲ್ಲಿ ಮೂಲಕ ನೀರು ಹರಿಯಿತು. ಅಂದಿನ . ನಗರದ ಜನಸಂಖ್ಯೆ 23 ಸಾವಿರದಷ್ಟಿತು ಭೂತನಾಳ ಕೆರೆಯ ನೀರು ಸಂಗ್ರಹಣಾ ಕ್ಷಮತೆ ಅದರ ಮೂರು ಪಟ್ಟು ಎಂದರೆ ಸುಮಾರು ಎಪ್ಪತ್ತು ಸಾವಿರ ಜನರಿಗೆ ಸಾಲುವಷ್ಟು ನೀರನ್ನು ಪೂರೈಸಬಹುದಾಗಿತು .

1914ರ ಫೇಬ್ರುವರಿ ಏಳು ವಿಜಾಪುರದ ಜನತೆಗೆ ಅವಿಸ್ಮರಣೀಯವಾಗಿತು . ಅಂದು ಹೊ ಸದಾಗಿ ಜೋಡಿಸಿದ ಸಾರ್ವಜನಿಕ ಪ್ರತಿಷ್ಠಿತರ ಮನೆಗಳಲ್ಲಿ ನೀರು ಹರಿದಾಗ ಜನತೆ ಜನಪ್ರಿಯ ವಾರಪತ್ರಿಕೆ ಕರ್ನಾಟಕ ವೈಭವದಲ್ಲಿ ಅದರ ಸುಂದರ ಚಿತ್ರಣ ಬಂದಿದೆ. ಕೆಲವರು ಈ ಸಂದರ್ಭವನ್ನು ಭಾವಗೀತೆಗಳ ಮುಖಾಂತರವೂ ವರ್ಣಿಸಿದ್ದಾರೆ. ಅಂದಿನಿಂದ ಮುಂದಿನ ಸುಮಾರು 40 ವರೂಪ ನಗರದ ಜನತೆ ಪ್ರತಿದಿನ ಎರಡು ಹೊತು ಬೆಳಿಗ್ಗೆ ಸಾಯಾಂಕಾಲ ತಪ್ಪದೆ ಬಂದು ಗಂಟೆಗೂ ಮಿಕ್ಕಿ ನೀರನ್ನು ಪಡೆಯುತಿ ದ್ದರು. ಆ ಸುಖವನ್ನು ಅನುಭವಿಸಿದ ಅನೇಕ ಜನರು ಇನ್ನೂ ನಗರದಲ್ಲಿ ಇದ್ದಾರೆ. 1961ರಲ್ಲಿ ನಗರದ ಜನಸಂಖ್ಯೆ 70 ಸಾವಿರ ದಾಟಿದಾಗ ಮತೆ ನೀರಿನ ಸಮಸ್ಯೆ ಉದ್ಭವಿಸಿತು ಆದಾಗಲೇ ದೇಶ ಸ್ವತಂತ್ರವಾಗಿ ಭಾಷಾವಾರು ಪ್ರಾಂತಗಳ ರಚನೆಯಾಗಿ ವಿಜಾಪುರವು ಕರ್ನಾಟಕದಲ್ಲಿ ಸೇರಿತು . ಈಗ ಪ್ರಜೆಗಳ ರಾಜ್ಯ ನಮ್ಮ ಪ್ರತಿ ನಿಧಿಗಳಿಂದ ಸಮಸ್ಯೆಗೆ ಸುಲಭ ಪರಿಹಾರವೆಂದು ಕನಸುಕಾಣುತಿ ದ ಕಾಲ ! ಇದಕ್ಕೆ ಕಳಸವೆಂಬಂತೆ 1962ರಲ್ಲಿ ಜಿಲ್ಲೆಯ ಆಲಮಟ್ಟಿ ಪತಿ ರ ಕೃಷ್ಣಗೆ ಬೃಹತ್ ಆಣೆಕಟ್ಟನ್ನು ಅಡಿಗಲ್ಲನ್ನು ಸ್ವರ್ಗೀಯ ಲಾಲಬಹಾದೂರ ಶಾಸಿ ್ರಗಳು ಇಟ್ಟಿದ್ದರು. ವಿಜಾರುರ ಹಾಗೂ ಜಿಲ್ಲೆಯ ಜನತೆಗೆ ಸ್ವರ್ಗ ಮೂರೇ ಗೇಣು ! ಆದರೆ ಆ ಮೂರು ಗೇಣನ್ನು ಮಾತ್ರ ಈ ಮೂವತು ವರೂಪಗಳ ಅನಂತರವೂ ಮುಟ್ಟಲಾಗಿಲ್ಲವೆಂದು ಇಂದು ಇತಿಹಾಸ

(ಸಶೇಷ)

ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ

ವಿಜಾಪುರ ಮತ್ತು ನೀರು-7

ಈಡೇರದ ಆಶ್ವಾಸನೆ

ವಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಕೊಲ್ಹಾರ ಹತ್ತಿರ ಮತ್ತೊಂದು ದೊಡ್ಡ ಜಾಕ್‌ವೆಲ್ಲ, ದೊಡ್ಡ ಕೊಳವೆಯಮಾರ್ಗ, ಹೊನಗನಹಳ್ಳಿಯ ಹತ್ತಿರ ಫಿಲ್ಟರ ಬೆಡ್, ವಿಜಾಪುರ ನಗರದಲ್ಲಿ ಓವರಹೆಡ್ ಟ್ಯಾಂಕ ಇಷ್ಟೆಲ್ಲ ಈಗ ನಗರದವರಿಗೆ ಸಿದ್ಧವಾಗುತ್ತಿದೆ. ಇದರಿಂದ ನೀರಿನ ಸಮಸ್ಯೆ ಪರಿಹಾರವಾಗುತ್ತದೆಂದು ಸರಕಾರಿ ಅಧಿಕಾರಿಗಳು ಭರವಸೆ ಕೊಡುತ್ತಿದ್ದಾರೆ. ರಾಜಕಾರಣಿಗಳಂತು ಕಳೆದ ನಾಲ್ಕತ್ತು ವರುಷಗಳಿಂದ ವಿಜಾಪುರದ ಜನರಿಗೆ ತಮ್ಮ ಆಶ್ವಾಸನೆಗಳಿಂದ ನೀರನ್ನು ಕುಡಿಸುತ್ತಲೇ ಇದ್ದಾರೆ. ಆಶ್ಚರ್ಯದ ಸಂಗತಿ ಎಂದರೆ ನಗರ ಒಂದೇ ಏಕೆ ? ಇಡೀ ಜಿಲ್ಲೆಯಲ್ಲಿ ಎಲ್ಲಿಯೇ ಚುನಾವಣೆಗಳಾಗಲಿ ಅದು ಸ್ಥಳೀಯ ಮಟ್ಟದ್ದಾಗಿರಲಿ, ರಾಜ್ಯ ಮಟ್ಟದ್ದಾಗಿರಲಿ, ರಾಷ್ಟ್ರಮಟ್ಟದ್ದಾಗಿರಲಿ ನೀರು ಇಲ್ಲಿ ಪ್ರಾಮುಖ್ಯತೆ ಪಡೆದಿರುತ್ತದೆ. ಆಲಿಮಟ್ಟಿಯ ಕೃಷ್ಣಾ ಮೇಲ್ದಂಡೆ ಯೋಜನೆ, ಮುಳವಾಡ ಯಾತ ನೀರಾವರಿ ಯೋಜನೆ ವಿಜಾಪುರ ನೀರಿನ ಸಮಸ್ಯೆ ಇವೆಲ್ಲವುಗಳನ್ನು ಇಲ್ಲಿಯ ರಾಜಕಾರಣಿಗಳು ಪ್ರತಿ ಚುನಾವಣೆಯಲ್ಲೂ ಬಗೆಹರಿಸುವ ಆಶ್ವಾಸನೆ ನೀಡುತ್ತಲೇ ಬಂದಿದ್ದಾರೆ. ಆದರೆ ಇವು ಒಂದೂ ಪೂರ್ತಿಗೊಂಡಿಲ್ಲ. ಜನ ಮತ್ತು ಅವರ ಮಾತುಗಳನ್ನು ಕೇಳಿದ್ದಾರೆ ಈಗಲೂ ಕೇಳುತ್ತಿದ್ದಾರೆ. ಜನ ತುಂಬ ಸಹನಶೀಲರು ವಿಜಾಪುರದವರಿಗೆ ದಿನಕ್ಕೊಮ್ಮೆ ಬಿಡುತ್ತಿದ್ದ ನೀರು ಎರಡುದಿನಕ್ಕೊಮ್ಮೆ ಆಯಿತು ಅದು ಮೂರಾಯಿತು, ನಾಲ್ಕಾಯಿತು ಈಗ ಆರು-ಹತ್ತು ದಿನಗಳಿಗೆ ಒಮ್ಮೆ ಅರ್ಧಗಂಟೆಯಿಂದ ನಾಲ್ಕತ್ತು ನಿಮಿಷ ಮಾತ್ರ ಅದೂ ಬೇಕೆಂದಾಗ, ಇಂಥದೇ ಸಮಯವೆಂದು ನಿಗದಿಯಾಗಿಲ್ಲ ಅದು ಸರಿರಾತ್ರಿಯಲ್ಲಿ ಸುರಿಯುವದು ಇಲ್ಲ, ಮಧ್ಯಾಹ್ನದ ಹನ್ನೆರಡು ಗಂಟೆಗೂ ಆದೀತು ಅಂದು ಮನೆಯ ಒಂದು ವ್ಯಕ್ತಿ ದಿನದ 24 ಗಂಟೆ ನಲ್ಲಿಯನ್ನು ಕಾಯುತ್ತ ಕುಳಿತುಕೊಳ್ಳಬೇಕು ! ಇದು ಇಲ್ಲಿಯ ಪರಿಸ್ಥಿತಿ. ಅದನ್ನು ಇಲ್ಲಿಯ ಜನ ಆನುವಂಶಕ ಬಳುವಳಿ ಎಂದು ಸ್ವೀಕರಿಸಿದ್ದಾರೆ. ಅಧಿಕಾರಿಗಳ, ರಾಜಕಾರಣಿಗಳ ಮಾತನ್ನು ಅವರು ನಂಬವದಿಲ್ಲ. ಈ ಪರಿಸ್ಥಿತಿಗೆ ಯಾರು ಕಾರಣ ಎಂಬುದನ್ನು ಈಗ ಅಧಿಕಾರಿಗಳು ರಾಜಕಾರಣಿಗಳು ಹಾಗೂ ನಗರದ ಜನರು ವಿಚಾರಿಸಬೇಕಾಗಿದೆ. ಯೋಜನೆ ತಪ್ಪಿದ್ದು ಎಲ್ಲಿ ? ಅದರ ಸುಧಾರಣೆಗೆ ಸಾಧ್ಯವೆ ? ಎಂಬುದನ್ನು ಕಂಡು ಕೊಳ್ಳಬೇಕಾಗಿದೆ.

ನಮ್ಮ ದಿಗಳು ಋತುಮಾನ ನದಿಗಳೆಂಬುದನ್ನು ಎಲ್ಲರೂ ಬಲ್ಲರು. ಮಳೆಗಾಲದ ಸುಮಾರು ನಾಲ್ಕೈದು ತಿಂಗಳು ಮಾತ್ರ ತುಂಬಿ ಹರಿದು ಉಳಿದ ಏಳು ತಿಂಗಳು ಒಣಗುತ್ತಾ ಹೋಗಿ ಕೊನೆಯ ಮೂರು ತಿಂಗಳು ಪೂರ್ತಿ ಒಣಗುತ್ತವೆ. ಒಮ್ಮೊಮ್ಮೆ ನದಿಯ ಎಡಬಲದ ಹಳ್ಳಿಗಳ ದನಕರುಗಳಿಗೆ, ಜನರಿಗೇ ಕುಡಿಯಲು ನೀರು ದೊರೆಯುವುದಿಲ್ಲ. ಇದು ಗೊತ್ತಿದ್ದು ವಿಜಾಪುರದ ಜನ ಇಂದಗೂ ಕೃಷ್ಣಾ ನದಿಯನ್ನೆ ಅವಲಂಬಿಸುತ್ತಿದ್ದಾರೆ. ಅವರು ಹಾಗೆ ನದಿಯನ್ನು ಅವಲಂಬಿಸುವುದು ತಪ್ಪೆಂದು ಹೇಳಲಾಗದು ಆದರೆ ಪೂರ್ತಿ ಹನ್ನೆರಡು ತಿಂಗಳೂ ಅದನ್ನು ಅವಲಂಬಿಸುವುದು ಮಾತ್ರ ತಪ್ಪು. ಅಂತೆಯೇ ಪ್ರತಿ ಬೇಸಿಗೆಯಲ್ಲೂ ಕೊಯ್ನಾ ಆಣೆಕಟ್ಟಿನ ನೀರನ್ನು ಬಿಡಲು ನಮ್ಮ ಜನ ಹಲ್ಲು ಕಿರಿದು ಮಹಾ ರಾಷ್ಟ್ರೀಯರ ಎದುರು ನಿಲ್ಲುತ್ತಾರೆ. ಪ್ರತಿ ವರುಷ ಅದಕ್ಕೆಂದೆ ಲಕ್ಷಾಂತರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಅವರು ಅಳೆದು-ಸುರಿದು ಬಿಡುತ್ತೇವೆಂದು ಹೇಳುತ್ತ ಅವರು ನೀರು ಬಿಡುವ ಹೊತ್ತಿಗೆ ಇಲ್ಲಿಯ ಜನರು ಪ್ರಾಣ ಜಿಡುವ ಪ್ರಸಂಗ ಬಂದಿರುತ್ತದೆ. ಇಷ್ಟಾಗಿಯೂ ಅವರು ಬಿಟ್ಟ ನೀರು ಎಲ್ಲ ಇಲ್ಲಿಯವರೆಗೆ ಬಂದು ಮುಟ್ಟುವುದಿಲ್ಲ ಕೂಡ ಪ್ರತಿಶತ ಹತ್ತರಷ್ಟು ಬಂದು ತಲುಪಿದರೆ ಅದೇ ಒಂದು ಭಾಗ್ಯ ಉಳಿದ ನೀರು ಮಾರ್ಗ ಮಧ್ಯದಲ್ಲಿಯೇ ಉಪಯೋಗವಾಗಿ ಬಿಡುತ್ತದೆ. ಇಲ್ಲವೆ ಒಣಗಿದ ನದಿಯ ಪಾತ್ರಕ್ಕೆ ಹೋಗುತ್ತದೆ. ಅಂದರೆ ನಮ್ಮ ಸರಕಾರ ಈ ನೀರಿಗೆ ಕೊಟ್ಟ 60 ಲಕ್ಷರೂಪಾಯಿಗಳಲ್ಲಿ ಬಂದು ಸೇರುತ್ತದೆ. ಆದರೆ ಅವರು ನೀರಿಗಾಗಿ ಮಾಡಿದ ಖರ್ಚು ಅರವತ್ತು ಲಕ್ಷ ಎಂದು ಹೇಳಲಾಗುತ್ತದೆ. ಇದು ಒಂದು ಕಾರಣವಾದರೆ, ಇನ್ನೊಂದು ಕಾರಣ ಈವರೆಗೆ ವಿಜಾಪುರದ ನೀರಿನ ಸಮಸ್ಯೆಗೆ ಕೃಷ್ಣೆಯಿಂದ ಪಡೆದ ಪರಿಹಾರದ ಪ್ರಯತ್ನವೆಲ್ಲ ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳಗಡೆ ಪ್ರದೇಶದಲ್ಲಿಯೇ ನಡೆದಿದೆ ಕಟ್ಟಿದ-ಕಟ್ಟಲಾಗುವ ಎಲ್ಲ ಜಾಕ್‌ವೆಲ್ಲಗಳು ನಾಳೆ ನಿಲ್ಲಿಸುವ ಹಿನ್ನೀರಿನಲ್ಲಿ ಮುಳುಗುತ್ತವೆ. ಇದು ಗೊತ್ತಿದ್ದು ಈ ಜನ ಕೋಟಿಗಟ್ಟಲೆ ಹಣ ಯಾಕೆ ಖರ್ಚುಮಾಡುತ್ತಿದ್ದಾರೆ. ಎಂಬುದರ ಅರ್ಥ ಆಗುವುದಿಲ್ಲ.

ಮೂರನೆಯದಾಗಿ ವಿಜಾಪುರದವರಿಗಾಗಿ ಸಂಗ್ರಹ ಮಾಡಿದಜ ನೀರು ವಿಜಾಪುರದಿಂದ 50 ಕಿಲೋಮೀಟರು ದೂರ ಇದೆ. ಈ ನೀರು ಬೇಕು ಎಂಬುದರ ಅರಿವು ಅವಶ್ಯವಾಗಿದೆ. ಉದಾಹರಣೆಗೆ ಕೊಲ್ಹಾರದ ಬ್ಯಾರೇಜ್‌ದಲ್ಲಿಯ ನೀರನ್ನು ಯಾರಿಗೂ ಬಿಡುವುದಿಲ್ಲ ಎಂದು ಅಲ್ಲಿ ಮೂರುತಿಂಗಳು ಪೋಲೀಸ ಕಾವಲನ್ನು ಹಾಕಲಾಗುತ್ತದೆ. ಪ್ರಜಾಪ್ರಭುತ್ವ ಹಾಗೂ ಮಾನವೀಯತೆಯ ದೃಷ್ಟಿಯಿಂದ ಇದು ಸಾಧುವೆ ? ಹಾಗೆ ನೋಡಿದರೆ ಕೊಲ್ಹಾರದ ಬ್ಯಾರೇಜ್ ವಿಜಾಪುರದವರಿಗೇ ಎಂದು ನಿಗದಿ ಪಡಿಸುವುದೂ ಸಾಧ್ಯವಿಲ್ಲ-ಯಾಕೆಂದರೆ ಸುತ್ತಲಿನ ಹಳ್ಳಿಗಳಿಗೆ ನೀರಾವರಿಗಾಗಿ ಇದೇ ಸರಕಾರ ಲಕ್ಷಗಟ್ಟಲೆ ಪಂಪಸೆಟ್ಟುಗಳಿಗೆ ಪರವಾನಗಿ ಕೊಟ್ಟಿದೆ. ಯಾವತ್ತೋ ಒಂದು ದಿನ ಬಂದು ಇಂದಿನಿಂದ ನೀವು ನೀರು ತೆಗೆದುಕೊಳ್ಳಬೇಡಿರಿ ಎಂದರೆ ಆದೀತೆ ? ಆ ರೈತನ ದುಡಿಮೆ ಹಾಗೂ ಆತನ ನಷ್ಟಕ್ಕೆ ಹೊಣೆ ಯಾರು ? ಹೋಗಲಿ ಒಂದು ತುರ್ತು ಪರಿಸ್ಥಿತಿಯಲ್ಲಿ ಅದನ್ನು ಒಪ್ಪೋಣ ಆದರೆ ಅದೇ ತುರ್ತು ಪರಿಸ್ಥಿತಿ ಸುತ್ತಲಿನ ಹಳ್ಳಿಗಳಿಗೂ ಇರುತ್ತದಲ್ಲ ಅವರು ಏನು ಮಾಡಬೇಕು ? ಅವರ ನೀರಿನ ವ್ಯವಸ್ಥೆಯನ್ನು ಇದೇ ಸರಕಾರ ಮಾಡಬೇಕಲ್ಲ ! ಅವರು ಮಾಡದಿದ್ದಾಗ ಜನ ತಾವೇ ಅದರ ವ್ಯವಸ್ಥೆ ಮಾಡಕೊಂಡು ಬಿಡುತ್ತಾರೆ. ಹಾಗೇ ಆಯಿತು ಬ್ಯಾರರೇಜಿನ ಕೆಳಗಡೆ ಬರುವ ಹಳ್ಳಿಗಳಿಗೆ ಒಂದು ತೊಟ್ಟು ನೀರು ಸಿಗದಿದ್ದಾಗ ಒಂದು ದಿನ ಬಂದು ಬ್ಯಾರೇಜಿನ ಬಾಗಿಲುಗಳನ್ನು ತೆರೆದು ಬಿಟ್ಟರು ಅವರ ಮೇಲೆ ವ್ಯಾಜ್ಯ ಹೂಡಬೇಕೆ ? ಪೋಲೀಸು ಕಾವಲಿನಲ್ಲಿ ನೀರನ್ನು ಕಾಯಬೇಕೆ ? ವ್ಯರ್ಥ ಮಾನವಶಕ್ತಿ ಹಾಗೂ ಹಣದ ಖರ್ಚು ಈ ನಾಲ್ಕಾರು ವರುಷಗಳಿಂದ ನಡೆದೇ ಇದೆ. ಇದು ಇನ್ನು ಎಷ್ಟು ದಿನ ಸಾಗಬೇಕು. ವಿಜಾಪುರದ ನೀರಿನ ವ್ಯವಸ್ಥೆಗೆ ಒಂದು ಶಾಶ್ವತ ಪರಿಹಾರದ ಅಗತ್ಯ ಇದೆ. ಅದು ಯಾವಕಾಲಕ್ಕೂ ಯಾರನ್ನೂ ಅವಲಂಬಿಸಬಾರದು ಯಾವ ಅಡೆ ತಡೆಗಳೂ ಅಲ್ಲಿ ಬರಬಾರದು ಅಂಥದೊಂದು ವ್ಯವಸ್ಥೆ ಆಗಬೇಕು ಆಗ ವಿಜಾಪುರದ ಜನ ನಿಶ್ಚಿಂತೆಯಿಂದ ತಮ್ಮ ನೀರನ್ನು ತಮ್ಮ ಊರ ಹತ್ತಿರ ಸಂಗ್ರಹಿಸಬೇಕು 50 ಕಿಲೋಮೀಟರು ದೂರದ ಕೊಲ್ಹಾರದಲ್ಲಿಯೋ ಇನ್ನೆಲ್ಲಿಯೇ ನೀರನ್ನು ಸಂಗ್ರಹಿಸಿ ಅದು ವಿಜಾಪುರದ ಜನರ ನೀರು ಅದನ್ನು ಯಾರು ಮುಟ್ಟಬಾರದು ಎಂದು ಹೇಳಿದರೆ ಅದರಂಥ ಅರ್ಥ ಹೀನ ಮಾತುಗಳು ಇನ್ನು ಯಾವವೂ ಇರಲಾರವು ವಿಜಾಪುರದಲ್ಲಿ ಮನುಷ್ಯರಿದ್ದಂತೆ ಕೊಲ್ಹಾರದಲ್ಲಿ ಉಳಿದ ಹಳ್ಳಿಗಳಲ್ಲಿ ಇರುವವರೂ ಮನುಷ್ಯರೇ ಅಲ್ಲವೆ ತಮ್ಮ ಊರ ಮುಂದೆ ಇರುವ ನೀರಿನ ಮೇಲೆ ಅವರ ಹಕ್ಕು ಇಲ್ಲ ಎಂದರೆ ಯಾರಾದರೂ ನಂಬಬಹುದೆ ? ಸರಕರಕ್ಕೆ ಇಷ್ಟು ಅರ್ಥವಾಗ ಬೇಡವೆ ? ಹಾಗಾದರೆ ಇದಕ್ಕೆ ಪರಿಹಾರ ಏನು ?

(ಸಶೇಷ)